ಅದೇರೀತಿಯಲ್ಲಿ ನೀವು ಬಡ್ಜೆಟ್‌ನಲ್ಲಿ ಎಕ್ಸ್‌ಪ್ರೆಷನ್ ಕೊಟ್ಟಿರತಕ್ಕಂಥದ್ದು ಯಾವುದಕ್ಕೆ ಎಂಬುದನ್ನು ಹೇಳಬಯಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಅದು ಏನೆಂದರೆ ನಾಲ್ಕು ಗಂಟೆಗೆ ಕುದುರೆ ಮೋತಿ ಪ್ರಕರಣವನ್ನು ಚರ್ಚೆಗೆ ತೆಗೆದುಕೊಳ್ಳುವುದು ಇತ್ತು. ಆದಕಾರಣ ಮಾನ್ಯ ವಿರೋಧಪಕ್ಷದ ನಾಯಕರು ಯಾವಾಗ ತಮ್ಮ ಭಾಷಣವನ್ನು ಮುಗಿಸುತ್ತಾರೋ

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಈಗ ಕುದುರೆಮೋತಿ ಪ್ರಕರಣವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ತಾವು ತಮ್ಮ ಭಾಷಣವನ್ನು ನಾಳೆಯದಿವಸ ಮುಂದುವರಿಸಬಹುದು.

ನಿಯಮ 68ರ ಮೇರೆಗೆ ಚರ್ಚೆ

ವಿಷಯ.—ರಾಯಚೂರು ಜಿಲ್ಲೆಯ ಯಲ್ಬುರ್ಗದ ಕುದುರೆಮೋತಿ ಪ್ರಕರಣ.

ಅಧ್ಯಕ್ಷರು.—ನಿಯಮ 68ರ ಮೇಲಿನ ಚರ್ಚೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ).—ಸನ್ಮಾನ್ಯ ಅಧ್ಯಕ್ಷರೇ, ಸುಮಾರು ಒಂದೊವರೆ ತಿಂಗಳ ಹಿಂದೆ ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆ ಯಲಬುರ್ಗಾ ತಾಲ್ಲೂಕು ಕುದುರೆ ಮೋತಿಯಲ್ಲಿ ನಡೆದಂಥ ಪ್ರಕರಣ ನಿಜವಾಗಿಯೂ ಕೂಡ ಮಹಿಳೆಯರಿಗೆ ಒಂದುರೀತಿಯಾದ ದಿಗ್‌ಭ್ರಾಂತಿಯನ್ನುಂಟುಮಾಡಿದೆ. ಉತ್ತರ ಕರ್ನಾಟಕದಲ್ಲಿ ಮೋತಿ ಎಂದರೆ ಮುಖ ಎಂದು ಅರ್ಥ. ಈ ಒಂದು ಪ್ರಕರಣದಿಂದ ಮಹಿಳೆಯರಿಗೆ ಮುಖ ಎತ್ತದಂತಾಗಿರುತ್ತದೆ. ಈವತ್ತಿಗೂ ಕಲಿಯುಗದಲ್ಲಿ ಇಂಥ ದುಶ್ಯಾಸನರು ಅಲ್ಲಿ ಇಲ್ಲಿ ಇದ್ದಾರೆಂದು ಈ ಒಂದು ಪ್ರಕರಣದಿಂದ ಕಂಡುಬರುತ್ತಿರತಕ್ಕಂಥದ್ದು ಬಹಳ ಶೋಚನೀಯವಾದ ಪರಿಸ್ಥಿತಿಯಾಗಿರುತ್ತದೆ. ಈಗಾಗಲೇ ಈ ವಿಷಯದ ಬಗ್ಗೆ ಮೇಲೆ ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿ ನಮ್ಮ ಗೃಹಸಚಿವರಾದ ಶ್ರೀಮಾನ್ ರಾಚಯ್ಯನವರು ಇದರ ಬಗ್ಗೆ ಪ್ರತ್ಯಕ್ಷವಾಗಿ ನೋಡಿಕೊಂಡು ಬರುವುದಕ್ಕೆ ಎರಡೂ ಸದನದ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ಆಯ್ಕೆಮಾಡಿ ಸ್ಥಳಕ್ಕೆ ಹೋಗಿ ನೋಡಿಕೊಂಡು ಬರುವುದಕ್ಕೆ ಏರ್ಪಾಡು ಮಾಡುತ್ತೇನೆಂದು ಹೇಳಿದ್ದಾರೆ. ಬಹುಶಃ ಈ ಪ್ರಕರಣದಲ್ಲಿ ಈಗಾಗಲೇ ನಮ್ಮ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಬಯಸುವುದಿಲ್ಲ. ನಾನು ಮಹಿಳೆಗಾಗಿ ಹೆಚ್ಚಿಗೆ ಹೇಳಿದರೂ ಕೂಡ ಮನಸ್ಸಿಗೆ ಬಹಳ ನೋವುಂಟಾಗುತ್ತದೆ. ಆದ್ದರಿಂದ ಇದರಲ್ಲಿ ಯಾರು ತಪ್ಪು ಮಾಡಿದ್ದಾರೋ ಅವರಿಗೆ ರಾಜಕೀಯ ಹಿನ್ನೆಲೆಯಿರಲಿ, ಮಠಾಧಿಪತಿಗಳ ಬೆಂಬಲ ಇರಲಿ, ಊರಿನ ಪ್ರಮುಖರ ಬೆಂಬಲ ಇರಲಿ–ಯಾವುದೇ ಇದ್ದರೂ ತಪ್ಪಿತಸ್ಥರಿಗೆ ಇದು ಖಂಡನೀಯ, ಅವರಿಗೆ ಕಠಿಣವಾದ ಶಿಕ್ಷೆ ಆಗಲೇಬೇಕು. ಕೇವಲ ಬಿಸಿ ಇರುವಾಗ ಚರ್ಚೆಮಾಡಿ, ಒಂದು ಸಮಿತಿಯನ್ನು ಮಾಡಿ ರಿಪೋರ್ಟ್ ಮಂಡನೆ ಮಾಡಿ ಅಲ್ಲಿಗೆ ಮುಕ್ತಾಯ ಮಾಡುವಂತಾಗಬಾರದು. ಏತಕ್ಕೆಂದರೆ, ಇದೇರೀತಿಯಲ್ಲಿ ಈ ಸದನದಲ್ಲಿ ಅನೇಕ ಪ್ರಕರಣಗಳು ನಡೆದುಹೋಗಿರುತ್ತವೆ. ಹಿಂದೆ ಬೆಂಗಳೂರಿನಲ್ಲಿ ವೀನಸ್ ಸರ್ಕಸ್ ದುರಂತ ನಡೆದಾಗಲೂ ಕೂಡ ಈ ಸದನದಲ್ಲಿ ಚರ್ಚೆಯಾಗಿ, ಅದಕ್ಕೆ ಒಂದು ಸಮಿತಿಯನ್ನು ಮಾಡಿ, ಅದು ಒಂದು ತೀರ್ಮಾನವನ್ನು ಕೊಟ್ಟಮೇಲೆ ಅದು ಏನಾಯಿತೋ ಗೊತ್ತಾಗಲಿಲ್ಲ. ಅದೇರೀತಿಯಲ್ಲಿ ಬಿಸಿಯಲ್ಲಿ ಚರ್ಚೆಯಾಗಿ ಮತ್ತೆ ಮರೆಯುವಂತಾಗುವುದು ಬೇಡ. ಕರ್ನಾಟಕದಲ್ಲಿ ಸುಭದ್ರವಾದ ಸರ್ಕಾರವಿದ್ದು ಈ ಸರ್ಕಾರ ಮಹಿಳೆಯರ ಪರವಾಗಿ ಇರುತ್ತದೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮಹಿಳೆಯರು ಸಾಕಷ್ಟು ನಿರ್ಭೀತಿಯಾಗಿ ಓಡಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿರತಕ್ಕಂಥ ಪರಿಸ್ಥಿತಿಯಲ್ಲಿ ಇಂಥ ಒಂದು ಅತ್ಯಾಚಾರ, ಅನ್ಯಾಯ ನಡೆದಿರತಕ್ಕಂಥಾದ್ದು ಬಹಳ ದುಃಖಕರವಾದ ಸಂಗತಿಯಾಗಿದೆ. ಈಗಾಗಲೇ ಪೋಲೀಸ್ ತನಿಖೆ ನಡದಿರುತ್ತದೆ. ಇದು ಒಂದು ಗಂಭೀರವಾದ ಪ್ರಕರಣವಾಗಿರುವುದರಿಂದ ಇದರ ಬಗ್ಗೆ ನ್ಯಾಯಾಂಗದ ತನಿಖೆಯೇ ಆಗಬೇಕಾಗಿರುತ್ತದೆಂದು ಹೇಳತಕ್ಕಂಥ ಸಂದರ್ಭದಲ್ಲಿ ಮಹಿಳೆಯವರು ಈ ವಿಷಯದಲ್ಲಿ ಬಹಳವಾಗಿ ಎದುರುನೋಡುತ್ತಿರುತ್ತಾರೆ. ಇದರ ಬಗ್ಗೆ ಯಾವರೀತಿ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ, ಇದಕ್ಕೆ ಕಾರಣರಾದಂಥವರಿಗೆ ಯಾವ ರೀತಿ ಶಿಕ್ಷೆಯನ್ನು ಕೊಡುತ್ತಾರೆಂಬುದನ್ನು ಎದುರುನೋಡುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ, ಈ ಸಭೆಯಲ್ಲಿ ತಮ್ಮ ಮುಖಾಂತರ ನಮ್ಮ ಸರ್ಕಾರಕ್ಕೆ ಬಿನ್ನವಿಸಿಕೊಳ್ಳುವುದೇನೆಂದರೆ, ಇದನ್ನು ಅಷ್ಟು ಹಗುರವಾದ ಪ್ರಕರಣವೆಂದು ಪರಿಗಣಿಸದೆ, ಕೂಲಂಕುಷವಾಗಿ ಚರ್ಚೆಗೆ ತೆಗೆದುಕೊಂಡು, ಇದನ್ನು ತನಿಖೆಗೆ ಒಳಪಡಿಸಿ ಯಾರು ತಪ್ಪಿತಸ್ಥರಿದ್ದಾರೋ ಅವರಿಗೆ ಉಗ್ರವಾದ ಶಿಕ್ಷೆಯನ್ನು ಕೊಡುವುದರ ಮೂಲಕ ಕರ್ನಾಟಕದ ಮಹಿಳೆಯರಮೇಲೆ ಇನ್ನೊಂದೂ ಇಂಥ ಭೀಕರ ಅತ್ಯಾಚಾರಗಳಿಗೆ ಅವಕಾಶವಾಗುವುದಿಲ್ಲವೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲು).—ಮಾನ್ಯ ಅಧ್ಯಕ್ಷರೇ, ಕಳೆದ ತಿಂಗಳು ಹನ್ನೊಂದನೇ ತಾರೀಖು ಕುದುರೆಮೋತಿಯಲ್ಲಿ ಒಂದು ಅತ್ಯಾಚಾರ ಪ್ರಕರಣ ನಡೆಯಿತು. ಇದು ಆಗಿ ನಾಲ್ಕು ಐದು ದಿವಸಗಳಾದಮೇಲೆ ಹದಿನಾರನೇ ತಾರೀಖು ಬೆಳಿಗ್ಗೆ ಬಂದಿತು. ಆ ಜಿಲ್ಲೆಯ ಒಂದು ಪತ್ರಿಕೆಯಾದ ಪ್ರಜಾ ಪ್ರಪಂಚ ಎನ್ನುವ ಪತ್ರಿಕೆಯಲ್ಲಿ ಗಂಗಾವತಿ ಕುದುರೆಮೋತಿ ಮಠಾಧಿಪತಿಗಳ ಕಾಮುಲೀಲೆ, ಮಹಿಳೆಯಮೇಲೆ ಅತ್ಯಾಚಾರವೆಂದು ಹೆಡ್ ಲೈನ್ಸ್‌ನಲ್ಲಿ ಬಂದಿತು. ಇದಕ್ಕೆ ಸರಿಯಾಗಿ ಲೋಕಲ್ ಪೋಲೀಸ್‌ನವರು ಆಕ್ಷನ್ ತೆಗೆದುಕೊಳ್ಳಲಿಲ್ಲವೆಂದು ಸುಮಾರು ಇಪ್ಪತ್ತು ಸಂಘಸಂಸ್ಥೆಗಳವರು ಒಂದು ದೊಡ್ಡ ಚಳವಳಿಯನ್ನು ಮಾಡಿದಮೇಲೆ ಬೆಂಗಳೂರಿಗೆ ಆಕೆ ಅಂದರೆ ಈ ಒಂದು ದುರ್ಘಟನೆಗೆ ಒಳಗಾದ ಪಾರ್ವತಮ್ಮ ಬಂದಮೇಲೆ, ಇದಕ್ಕೆ ಒಂದು ಅವಕಾಶ ಸಿಕ್ಕಿ, ಇಪ್ಪತ್ತೊಂದನೆ ಶತಮಾನಕ್ಕೆ ಹೋಗುವಂಥ ಕಾಲದಲ್ಲಿ ಇಂಥ ಪ್ರಕರಣಗಳು ನಡೆಯುತ್ತಿರುವುದರಿಂದ ಮತ್ತೆ ನಾವು ಯಾವ ಯುಗಕ್ಕೆ ಹೋಗುತ್ತೇವೇಯೋ ಎಂದು ಭಾವಿಸಿಕೊಳ್ಳಬೇಕಾಗುತ್ತದೆ. ಇಂಥ ಪ್ರಕರಣಗಳನ್ನು ನಾವು ಹೀಗೆಯೇ ಬಿಟ್ಟರೆ ಗತಿ ಏನು ? ಸರ್ಕಾರ ಇದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ತಮಗೆಲ್ಲ ತಿಳಿದ ಹಾಗೆ, ಅಲ್ಲಿಯ ಸ್ವಾಮಿಜಿಯವರು, ಅವರನ್ನು ಸ್ವಾಮಿಜಿ ಎಂದು ಕರೆಯುವುದು ಕೂಡ ನಮ್ಮ ದುರ್ದೈವವಾಗಿದೆ ; ಅವರು ಮಹಂತಸ್ವಾಮಿಗಳೆಂದು ಹೇಳಿಕೊಂಡು ಮಠವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ. ಅವರು 60 ಮಠಗಳ ಅಧಿಪತಿ ಎಂದು ವರ್ಣನೆ ಮಾಡಿಕೊಂಡಿರುತ್ತಾರೆ. ನನಗೆ 20-7-85ರಂದು ಒಂದು ಕಾಗದ ಬಂದಿರುತ್ತದೆ. ಅದನ್ನು ಓದುತ್ತೇನೆ, ಮತ್ತು ಅದರ ಕಾಪಿಯನ್ನು ತಮ್ಮ ಕೈಗೆ ಕೊಡುತ್ತೇನೆ. ಈಗಲೂ ಕೂಡ ಆ ಸ್ವಾಮಿಗಳ ದೌರ್ಜನ್ಯ ನಿಂತಿಲ್ಲ. ಈಗಲೂ ಜನರನ್ನು ಹೆದರಿಸುತ್ತಿರುತ್ತಾರಂತೆ. ಇದನ್ನು ತಮಗೆ ಕಳಿಸಿಕೊಡುವುದಕ್ಕೆ ಮುಂಚೆ ಓದುವುದಕ್ಕೆ ಇಚ್ಛೆಪಡುತ್ತೇನೆ.

ಈ ಪತ್ರದ ಒಕ್ಕಣೆ ಹೀಗೆ ಇದೆ,—

ಶ್ರೀಮಾನ್ ಬಿ. ಎನ್. ನಾಗರಾಜ, ಸಿ.ಪಿ.ಎಂ. ಕಾರ್ಯದರ್ಶಿಗಳು, ಬೆಂಗಳೂರು, ಇವರಿಗೆ, ವಂದನೆಗಳು. ಕುಶಲ. ಈಗ ತಮ್ಮಲ್ಲಿ ವಿವಂತಿಸಿಕೊಳ್ಳುವುದೇನೆಂದರೆ, ಕುದುರೆಮೋತಿಯಲ್ಲಿ ನಮ್ಮ ಪರವಾಗಿ ಸಾಕ್ಷಿ ಹೇಳತಕ್ಕಂಥ ಜನರಿಗೆ ಅಪಾದಿತ ಜನರಿಂದ ಬಹಳ ತ್ರಾಸು ಆಗಲಿಕ್ಕೆ ಹತ್ತಿದೆ. ಏಕೆಂದರೆ, ಇವರಿಗೆ ಯಾರ ಭಯವೂ ಇಲ್ಲ. ಪೋಲೀಸರ ಭಯವಂತೂ ಮೊದಲೇ ಇಲ್ಲ. ಹೀಗಾಗಿ ಸಾಕ್ಷಿ ಹೇಳಿದವರಿಗೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ. ಜೋಕೆ ಎಂದು ಭಯದ ವಾತಾವರಣ ಹುಟ್ಟಿಸುತ್ತಿದ್ದಾರೆ. ಹೀಗಾಗಿ ಅಲ್ಲಿಯ ಪರಿಸ್ಥಿತಿ ಅಸ್ತವ್ಯಸ್ಥಗೊಂಡಿದೆ. ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾದ ಶ್ರೀಮತಿ ಪುಷ್ಪಾವತಿಯವರು, ಪೋಲೀಸ್ ಇಲಾಖೆಯ ಮಹಾ ನಿರ್ದೇಶಕರಾದ ಶ್ರೀ ಬಿ. ಎನ್. ಗರುಡಾಚಾರ್‌ರವರು 13-7-85ಕ್ಕೆ ಕುದುರೆಮೋತಿಗೆ ಭೇಟಿಕೊಟ್ಟಾಗ ಈ ವಿಷಯದ ಬಗ್ಗೆ ಅವರಿಗೆ ನಿವೇದಿಸಿಕೊಳ್ಳಲಾಗಿತ್ತು.

ದಿನಾಂಕ 10-7-85ರಂದು ರಾತ್ರಿ 11 ಗಂಟೆಗೆ ಗಂಗಾವತಿ ಡಿ. ವೈ. ಎಸ್‌ಪಿ ಇವರು ಜೀಪಿನಲ್ಲಿ ನಮ್ಮ ಮನೆಗೆ ಬಂದು ನೀವು ಈ ಘಟನೆ ನಡೆಯುವ ಪೂರ್ವದಲ್ಲಿ ಪಿ.ಎಸ್.ಐ ಬೇವೂರ ಇವರಿಗೆ ಏಕೆ ತಿಳಿಸಲಿಲ್ಲ ಮತ್ತು ಕೆಂಪಯ್ಯ ಎ.ಎಸ್.ಪಿ. ಅವರ ಕಡೆಗೆ ಏಕೆ ಹೋದಿರಿ ? ಎಂಬುದಕ್ಕೆ ಬರೆದುಕೊಡಿರಿ ಎಂದು ಒತ್ತಾಯಪೂರ್ವಕವಾಗಿ ನನ್ನಿಂದ ಬರೆಯಿಸಿಕೊಂಡು ನನ್ನ ಹಾಗೂ ನನ್ನ ಪತ್ನಿಯ ಸಹಿಪಡೆದುಕೊಂಡು ಹೋದರು. ಸಿ.ಓ.ಡಿ. ತನಿಖೆಯೂ ಮುಗಿದಿದೆ. ಅದು ಯಾವ ರೀತಿ ಆಗಿದೆಯೋ ದೇವರೇ ಬಲ್ಲ. ಸ್ವಾಮಿ, ಪ್ರಭಾವ (ಹಣ) ನಡೆದಿದೆ. ನಮ್ಮ ತಾಲ್ಲೂಕಿನ ಶಾಸಕರಾದ ಬಸವರಾಜ ರಾಯರೆಡ್ಡಿಯವರ ಚಟುವಟಿಕೆಗಳು ಬಹಳ ಜೋರಾಗಿ ನಡೆದಿದೆ. ನನ್ನ ಮಾತಿಗೆ ಒಪ್ಪಿ ಮಾಸ್ತ ರಾಜಿ ಆಗದೆ ಇಷ್ಟೆಲ್ಲ ನಡೆಸಿದ್ದಾರೆ ಎಂದ ಮೇಲೆ ಅವನನ್ನು ಹಾಗೂ ಅವನ ಕುಟುಂಬವನ್ನು ಮುಗಿಸಿಬಿಡಿರಿ ಮತ್ತು ಹುಸೇನಬಿ ಕುಟುಂಬವನ್ನೂ ಮುಗಿಸಿಬಿಟ್ಟರೆ ಮುಂದೆ ಆ ಕೇಸು ನಡೆಯುವುದಿಲ್ಲ ಎಂದು ಅಪಾದಿತ ಜನರಿಗೆ ಪ್ರಚೋದನೆ ಕೊಡುತ್ತಿದ್ದಾರೆಂಬ ವದಂತಿ ಬೇರೆ ಹಬ್ಬಿದೆ. ಅಲ್ಲದೆ ನಮ್ಮ ತಾಲೂಕಿನ ಎ.ಇ.ಓ. ಅವರನ್ನೂ ವರ್ಗಮಾಡಿಸಿದ್ದಾರೆ ....

ನಾನು ಪೂರ್ತಿಯಾಗಿ ಓದುವುದಕ್ಕೆ ಹೋಗುವುದಿಲ್ಲ. ಮಾನ್ಯ ಶ್ರೀ ರಾಜಯ್ಯನವರು ಸಹೃದಯಿಗಳು ಮತ್ತು ದಲಿತವರ್ಗದಿಂದ ಬಂದಿರತಕ್ಕಂಥವರು, ಈ ಸಬ್ ಇನ್‌ಸ್ಪೆಕ್ಟರ್‌ನನ್ನು ಟ್ರಾನ್ಸ್‌ಫರ್ ಮಾಡಿದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಅವರನ್ನು ಡಿಸ್‌ಮಿಸ್ ಮಾಡಿ ಕೇಸ್ ಹಾಕಿದರೆ ಪ್ರಯೋಜನವಾಗುತ್ತದೆಯೇ ಹೊರತು ಇಲ್ಲದಿದ್ದರೆ ಪ್ರಯೋಜನ ಇಲ್ಲ. ಈ ಮಹಾಂತಸ್ವಾಮಿ ಎನ್ನುವವನಿಗೆ ಮಾನ ಮರ್ಯಾದೆ ಇಲ್ಲ. ಇಂತಹವರನ್ನು ಗೂಂಡಾ ಕಾಯಿದೆ ಪ್ರಕಾರ ದಸ್ತಗಿರಿ ಮಾಡಿ ಶ್ರೀ ಕೃಷ್ಣನ ಜನ್ಮಸ್ಥಳದಲ್ಲಿ ಇಡಬೇಕು. ಹಾಗೆ ಇಟ್ಟಾಗ ಮಾತ್ರ ಬೇರೆ ಇಂತಹ ಸ್ವಾಮಿಗಳಿಗೂ ಭಯ ಬರುತ್ತದೆ. ನಾನು ಎಲ್ಲಾ ಸ್ವಾಮಿಗಳ ಬಗ್ಗೆ ಹೇಳುತ್ತಿಲ್ಲ. ನೂರಕ್ಕೆ ಒಬ್ಬರೋ ಇಬ್ಬರೋ ಒಳ್ಳೆಯ

ವರು ಇದ್ದಾರೆ. ನಾನು ಸಿದ್ಧಗಂಗಾ ಮಠಕ್ಕೆ ಹೋಗಿದ್ದೆ. ಅಲ್ಲಿ ತುಂಬಾ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅದನ್ನು ನೋಡಿ ನನಗೆ ಸಂತೋಷವಾಯಿತು. ಆದರೆ ಈ ಮಹಾಂತ ಸ್ವಾಮಿಯಂಥವರು ಹಾಗಲ್ಲ. ಇವರೆಲ್ಲರೂ ಸ್ವಾಮಿಯ ವೇಷ ಹಾಕಿಕೊಂಡು ವಿಭೂತಿ ಇಟ್ಟುಕೊಂಡು ಮಾಡಬಾರದ ಅನ್ಯಾಯಗಳನ್ನೆಲ್ಲಾ ಮಾಡುತ್ತಿದ್ದಾರೆ. ಇದೇ ಸ್ವಾಮಿ ಇದಕ್ಕೆ ಮುಂಚೆ ಹನುಮಸಾಗರದಲ್ಲೂ ಬೆತ್ತಲೆ ಮೆರವಣಿಗೆ ಮಾಡಿಸಿದ್ದಾನೆ. ಇದು ಎರಡನೇ ಸಲ. ಇಂತಹ ಪರಿಸ್ಥಿತಿಯಲ್ಲಿ ಇವರನ್ನು ಹೀಗೆಯೇ ಬಿಟ್ಟರೆ ಆಗುವುದಿಲ್ಲ. ಈ ಪೋಲೀಸ್ ವ್ಯವಸ್ಥೆ ಬಗ್ಗೆ ಕೆಲವು ಮಾತನ್ನು ಹೇಳಬಯಸುತ್ತೇನೆ, ಸಾಧಾರಣವಾಗಿ ಒಬ್ಬ ಸಬ್ ಇನ್‌ಸ್ಪೆಕ್ಟರ್ ಇಂತಹ ಪರಿಸ್ಥಿತಿ ಬಂದರೆ ಎಫ್.ಐ.ಆರ್. ಬರೆದರೆ ಅದನ್ನು ಹರಿದು ಹಾಕಿ ಬಿಟ್ಟು ಪ್ರತಿಯೊಬ್ಬರೂ ಡಿಫೆಂಡ್ ಮಾಡಿಕೊಳ್ಳುವ ಪರಿಪಾಠ ಇದೆ. ಪರಿಸ್ಥಿತಿ ಎಂತಹ ಗಂಭೀರತೆಯಿಂದ ಕೂಡಿದೆ ಎಂದು ಯೋಚನೆ ಮಾಡುವುದಿಲ್ಲ. 20-30 ಜನ ಸೇರಿಕೊಂಡು ಮಹಿಳೆಯರನ್ನು ಬಟ್ಟೆ ಬಿಚ್ಚಿ ರಸ್ತೆಯಲ್ಲಿ ಎಳೆದುಕೊಂಡು ಹೋದರೆ ಮತ್ತು ನಮ್ಮ ಹೆಂಗಸರು ಇಂತಹ ದುರಾವಸ್ಥೆಗೆ ಒಳಗಾದರೆ ನಮ್ಮ ಗತಿ ಏನಾಗಬೇಕೆಂದು ನೋಡಬೇಕು. ಜೊತೆಗೆ ಹುಸೇನ್‌ಬಿ ಎಂಬ ಮಹಿಳೆಯನ್ನೂ ಕೂಡ ಬೆತ್ತಲೆ ಮೆರವಣಿಗೆಯನ್ನು ಮಾಡಿದ್ದರಿಂದ ಅವಳು ಮಾನಸಿಕ ಆಘಾತಕ್ಕೆ ಒಳಗಾಗಿ ಚಿಕಿತ್ಸೆಗಾಗಿ ಆಸ್ಪತ್ರೆ ಸೇರಿದ್ದಾಳೆ. ಒಂದು ವೇಳೆ ಕಮ್ಯುನಲ್ ಟೆನ್‌ಶನ್ ಇರತಕ್ಕಂಥ ಜಾಗದಲ್ಲಿ ಇಂತಹ ಘಟನೆ ಏನಾದರೂ ಆಗಿದ್ದರೆ ಹಳ್ಳಿಗೆ ಹಳ್ಳಿಯೇ ಸುಟ್ಟು ಬೂದಿಯಾಗಿರುತ್ತಿತ್ತು. ಅಲ್ಲಿ ಹೆಚ್ಚು ಮಂದಿ ಮುಸ್ಲೀಮರು ಇಲ್ಲವೆಂದು ಕಾಣುತ್ತದೆ. ಇತಂಹ ಪರಿಸ್ಥಿತಿಯಲ್ಲಿ ಆ ಸ್ವಾಮಿ ಬಗ್ಗೆ ಪೋಲೀಸರು ಕೇಸು ಹಾಕಿಬಿಟ್ಟಿದ್ದಾರೆ ಎಂದಮಾತ್ರಕ್ಕೆ ನಾನು ಒಪ್ಪುವುದಿಲ್ಲ. ಈ ಕೇಸು ಮುಗಿಯುವುದರೊಳಗೆ ಏನು ಬೇಕಾದರೂ ಆಗಬಹುದು. ಹಿಂದೆ ಸಿದ್ಧರಾಮೇಶನ ಕೊಲೆ ಮೊಕದ್ದಮೆ ನಡೆಯಿತು. ಅದು ಏನಾಗಿದೆ ಎಂದು ಈಗ ದುರ್ಬೀನು ಹಾಕಿಕೊಂಡು ನೋಡಬೇಕಾಗುತ್ತದೆ. ಈ ಸಿದ್ಧರಾಮೇಶನ ಕೊಲೆ ಅಪರಾಧಿಗಳು ಈಗ ಜಬರ್ದಸ್ತಿನಿಂದ ಗುಲ್ಬರ್ಗಾದಲ್ಲಿ ಓಡಾಡುತ್ತಿದ್ದಾರೆಂದು ಕೇಳಿದ್ದೇನೆ. ಬರೇ ಕೇಸು ಹಾಕಿ ಮೊಕದ್ದಮೆ ನಡೆಸುವುದಾದರೆ ಇದು ಮುಗಿಯುವುದರೊಳಗೆ ಹುಸೇನ್‌ಬಿ ಗಂಡ ಬದುಕಿರುತ್ತಾನೆಯೇ ಎಂದು ಯೋಚನೆ ಮಾಡಬೇಕು. ಪಾರ್ವತಮ್ಮನ ಗಂಡ ಏನಾಗಿರುತ್ತಾನೆ ಎಂದು ನೋಡಬೇಕು. ಇಂತಹ ಪರಿಸ್ಥಿತಿಯಲ್ಲಿ ಕಾನೂನು ಪ್ರಕಾರ ನಡೆಯಲಿ ಎಂದರೆ, ಕೆಲವು ಪಟ್ಟಭದ್ರ ಶಕ್ತಿಗಳು ಇವೆ. ಇದನ್ನು ಯಾವ ರೀತಿ ಟ್ವಿಸ್ಟ್ ಮಾಡಬೇಕು, ಪುಲ್‌ಆಪ್ ಮಾಡಬೇಕೆಂದು ವಕೀಲರಿಗೆ ಗೊತ್ತು. ಎಲ್ಲಾ ಮುಗಿಯುವುದರೊಳಗೆ ಎರಡು-ಮೂರು ವರ್ಷ ಆಗಿರುತ್ತದೆ. ಅಷ್ಟು ಹೊತ್ತಿಗೆ ಪಾರ್ವತಮ್ಮ ಉಳಿಯುತ್ತಾಳೆಯೇ; ಅವಳ ಗಂಡ ವಿರೂಪಾಕ್ಷಗೌಡ ಅವರ ಪರಿಸ್ಥಿತಿ ಏನಾಗಬೇಕು? ಇಂತಹ ಪರಿಸ್ಥಿತಿಯಲ್ಲಿ ನಾನು ಮಾನ್ಯ ಗೃಹಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ, ಈ ಗೂಂಡಾ ಆ್ಯಕ್ಟ್ ಮಾಡಿರುವುದು ಸ್ಲಮ್ ಗ್ರಾಬರ್ಸ್ ಒಬ್ಬರಿಗೇ ಅಲ್ಲ. ಇಂತಹವರನ್ನೂ ಅದರ ವ್ಯಾಪ್ತಿಯೊಳಗೆ ತರಬಹುದು. ಇವರನ್ನು ಈ ಆ್ಯಕ್ಟ್ ಪ್ರಕಾರ ಬಂಧಿಸಿ ಕಾರಾಗೃಹದಲ್ಲಿ ಇಟ್ಟರೆ ಸ್ವಲ್ಪ ದಿವಸ ಈ ಸ್ವಾಮಿ ಶಿವಾಶಿವಾ—ಕೃಷ್ಣಾಕೃಷ್ಣಾ ಅಂತ ಕೂಗಿಕೊಳ್ಳಲಿ. ಇನ್ನೊಂದು ಸಾರಿ ಹೆಂಗಸರ ತಂಟೆಗೆ ಹೋದರೆ ಏನು ಆಗುತ್ತದೆ ಎಂದು ಬೇರೆಯವರಿಗೆ ಗೊತ್ತಾಗುತ್ತದೆ. ಇನ್ನೊಬ್ಬ ಸ್ವಾಮಿ ಗಂಗಾವತಿಯಲ್ಲಿ ಇದೇ ರೀತಿಯಲ್ಲಿ ಪ್ರಯತ್ನ ಮಾಡಿದಾಗ, ಕಾಲೇಜು ಹುಡುಗರು ಆತನನ್ನು ಹಿಡಿದರು. ಈ ಕುದುರೆಮೋತಿ ಪ್ರಕರಣದ ವಿಷಯ ಇಂಡಿಯಾ ದೇಶದಲ್ಲಿನ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಒಂದು ಸಂತೋಷದ ಸಂಗತಿ ಅಂದರೆ, ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಆ ಕಡೆಯಲ್ಲಿ ಕೂತಿರತಕ್ಕಂಥವರು ಜನತಾಪಕ್ಷದ ಶಾಸಕಿಯಾಗಿಯೂ ಅವರು ಇದರ ಬಗ್ಗೆ ಆಸಕ್ತಿಯನ್ನು ತೋರಿಸಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಹಿಳೆಯ ಮಾನದ ಪ್ರಶ್ನೆ ಇದು. ಯಾವ ಪಾರ್ಟಿಯವರಾದರೂ ಇದನ್ನು ಖಂಡನೆ ಮಾಡಬೇಕಾಗುತ್ತದೆ.

ಶ್ರೀ ಆರ್, ವೆಂಕಟರಾಮಯ್ಯ.—ಹೌದು. ಇವತ್ತು ಎಲ್ಲಾ ಪಾರ್ಟಿಯವರೂ ಈ ಕೃತ್ಯವನ್ನು ಒಕ್ಕೊರಲಿನಿಂದ ಖಂಡನೆ ಮಾಡುತ್ತಿದ್ದಾರೆ, 'ಇವನೊಬ್ಬ ರಾಕ್ಷಸ' ಸ್ವಾಮಿಯ ವೇಶದಲ್ಲಿ ಮಹಿಳೆಯರನ್ನು ಅಪಮಾನ ಮಾಡಿ ಇಡೀ ಕರ್ನಾಟಕಕ್ಕೆ ಅವಮಾನ ಮಾಡಿದ್ದಾನೆ, ಎಂದು ನಮ್ಮ ದೇಶದ ಎಲ್ಲಾ ಪತ್ರಿಕೆಗಳೂ, ಹಿಂದುಪತ್ರಿಕೆ ಮೊದಲುಗೊಂಡು ಟೈಮ್ಸ್ ಆಫ್ ಇಂಡಿಯಾ, ಇಂಡಿಯಾ ಟುಡೇ, ಲಿಂಕ್ ಆದಿಯಾಗಿ ಎಲ್ಲಾ ಪತ್ರಿಕೆಗಳೂ ಇದರ ಬಗ್ಗೆ ಬರೆದಿವೆ. ಹೀಗೆ ಇರುವಾಗ ಈತನನ್ನು ಹೀಗೆ ಸುಮ್ಮನೆ ಬಿಟ್ಟು ಕೇಸ್ ಹಾಕಿದರೆ ಕೋರ್ಟುಗಳು ಪ್ರೊಟೆಕ್ಷನ್ ಕೊಡುತ್ತೇವೆ. ಆದ್ದರಿಂದ ಇದು ಗಂಭೀರವಾದ ವಿಷಯ. ಈ ಸ್ವಾಮಿಯನ್ನು ತಕ್ಷಣ ಬಲಿಹಾಕಬೇಕು ಹಾಕುವ ದಾರಿ ಮಾನ್ಯ ಗೃಹಸಚಿವರಿಗೆ ಗೊತ್ತು, ಶ್ರೀ ಗರುಡಾಚಾರ್ ಅವರಿಗೂ ಗೊತ್ತು. ಈಗಿನ ಪೋಲೀಸ್ ವ್ಯವಸ್ಥೆ ಯಾವ ರೀತಿ ಇದೆ ಯೆಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಪೋಲೀಸರು ಕೊಟ್ಟಿರುವ ಹೇಳಿಕೆ ಎಂತೆ, ಆ ಹೆಂಗಸಿನ ಲಂಗದ ಬಟ್ಟೆಯನ್ನು ಪೂರ್ತಿಯಾಗಿ ಬಿಚ್ಚಿಲ್ಲಿಲ್ಲ, ಕೆಲವು ಜನರು ಆಕೆಯನ್ನು

4-30 p.m.

ಓಡಿಸಿಕೊಂಡು ಹೋದರು ಎಂದು ತಮ್ಮ ಉತ್ತರದಲ್ಲಿ ಹೇಳಬಹುದು. ಆದರೆ ಅಲ್ಲಿನ ಕೆಲವು ಜನರು ಆಕೆಯನ್ನು ಸಾಕಷ್ಟು ಪೀಡಿಸಿದ್ದಾರೆ ಮತ್ತು ಮೆರವಣಿಗೆ ಮಾಡಿದ್ದನ್ನು ಅಲ್ಲಿನ ಬೇರೆ ಜನರು ನೋಡಿದ್ದಾರೆ. ಇಂತಹ ಪ್ರಕರಣಗಳು ಬೇಕಾದಷ್ಟು ನಡೆಯುತ್ತಿರುತ್ತವೆ. ಈ ಪ್ರಕರಣ ಮಾತ್ರ ಬೆಳಕಿಗೆ ಬಂದಿದೆ. ಇಂತಹ ಪ್ರಕರಣಗಳು ನಡೆಯುವುದು ಮಠಗಳಲ್ಲಿ, ದೇವಸ್ಥಾನಗಳಲ್ಲಿ ಮಾತ್ರವಲ್ಲ, ಜಮೀನ್ದಾರಿಕೆ ಪದ್ಧತಿಯಲ್ಲಿಯೂ ಸಹ ನಡೆಯುತ್ತವೆ. ಪವರ್‌ಫುಲ್ ಆದಂಥ ಜಮೀನುದಾರರು ಇರುವ ಕಡೆಗಳಲ್ಲಿ ಇಂಥಾದ್ದು ನಡೆಯುತ್ತವೆ. ಆದರೆ ಬೆಳಕಿಗೆ ಬರುವುದಿಲ್ಲ. ಶ್ರೀ ವಿರೂಪಾಕ್ಷಗೌಡರು ಬೇರೆಯವರಂತೆ ಈ ಪ್ರಕರಣವನ್ನು ಮುಚ್ಚಿಡದೆ ಇಡೀ ಪ್ರಪಂಚಕ್ಕೇ ತಿಳಿಸಿದ್ದಾರೆ. ಅಲ್ಲಿನ ಡಿವೈಎಸ್‌ಪಿ. ಆದಂಥ ಶ್ರೀ ಕೆಂಪಯ್ಯನವರ ಬಗ್ಗೆ ಒಳ್ಳೆಯ ಮಾತುಗಳು ಕೇಳಿ ಬಂದಿದೆ. ಆದರೆ ಈ ಪ್ರಕರಣದಲ್ಲಿ ಅಲ್ಲಿನ ಎಸ್.ಪಿ ಅವರು ಎಂತಹ ಯಜಮಾನಿಕೆ ಮಾಡುತ್ತಾರೋ ಗೊತ್ತಿಲ್ಲ. ಆದ್ದರಿಂದ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ, ಇಂತಹ ಪ್ರಕರಣಗಳು ಎಷ್ಟೇ ನಡೆದರೂ ನಡೆಯಲಿ, ಪತ್ರಿಕೆಗಳಲ್ಲಿ ಬೇಕಾದರೆ ಬರಲಿ, ಅಸೆಂಬ್ಲಿಯಲ್ಲಿ ಬೇಕಾದರೆ ಚರ್ಚೆಯಾಗಲಿ, ತಮ್ಮ ಮೇಲಿನ ಅಧಿಕಾರಿಗಳು ತಮ್ಮನ್ನು ರಕ್ಷಿಸುತ್ತಾರೆಂದು ಕೆಳಗಿನ ಅಧಿಕಾರಿಗಳಲ್ಲಿ ಒಂದು ರೀತಿಯ ಭಾವನೆ ಉಂಟಾಗುತ್ತದೆ. ಅದ್ದರಿಂದ ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಿದರೆ ಇತರೇ ನೌಕರರಿಗೆ ಭಯ ಬರುತ್ತದೆ. ಅಷ್ಟೇ ಅಲ್ಲ, ಇದರಿಂದ ಸಮಾಜದ ಮೇಲೂ ಕೂಡ ಒಂದು ಒಳ್ಳೆಯ ಪರಿಣಾಮ ಬೀರುತ್ತದೆ. ಈ ಒಂದು ಪ್ರಕರಣ ನಡೆದಿದ್ದು ಕಳೆದ ತಿಂಗಳ 11ನೇ ತಾರೀಖು. 16ನೇ ತಾರೀಖು ಇದು ಪತ್ರಿಕೆಗಳಲ್ಲಿ ವರದಿಯಾಯಿತು. ಕೂಡಲೇ ಅಲ್ಲಿಯ ಸಬ್—ಇನ್ಸ್‌ಪೆಕ್ಟರ್ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಈ ಪ್ರಕರಣ ನಡೆದ ಒಂದು ತಿಂಗಳ ನಂತರ ಸಂಬಂಧಪಟ್ಟವರು ಬೆಂಗಳೂರಿಗೆ ಬಂದು ಮುಖ್ಯಮಂತ್ರಿಗಳನ್ನು ಮತ್ತು ಗೃಹಮಂತ್ರಿಗಳನ್ನು ಕಂಡು ದೂರು ಕೊಟ್ಟಿದ್ದಾರೆ. ಅವರು ಬೆಂಗಳೂರಿಗೆ ಬಂದು ದೂರು ಕೊಟ್ಟಿದ್ದರಿಂದಲೇ ಇದು ಬೆಳಕಿಗೆ ಬರಲು ಕಾರಣವಾಯಿತು. ಒಂದು ವೇಳೆ ಅಲ್ಲಿನ ಸಬ್–ಇನ್ಸ್‌ಪೆಕ್ಟರ್ ಈ ಪ್ರಕರಣ ನಡೆದ ದಿನವೇ ಇವರನ್ನು ಹಿಡಿದು ಬಲಿ ಹಾಕಿದ್ದರೆ ಇದು ಬೆಳಕಿಗೆ ಬರುತ್ತಲೇ ಇರಲಿಲ್ಲ, ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದಿಷ್ಟೆ, ಈ ಪ್ರಕರಣ ನಡೆಯಲು ಕಾರಣರಾದವರನ್ನು ಹಿಡಿದು ಮೊದಲು ಬಲಿ ಹಾಕಬೇಕು. ಈಗ ತಾವು ಕೂಡಲೇ ಕ್ರಮ ತೆಗೆದುಕೊಳ್ಳದ ಪೋಲೀಸ್ ಅಧಿಕಾರಿಗಳನ್ನು ಅಲ್ಲಿಂದ ವರ್ಗ ಮಾಡಿದ್ದೀರಿ, ಆದರೆ ಆದರಿಂದ ನನಗೆ ಸಂತೋಷವಾಗಿಲ್ಲ. ಅವರನ್ನೂ ಸಹ ತನಿಖೆಗೆ ಒಳಪಡಿಸಿ ನಂತರ ಬಲಿ ಹಾಕುತ್ತೇನೆಂದು ಹೇಳಿದರೆ ಮಾತ್ರ ನಮಗೆ ಸಂತೋಷವಾಗುತ್ತದೆ. ಈ ರೀತಿ ತಪ್ಪು ಮಾಡಿದ ಅಧಿಕಾರಿಗಳನ್ನು ತನಿಖೆಗೆ ಒಳಪಡಿಸದೆ ಕೂಡಲೇ ಡಿಸ್‌ಮಿಸ್ ಮಾಡಬಹುದೆಂದು ಸುಪ್ರೀಂ ಕೋರ್ಟಿನ ರೂಲಿಂಗ್ ಬಂದಿದೆ. ಆದ್ದರಿಂದ ಇಂತಹವರನ್ನು ತಾವು ಕೂಡಲೇ ಕೆಲಸದಿಂದ ಡಿಸ್‌ಮಿಸ್ ಮಾಡಿ. ಈ ರೀತಿಯಾದ ಕ್ರಮವನ್ನು ಗೃಹ ಮಂತ್ರಿಗಳು ಕೈಕೊಂಡರೆ ಇನ್ನು ಮುಂದೆ ಇಂತಹ ಪ್ರಕರಣಗಳು ನಮ್ಮ ರಾಜ್ಯದಲ್ಲಿ ನಡೆಯುವುದಿಲ್ಲ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿರುವ ಪುಂಡರನ್ನು ಮತ್ತು ಇಂತಹ ಸ್ವಾಮಿಗಳನ್ನು ಹಿಡಿದು ಬಲಿ ಹಾಕಬೇಕು. ಈ ಸ್ವಾಮಿಯ ಪೂರ್ಣ ಹೆಸರು ಈ ರೀತಿ ಇದೆ ; 'ಶ್ರೀಮಾನ್ ನಿರಂಜನ ಪ್ರಣವ ಸ್ವರೂಪಿ ವಿಜಯ ಮಹಂತಸ್ವಾಮಿ' ಎಂದು. ಇಂತಹ ಸ್ವಾಮಿಗಳು ಅಡವಿಯಲ್ಲಿಯಿರಬೇಕಾಗಿತ್ತು. ಆದರೆ ಇವರು ಬೆಂಗಳೂರು, ರಾಯಚೂರು ಮುಂತಾದ ಕಡೆಗಳಲ್ಲಿ ಓಡಾಡುತ್ತಿದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಪ್ರಣವ ಸ್ವರೂಪಿ ಎನ್ನುವುದಕ್ಕೆ ಬದಲು ಅವರು ತಮ್ಮ ಹೆಸರನ್ನು ಪ್ರಣಯ ಸ್ವರೂಪಿ ಎಂದು ಬದಲಾಯಿಸಿಕೊಳ್ಳುವುದು ಒಳ್ಳೆಯದು.

ಶ್ರೀ ಆರ್. ವೆಂಕಟರಾಮಯ್ಯ.—ನನ್ನ ಸ್ನೇಹಿತರು ಬಹಳ ಚೆನ್ನಾಗಿ ಹೇಳಿದರು. ಇಂತಹವರ ಬಗ್ಗೆ ಸರ್ಕಾರ ತಕ್ಷಣವೇ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ತಪ್ಪು ಮಾಡಿದ ಪೋಲೀಸ್ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಬೇಕು. ಈ ಸ್ವಾಮಿಯನ್ನು ಗೂಂಡಾ ನಿಷೇದ ಶಾಸನವನ್ನು ಉಪಯೋಗಿಸಿ ಜೈಲಿನೊಳಗೆ ಕೂರಿಸಬೇಕು. ಇವರ ಒಂದು ರಾಕ್ಷಸೀ ಸ್ವರೂಪ ಎಲ್ಲಿರಬೇಕೋ ಅಲ್ಲಿರಬೇಕೇ ಹೊರತು, ಈ ರೀತಿ ಬೀದಿಗಳಲ್ಲಿ ಓಡಾಡಿಕೊಂಡು ಕರ್ನಾಟಕ ರಾಜ್ಯಕ್ಕೇ ಅವಮಾನವಾಗುವಂತಹ ಕೆಲಸವನ್ನು ಮಾಡಬಾರದು. ಇಂತಹವರಿಗೆ ಶಿಕ್ಷೆ ವಿಧಿಸಲೇಬೇಕೆಂದು ಮಾನ್ಯ ಗೃಹ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಈ ಒಂದು ಹೇಯ ಕೃತ್ಯವನ್ನು ಎಲ್ಲರು ಖಂಡಿಸಬೇಕು. ಯಾವ ಮಠಗಳ ಬಗ್ಗೆ ಜನರಿಗೆ ಒಳ್ಳೆಯ ಭಕ್ತಿ ಭಾವನೆ ಇದೆಯೋ, ಅಂತಹವರಗಳು ಜನರನ್ನು ಘನತೆ ಗೌರವದಿಂದ ಕಂಡು, ಜನರನ್ನು ಧಾರ್ಮಿಕ ದಾರಿಯಲ್ಲಿ ತೆಗೆದುಕೊಂಡು

ಹೋಗುವಂತಹ ಕೆಲಸ ಮಾಡುತ್ತಿವೆ. ಇಂತಹ ಮಠಗಳ ಪೈಕಿ ಒಂದು ಮಠ ಅಥವಾ ಮಠದ ಒಬ್ಬ ಸ್ವಾಮೀಜಿ ಮೇಲೆ ಬಂದಿರುವಂತಹ ಆಪಾದನೆ ಬಗ್ಗೆ ಇಲ್ಲಿ ನಾವು ವಿಚಾರ ಮಾಡುತ್ತಿದ್ದೇವೆ. ಒಬ್ಬ ಸ್ವಾಮೀಜಿ ಈ ರೀತಿ ನಡೆದುಕೊಂಡರೆ ಕರ್ನಾಟಕ ರಾಜ್ಯದ ಎಲ್ಲ ಮಠಗಳ ಸ್ವಾಮಿಗಳೂ ಇದೇರೀತಿ ಇದ್ದಾರೆಂಬ ಭಾವನೆಯನ್ನು ನಾವು ತಾಳುವುದು ಸರಿಯಲ್ಲ. ಒಳ್ಳೆಯ ಘನತೆ ಗೌರವದಿಂದ ಇರುವಂತಹ ಸ್ವಾಮೀಜಿಗಳನ್ನು ನಾವು ಕಂಡಿದ್ದೇವೆ. ಇಂತಹವರ ಪೈಕಿ ಯಾರಾದರೊಬ್ಬರು ಅಪ್ಪಿತಪ್ಪಿ ಈ ರೀತಿ ನಡೆದುಕೊಂಡರೆ ಇಲ್ಲವೇ, ಇಂತಹವರು ಏನಾದರು ಮಠಾಧೀಶ್ವರರಾದರೆ, ಒಂದು ಮಠದ ಬಗ್ಗೆ, ಒಂದು ಧರ್ಮದ ಬಗ್ಗೆ ಹಾಗೂ ಇಂತಹ ಸ್ವಾಮಿಗಳ ಬಗ್ಗೆ ಜನರು ಏನು ಒಂದು ನಂಬಿಕೆಯನ್ನು ಇಟ್ಟು ಕೊಂಡಿರುತ್ತಾರೆ, ಅದನ್ನು ಕಳೆದುಕೊಳ್ಳುವ ಸಂದರ್ಭ ಉಂಟಾಗುತ್ತದೆ. ಹಾಗೆ ನೋಡಿದರೆ ಈ ಮಠಾಧೀಶ್ವರರೂ ಸಹ ಮನುಷ್ಯರೇ ಆಗಿದ್ದಾರೆ. ಇವರನ್ನು ಬಿಟ್ಟು ಬೇರೊಬ್ಬರನ್ನು ಆ ಜಾಗದಲ್ಲಿ ಕೂರಿಸಿದರೆ ಧರ್ಮದ ಪ್ರಚಾರ ಮಾಡುವುದಕ್ಕೆ ಬರುವುದಿಲ್ಲ. ಯಾರು ತಮ್ಮ ಹಲವಾರು ಬಯಕೆ ಮತ್ತು ಭಾವನೆಗಳನ್ನು ಹಿಡಿದಿಡುತ್ತಾರೆ, ಅದುಮಿಡುತ್ತಾರೆ, ಯಾರು ಆತ್ಮ ಸಂಯಮ ಪರೀಕ್ಷೆಯಲ್ಲಿ ಪಾಸಾಗುತ್ತಾರೆ, ಅಂತಹವರು ಇಂಥಾದ್ದನ್ನೆಲ್ಲಾ ಮಾಡಲು ಹೋಗುವುದಿಲ್ಲ. ಆದರೆ ಯಾರು ಬಯಕೆಗೆ ಬಲಿ ಬೀಳುತ್ತಾರೆ, ಅಂತಹವರು ಬೇರೆಯವರಪ್ಪು ಬಲಿ ತೆಗೆದುಕೊಳ್ಳುತ್ತಾರೆ ಈ ಒಂದು ಪ್ರಕರಣಕ್ಕೆ ಸಂಬಂಧಪಟ್ಟವರು, ಅವರ ಸಂಬಂಧೀಕರು ಹಾಗೂ ಇನ್ನೂ ಕೆಲವು ಹೆಣ್ಣು ಮಕ್ಕಳು ಬೆಂಗಳೂರಿಗೆ ಬಂದು ಮುಖ್ಯಮಂತ್ರಿಗಳನ್ನು, ಗೃಹಮಂತ್ರಿಗಳನ್ನು ಹಾಗೂ ನನ್ನ ಶಾಸಕ ಮಿತ್ರರನ್ನು ಕಂಡು ದೂರುಗಳನ್ನು ಕೊಟ್ಟಿದ್ದಾರೆ ಅವರು ನನ್ನನ್ನು ಕಾಣಲು ಬಂದಿದ್ದಾಗ ನಾನು ಇರಲಿಲ್ಲ, ನಾನು ಪ್ರವಾಸದ ಮೇಲಿದ್ದೆ, ಈ ಒಂದು ಪ್ರಕರಣದ ಬಗ್ಗೆ ಮಾನ್ಯ ವೆಂಕಟರಾಮಯ್ಯನವರು ಸಾಕಷ್ಟು ತಿಳಿಸಿದ್ದಾರೆ. ಶ್ರೀಮತಿ ಲೀಲಾವತಿ ಆರ್. ಪ್ರಸಾದ್ ಅವರೂ ಸಹ ಸಾಕಷ್ಟು ವಿವರವಾಗಿ ಹೇಳಿದ್ದಾರೆ, ಪತ್ರಿಕೆಗಳಲ್ಲಿಯೂ ಸಹ ಸಾಕಷ್ಟು ಪ್ರಚಾರವಾಗಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅನೇಕ ಅರ್ಜಿಗಳೂ ಸಹ ಬಂದಿವೆ. ಪುಣ್ಯಕ್ಕೆ ಒಂದು ಸಂತೋಷದ ಸಂಗತಿ ಏನೆಂದರೆ, ಈ ಸ್ವಾಮೀಜಿಯ ಯಾವ ಒಂದು ಉದ್ದೇಶ ಸಾಧನೆಯಾಗಬೇಕಾಗಿತ್ತೋ, ಅದು ಸಾಧನೆಯಾಗಲಿಲ್ಲ. ಕೇವಲ ಪ್ರಯತ್ನ ನಡೆದಿದೆ, ಇದರಲ್ಲಿ ಅತ್ಯಾಚಾರ ಆಗಿಲ್ಲ. ಅತ್ಯಾಚಾರ ಮಾಡತಕ್ಕಂಥ ಪ್ರಯತ್ನ ನಡೆದಿದೆ. ಆ ಸಮಯದಲ್ಲಿ ಈ ಹೆಣ್ಣುಮಗಳಿಗೆ ಆ ಮಠದಲ್ಲಿದ್ದ ಚಪ್ಪಲಿ ಸಹಾಯಕ್ಕೆ ಬಂತು. ಆದ್ದರಿಂದ ನಾವು ಚಪ್ಪಲಿಯನ್ನು ಕೈಗೆ ತೆಗೆದುಕೊಳ್ಳದಿದ್ದರೆ ಇಲ್ಲವೇ ಆ ಚಪ್ಪಲಿ ಶ್ರೀಮತಿ ಪಾರ್ವತಮ್ಮನ ಬೆಂಬಲಕ್ಕೆ ಬಾರದಿದ್ದರೆ ಬೇರೆ ಏನಾದರೂ ನಡೆದುಬಿಡುತ್ತಿತ್ತು. ಒಂದುವೇಳೆ ಅಲ್ಲಿ ಚಪ್ಪಲಿ ಇರದಿದ್ದರೆ ಯಾವರೀತಿ ರಕ್ಷಣೆ ಮಾಡಿಕೊಳ್ಳಬೇಕಾಗಿತ್ತು ? ಚಪ್ಪಲಿಗಳನ್ನು ಸಹ ಚರ್ಮದಿಂದಲೇ ಮಾಡಿರುವುದು. ಆದರೂ ಅದನ್ನು ಕಂಡರೆ ಜನರಿಗೆ ಒಂದು ರೀತಿಯ ಹೆದರಿಕೆ ಇರುತ್ತದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಹಿಳೆಯರಿಗೆ ತೊಂದರೆ ಬಂದಾಗ ಚಪ್ಪಲಿಯೇ ಅವರಿಗೆ ಆಯುಧವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಈ ಮಠಗಳ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ನಾನು ಹೋಗುವುದಿಲ್ಲ, ನಾನು ಇಲ್ಲಿ ಅದರ ಬಗ್ಗೆ ವ್ಯಾಖ್ಯಾನ ಮಾಡಿದರೆ ಮತ್ತೊಂದು ರೀತಿಯಲ್ಲಿ ನಾಳೆ ಪತ್ರಿಕೆಗಳಲ್ಲಿ, ರೇಡಿಯೋಗಳಲ್ಲಿ ಪ್ರಸಾರವಾಗಿ ಅವ್ಯವಸ್ಥೆಗೆ ಕಾರಣವಾಗುತ್ತದೆ. ಜನರಲಿ, ನಾನು ನೋಡಿದ ಹಾಗೆ ಮಠಗಳು ಒಳ್ಳೆಯ ರೀತಿಯಲ್ಲಿ ಇವೆ ಯಾರೋ ಒಬ್ಬರು ಈ ರೀತಿ ಮಾಡಿ ಮಠಗಳ ಹೆಸರುಗಳನ್ನು ಕೆಡಿಸುತ್ತಾರೆ. ನಾನು ಅನೇಕ ಮಠಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಮಠಗಳಲ್ಲಿ ಉಪನ್ಯಾಸಗಳನ್ನು ಕೇಳಿದ್ದೇನೆ, ಮೈಸೂರಿನಲ್ಲಿ ಒಂದು ಮಠ ಇದೆ, ಅದರ ಹೆಸರು ಏನೋ ಮರೆತುಹೋಗಿದೆ ಆ ಮಠದಲ್ಲಿ ಒಳ್ಳೆಯ ರೀತಿಯಲ್ಲಿ ಧರ್ಮದ ಬಗ್ಗೆ ವಿಶ್ಲೇಷಣೆ, ವ್ಯಾಖ್ಯಾನ ಮತ್ತು ವಾಚನಗಳು ನಡೆಯುತ್ತವೆ. ಸಾಮಾನ್ಯ ಮನುಷ್ಯ ಒಮ್ಮೆ ತಪ್ಪು ಮಾಡಿದಾಗ ಒಳ್ಳೆಯ ಮಾರ್ಗದಲ್ಲಿ ಹೋಗು ಎಂದು ಹೇಳಬಹುದು. ಆದರೆ ಮಠಾಧೀಶರಂತಹ ಒಳ್ಳೆಯ ಸ್ಥಾನದಲ್ಲಿ ಇರುವವರು ತಪ್ಪು ಮಾಡಿದರೆ ಏನು ಮಾಡುವುದು ? ಕೆಲವು ಮಠಾಧೀಶರು ಹೆಣ್ಣುಮಕ್ಕಳಿಗೆ ದೂರದಿಂದ ಆಶೀರ್ವಾದ ಮಾಡುತ್ತಾರೆ. ಕೆಲವು ಮಠಾಧೀಶರು ಹೆಣ್ಣುಮಕ್ಕಳ ತಲೆಮುಟ್ಟಿ ಆಶೀರ್ವಾದ ಮಾಡುತ್ತಾರೆ. ಮಠಾಧೀಶರು ನನ್ನ ತಲೆಮುಟ್ಟಿ ಆಶೀರ್ವಾದ ಮಾಡಿದರೆಂದು ಭಕ್ತಿ ಭಾವದಿಂದ ಸಂತೋಷಪಡುತ್ತಾರೆ. ಆದರೆ ತಲೆಮುಟ್ಟಿ ಆಶೀರ್ವಾದ ಮಾಡುವ ಮಠಾಧೀಶರು ಕೆಟ್ಟ ಭಾವನೆಯಿಂದ ಆಶೀರ್ವಾದ ಮಾಡಿದರೆ ಅಂತಹ ಪಾಪಿಷ್ಠರು ಬೇರೆ ಯಾರೂ ಇಲ್ಲವೆಂದು ಹೇಳಬಹುದು. ಯಾವ ವ್ಯಕ್ತಿಯ ಚಿಂತನೆಗಳು, ಗುಣಗಳು ಮತ್ತು ವರ್ತನೆಗಳು ಚೆನ್ನಾಗಿರುತ್ತವೆಯೋ ಅವನೇ ಒಳ್ಳೆಯ ವ್ಯಕ್ತಿ. ಅವನ ಗುಣಗಳ ಮೇಲೆ ಅವನ ವ್ಯಕ್ತಿತ್ವ ನಿಂತಿರುತ್ತದೆ. ಹೆಣ್ಣುಮಕ್ಕಳ ದೇಹ ಸಂಪರ್ಕದಿಂದ ಸಂತೋಷಪಡತಕ್ಕ ಮಠಾಧೀಶರು ಬಂದರೆ ಅದ

ರಿಂದ ನಿಜವಾಗಿಯೂ ಸಮಾಜಕ್ಕೆ ತೊಂದರೆಯಾಗುತ್ತದೆ. ಒಬ್ಬ ಕಾಮುಕ ಹೆಣ್ಣುಮಕ್ಕಳ ತಲೆಯ ಮೇಲೆ ಕೈ ಇಟ್ಟರೆ ಹಾಗೂ ಒಬ್ಬ ಧರ್ಮ ಗುರು ತಲೆ ಮೇಲೆ ಕೈ ಇಟ್ಟರೆ ಇವುಗಳ ಮಧ್ಯೆ ಎಷ್ಟು ವ್ಯತ್ಯಾಸ ಇರುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಇಲ್ಲಿ ಇರತಕ್ಕ ಆಪಾದನೆ, ಸ್ವಾಮಿಗಳು ಹೆಣ್ಣು ಮಗಳ ಮೇಲೆ ಕೈ ಮಾಡಿದರು ಎಂದು ಸುಮಾರು ಇಪ್ಪತ್ತು ಅಥವಾ ಮೂವತ್ತು ಮಠಗಳ ಬ್ರಾಂಚನ್ನು ಹೊಂದಿರತಕ್ಕ ಒಬ್ಬ ಮಠಾಧೀಶರ ಮೇಲೆ ಒಬ್ಬ ಸಾಮಾನ್ಯ ಮಹಿಳೆ, ಸ್ವಾಮಿಗಳು ಈ ರೀತಿ ಮಾಡಿದರು ಎಂದು ಹೇಳಬೇಕಾದರೆ ಆ ಹೆಣ್ಣುಮಗಳಿಗೆ ನಿಜವಾಗಿಯೂ ಎಂಟೆದೆ ಬೇಕಾಗುತ್ತದೆ ಸ್ವಾಮಿಗಳು ನನ್ನ ಮೈ ಮೇಲೆ ಬಂದಾಗ ನಾನು ಚಪ್ಪಲಿ ತೆಗೆದುಕೊಂಡು ಹೊಡೆದೆ ಎಂದು ಹೇಳುವುದಕ್ಕೆ ಯಾರಿಗೆ ಧೈರ್ಯ ಬರುತ್ತದೆ ? ಸುಮ್ಮಸುಮ್ಮನೆ ಯಾವ ಒಬ್ಬ ಮಹಿಳೆಯೂ ಈ ರೀತಿ ಹೇಳುವುದಕ್ಕೆ ಬರುವುದಿಲ್ಲ. ಈ ಮಠಕ್ಕೆ ಭಕ್ತಾದಿಗಳ ರೂಪದಲ್ಲಿ ಶ್ರೀಮತಿ ಪಾರ್ವತಮ್ಮನವರು ಹೋಗುತ್ತಿದ್ದರು, ಆಗ ಈ ಮಠಾಧೀಶರಿಂದ ಈ ಘಟನೆ ನಡೆದಿದೆ. ಈ ಹೆಣ್ಣುಮಗಳು ಆ ಮಠಾಧೀಶರ ಇಚ್ಛೆಯನ್ನು ತಿರಸ್ಕರಿಸಿ ದೂರ ಉಳಿದಾಗ, ಈ ಮಠಾಧೀಶರು ಬೇರೆಯವರ ಹೆಸರಿನಲ್ಲಿ ಪಾರ್ವತಮ್ಮನವರಿಗೆ ಪತ್ರಗಳನ್ನು ಬರೆದಿದ್ದಾರೆ, ಈ ಪತ್ರಗಳಿಂದಲಾದರೂ ಭಯಪಟ್ಟು ನಾನು ಹೇಳಿದ ಹಾಗೆ ಕೇಳಲಿ ಎಂದು. ಈ ರೀತಿ ಮಠಾಧೀಶರು ಅಮಾಯಕ ಹೆಣ್ಣುಮಕ್ಕಳನ್ನು ಹೆದರಿಸಿ ತಮ್ಮ ನೀತಿಗೆ ಒಳಪಡಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಇಂತಹ ವಿಧಾನಗಳಿಗೆ ಕೈ ಹಾಕಿದರೆ ಅವರೆಂತಹ ಮಠಾಧೀಶರು ಎಂಬುದು ಎಲ್ಲರೂ ಪ್ರಶ್ನೆ ಮಾಡಬೇಕಾಗಿದೆ. ಅನೇಕ ಪತ್ರಕರ್ತರೂ ಸಹ ಈ ಘಟನೆ ನಡೆದ ಸ್ಥಳಕ್ಕೆ ಭೇಟಿಕೊಟ್ಟು ಕೂಲಂಕಷವಾಗಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಈ ಮಠಾಧೀಶರ ಪತ್ರಗಳಿಗೂ ಹೆದರದಿದ್ದ ಈ ಮಹಿಳೆಗೆ ಅವರ ಬೆಂಬಲಿಗರು ಸೇರಿ ಬೆತ್ತಲೆಯಾಗಿಸಿ, ರಸ್ತೆಗಳಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗತಕ್ಕಂತಹ ಮಹಾನ್ ಸಾಹಸವನ್ನು ಮಾಡಿದ್ದಾರೆ. ಇಂತಹ ಹೇಯ ಕೃತ್ಯಕ್ಕೆ ಕೈ ಹಾಕುವುದು ನಿಜಕ್ಕೂ ಅವಮಾನಕರವಾಗಿದೆ. ಈ ರೀತಿಯಾಗಿ ಹೆಣ್ಣುಮಕ್ಕಳನ್ನು ರಸ್ತೆಗಳಲ್ಲಿ ಬೆತ್ತಲೆಯಾಗಿ ಮೆರವಣಿಗೆ ಮಾಡಿದ್ದಾರೆಂದು ನಾವು ಕೇಳಿದರೆ ನಿಜಕ್ಕೂ ಇದು ತಲೆ ತಗ್ಗಿಸತಕ್ಕಂತಹ ವಿಷಯ, ನಮ್ಮ ಸಮಾಜದಲ್ಲಿ ಸಾಕಷ್ಟು ಮಹಿಳೆಯರಿಗೆ ಉಟ್ಟುಕೊಳ್ಳುವುದಕ್ಕೆ ಸರಿಯಾಗಿ ಸೀರೆಯೇ ಇರುವುದಿಲ್ಲ: ಹರಿದು ಹೋಗಿರುವ ಸೀರೆಯನ್ನು ಒಂದುಕಡೆ ಮುಚ್ಚಿಕೊಂಡರೆ ಮತ್ತೊಂದು ಕಡೆ ಕಾಣಿಸುತ್ತದೆ; ಇದನ್ನೆಲ್ಲಾ ನಾನು ಕಣ್ಣಾರೆ ಕಂಡಿದ್ದೇನೆ. ಇಂತಹ ಸ್ಥಿತಿಯನ್ನು ಸಮಾಜದಲ್ಲಿ ಸುಧಾರಿಸಲು ಯಾರಿಂದಲೂ ಸಾಧ್ಯವಾಗಲಿಲ್ಲವೆಂದರೆ ನಿಜಕ್ಕೂ ನಾಚಿಕೆಯಾಗುತ್ತದೆ. ಅಂತಹದರಲ್ಲಿ ಸಾಲದು ಎಂದು ಈ ಬೆತ್ತಲೆ ಮೆರವಣಿಗೆಗಳು ಬೇರೆ ಮಾಡಿ ಹೆಣ್ಣುಮಕ್ಕಳ ಮಾನವನ್ನು ಹಾಳು ಮಾಡುತ್ತಾರೆ. ನಾವು ಇರಬಹುದು ಅಥವಾ ನೀವು ಇರಬಹುದು, ಬಂಗಾರಪ್ಪ ಆಗಬಹುದು ಅಥವಾ ಬೊಮ್ಮಾಯಿಯವರು ಆಗಬಹುದು, ಯಾರೇ ಇರಬಹುದು ಅಂದರೆ ದೊಡ್ಡ ದೊಡ್ಡ ಮುಖಂಡರು ಸಮಾಜವನ್ನು ಉದ್ಧಾರ ಮಾಡುತ್ತೇವೆಂದು ಹೇಳಿಕೊಂಡು ಸಮಾರಂಭಗಳನ್ನು ಏರ್ಪಡಿಸಿ ಬಡವರಿಗೆ ಉಚಿತವಾಗಿ ಬಟ್ಟೆಯನ್ನು ಹಂಚುವ ಕಾರ್ಯಕ್ರಮವನ್ನು ಹಾಕಿಕೊಂಡು ಸಮಾರಂಭದಲ್ಲಿ, ಹಿತ್ತಲ ಮನೆ ಕರಿಯಮ್ಮ ಬಾಮ್ಮ ಈ ಸೀರೆಯನ್ನು ತೆಗೆದುಕೊಂಡು ಹೋಗು ಎಂದು ಉಚಿತವಾಗಿ ಸೀರೆಯನ್ನು ಕೊಡುತ್ತಾರೆ. ಆದರೆ ಆ ಹಿತ್ತಲ ಮನೆ ಕರಿಯಮ್ಮ ಸೀರೆಯನ್ನು ತೆಗೆದುಕೊಂಡು ಹೋಗಲು ಹೇಗೆ ಬರುತ್ತಾಳೆ ಎಂಬುದನ್ನು ನೋಡಿದರೆ ಮನಸ್ಸು ನೋವಾಗುತ್ತದೆ. ಒಂದು ಕಡೆ ಹರಿದಿರುವ ಸೀರೆ ಗಂಟು ಹಾಕಿರುತ್ತಾಳೆ, ಆ ಗಂಟು ಕಾಣಿಸದಂತೆ ನೋಡಿಕೊಳ್ಳಲು ಗಂಟನ್ನು ಮುಚ್ಚಿಕೊಳ್ಳಲು ಹೋದರೆ ಇನ್ನೊಂದು ಕಡೆ ಹರಿದಿರುವುದು ಕಾಣಿಸುತ್ತದೆ. ಈ ರೀತಿಯ ಚಿತ್ರಣವನ್ನು ನೋಡಿದರೆ ಅದನ್ನು ಮರೆಯುವುದಕ್ಕೆ ಆಗುವುದಿಲ್ಲ. ಇಂತಹ ಜನಗಳಿಗೆ ಸಮಾಜದಲ್ಲಿ ಸರಿಯಾದ ರೀತಿಯಲ್ಲಿ ನಾವು ವ್ಯವಸ್ಥೆಯನ್ನು ಇದುವರೆಗೂ ಮಾಡುವುದಕ್ಕೆ ಆಗಿಲ್ಲ. ಇಂತಹ ಸಾಮಾನ್ಯ ಜನರು ತಮ್ಮ ಮನೆಯಲ್ಲಿ ಕುಡಿಯುವುದಕ್ಕೆ ಮಣ್ಣಿನಿಂದ ಮಾಡಿದ ಮಣ್ಣಿನ ತಟ್ಟೆಯನ್ನು ಊಟ ಮಾಡುವುದಕ್ಕೆ ಉಪಯೋಗಿಸುತ್ತಾರೆ, ಸ್ನಾನ ಮಾಡಲು ಮಣ್ಣಿನ ಸಾಧನವನ್ನು ಇಟ್ಟುಕೊಂಡಿರುತ್ತಾರೆ. ಇಂತಹ ಕಷ್ಟಗಳನ್ನು ಬಡವರು ಅನುಭವಿಸುವುದನ್ನು ನೋಡಿದರೆ ಕರುಳು ಹಿಸಿಕಿದಂತಾಗುತ್ತದೆ. ಇಂತಹವರನ್ನು ಆರ್ಥಿಕವಾಗಿಯೂ ಹಿಂದೆ ಉಳಿಸಿ ಅವರ ಮಾನವನ್ನು ತೆಗೆದರೆ ಸರಿಯೇ ? ಇಂತಹ ಕಷ್ಟಗಳನ್ನು ಅನುಭವಿಸುವವರು ಸಮಾಜದಲ್ಲಿ ಲಕ್ಷಾಂತರ ಜನರು ಇದ್ದಾರೆ. ಇವರುಗಳಿಗೆಲ್ಲಾ ಪೂರ್ಣವಾಗಿ ಸೌಲಭ್ಯಗಳನ್ನು ಒದಗಿಸುವುದು ನಮ್ಮಿಂದಲೂ ಸಾಧ್ಯವಿಲ್ಲ, ಯಾವುದೇ ಪಕ್ಷದ ಸರ್ಕಾರವು ಆಡಳಿತದಲ್ಲಿದ್ದರೂ ಸಾಧ್ಯವಾಗುವುದಿಲ್ಲವೆಂದು ನನಗೆ ಗೊತ್ತಿದೆ, ಸಮಾಜದಲ್ಲಿ ಜನರು ಕಷ್ಟಪಡುವುದನ್ನು ನೋಡಿದರೆ ನಾವು ನಿಜಕ್ಕೂ ತಲೆ ಬಗ್ಗಿಸಬೇಕು. ಇಂತಹ ಸಾಮಾನ್ಯ ಜನರ ಮೇಲೆ ಮಠಾಧೀಶರು ಹಾಗೂ ಅವರ ಶಿಷ್ಯ ವರ್ಗವು ಸೇರಿಕೊಂಡು ಅನ್ಯಾಯ ಮಾಡಿದೆ, ಇದು ಹೇಯವಾದ ಮತ್ತು ಖಂಡನೀಯ ಕೃತ್ಯ. ಇಂತಹ ಕಾರ್ಯಗಳಿಗೆ ಬೆಂಬಲ ಕೊಡುವವರನ್ನು ಖಂಡಿಸಬೇಕು ಹಾಗೂ ಅವರ ಬಗ್ಗೆ ಪ್ರತಿಭಟನೆಗಳನ್ನು ಮಾಡಬೇಕು, ಸರ್ಕಾರವು ಇಂತಹವರ ಮೇಲೆ ತೀವ್ರವಾದ

ಕ್ರಮಗಳನ್ನು ಕೈಗೊಳ್ಳಬೇಕು. ಈ ಜಾಗದಲ್ಲಿ ನಡೆದ ಅನ್ಯಾಯದ ಬಗ್ಗೆ ಪೋಲೀಸಿನವರಿಗೂ ಗೊತ್ತಿದೆ ಆದರೂ ಅವರು ತಕ್ಷಣ ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ, ಇಂತಹ ಘಟನೆ ಸಂಭವಿಸಬಹುದು ಎಂಬುದು ಪೋಲೀಸರಿಗೂ ಮೊದಲೇ ತಿಳಿದಿತ್ತು ಎಂಬ ವಿಚಾರ ಕೂಡಾ ನಮಗೆ ತಿಳಿದುಬಂದಿದೆ. ಸ್ವಾಮಿಯವರು ಈ ರೀತಿ ಮಾಡುತ್ತಿದ್ದಾರೆ ಎನ್ನತಕ್ಕಂತಹ ವಿಚಾರವೂ ನಾಗರೀಕರ ಬಾಯಿ ಮಾತಿನ ಮೂಲಕ ತಿಳಿದಿದ್ದರೂ ಕೂಡಾ ಯಾವುದೇ ಕ್ರಮವನ್ನು ಇಲಾಖೆಯವರು ತೆಗೆದುಕೊಂಡಿಲ್ಲ. There is a lapse on the part of the Government and police Department. ಇಂತಹ ಹೀನ ಮಟ್ಟಕ್ಕೆ ತೆಗೆದುಕೊಂಡು ಹೋಗಿ, ಹೆಣ್ಣುಮಕ್ಕಳ ಬೆತ್ತಲೆ ಮೆರವಣಿಗೆ ಮಾಡಲು ಹೋಗುವುದಾದರೆ, ಮತ್ತು ಅದಕ್ಕೆ ಅವಕಾಶವಿತ್ತದೇ ಆದರೆ ಅಲ್ಲದೆ ಅವರಿಗೆ ಹೆದರಿಕೆ, ಬೆದರಿಕೆ ಹಾಕುವಂತಹ ಮಟ್ಟಕ್ಕೆ ಹೋಗುವುದಾದರೆ, ನಾವೂ ಕೂಡಾ ವಿಚಾರ ಮಾಡಬೇಕಾಗುತ್ತದೆ. ಇಂತಹ ಮಠಾಧೀಶರು ಇರುವ ಮಠಗಳ ಬಗ್ಗೆ, ಇಂತಹ ಭಕ್ತರುಗಳ ಬಗ್ಗೆ ಮತ್ತು ಇಂತಹ ಜನರ ಬಗ್ಗೆ ಏನು ವಿಚಾರ ಮಾಡಬೇಕ ಎಂದು ಯೋಚಿಸಬೇಕಾಗುತ್ತದೆ. ಇವರನ್ನು ರಕ್ಷಣೆ ಮಾಡಲಿಕ್ಕೆ ಪೋಲೀಸ್ ಡಿಪಾರ್ಟ್‌ಮೆಂಟ್ ಏನು ಮಾಡುತ್ತಿತ್ತು ? ನಮ್ಮ ಸರಪಂಚರು ಏನು ಮಾಡುತ್ತಿದ್ದರು ? ಯಾರೂ ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲವೆಂದರೆ, ಇಲ್ಲಿ ಆಡಳಿತ ಸಂಪೂರ್ಣ ವಿಫಲವಾಗಿದೆಯೆಂದು ಸ್ಪಷ್ಟವಾಗುತ್ತದೆ.

ಇನ್ನು ಸಿಓಡಿ. ತನಿಖೆಗೆ ನೀವು ಕೊಟ್ಟಿದ್ದೀರಿ ಎನ್ನತಕ್ಕಂತಹ ಮಾತು. ವರದಿ ಪ್ರಕಾರ ಎರಡು ಕೇಸ್‌ಗಳು ರಿಜಿಸ್ಟರ್ ಆಗಿರತಕ್ಕದ್ದು. ಅದರ ಒಂದು ಕೇಸ್‌ನಲ್ಲಿ 15 ಜನರ ಮೇಲೆ ಚಾರ್ಜ್‌ಶೀಟ್ ಹಾಕಿಸುವುದು ಮಾನ್ಯ ಡಿಜಿಪಿ.ಯವರ ಸ್ಟೇಟ್‌ಮೆಂಟ್‌ನ ಪ್ರಕಾರ ಮತ್ತು ಪತ್ರಿಕೆಯ ಪ್ರಕಾರ ತಿಳಿದು ಬರುತ್ತದೆ, ಸ್ವಾಮಿಯವರು ಅಂಟಿಸಿಪೇಟರಿ ಬೇಲ್‌ನ್ನು ತೆಗೆದುಕೊಂಡಿದ್ದಾರೆಂದು ಕೂಡಾ ಪತ್ರಿಕೆಯಲ್ಲಿ ನಾನು ನೋಡಿದ್ದೇನೆ. ಅದನ್ನು ಯಾರಾದರೂ ಕೊಟ್ಟಿರಬಹುದು, ಅದರ ಬಗ್ಗೆ ನನ್ನ ವ್ಯಾಖ್ಯಾನ ಇಲ್ಲ. ಆದರೆ ಒಂದು ಮಾತು ; ಇನ್ನೊಂದು ಕೇಸ್ ರಿಜಿಸ್ಟರ್ ಆಗಿದೆಯಲ್ಲ ಅದರ ಬಗ್ಗೆ ಏನಾಯಿತು? ಒಂದು ಕೇಸ್ ರಿಜಿಸ್ಟರ್ ಆದಮೇಲೆ ಚಾರ್ಜ್‌ಶೀಟ್ ಹಾಕಿದ್ದೀರಿ ; ಮತ್ತೊಂದು ಕೇಸ್ ಯಾವ ಯಾವ ಸೆಕ್ಷನ್ ಪ್ರಕಾರ ಯಾರ್ಯಾರ ಮೇಲಿತ್ತು ? ಯಾರು ಕಂಪ್ಲೇಂಟ್ ಕೊಟ್ಟರು ? ಇದರ ಬಗ್ಗೆ ಯಾವಕ್ರಮ ತಾವುಗಳು ಹಾಕಿಕೊಂಡಿದ್ದೀರಿ ? ಅದು ನಮಗೆ ತಿಳಿಯಬೇಕಾಗಿದೆ, ಮತ್ತು ಗೊತ್ತಾಗಬೇಕಾಗಿದೆ.

ಈ ಹಿಂದೆ ಇದೇರೀತಿ ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಇಂತಹ ಪ್ರಕರಣ ನಡೆದಿತ್ತು. 1967ರ ನಂತರ ಶಾಸಕರಾಗಿ ನಾವು ಇಲ್ಲಿ ಬಂದು ಕುಳಿತಿದ್ದೆವು. ಆವಾಗ ಇದೇ ರೀತಿಯಲ್ಲಿ ಹೆಣ್ಣುಮಕ್ಕಳ ಮಾನಭಂಗ ನಡೆಯಿತು.

ಹೆಣ್ಣುಮಕ್ಕಳ ಬಟ್ಟೆಬರೆ ಕಳಚಿದರು. ರೆವೆನ್ಯೂ ಆಫೀಸರ್ಸ್ ಮತ್ತು ಪೋಲೀಸರು. ಇದಕ್ಕೆ ಸಂಬಂಧಪಟ್ಟಂತಹ ಒಂದು ಕಾರ್ಯಕ್ರಮ ಆಗಿತ್ತು. ಆ ಸಂದರ್ಭದಲ್ಲಿ ಎಲ್ಲಾ ಗುಡಿಸಲಲ್ಲಿರತಕ್ಕ ಬಡ ಹೆಣ್ಣುಮಕ್ಕಳನ್ನು ಮಾನಭಂಗ ಮಾಡಿದರು. ಆ ಘಟನೆಯನ್ನು ಮುಚ್ಚಲು ಪ್ರಯತ್ನಗಳೂ ಕೂಡಾ ನಡೆಯಿತು. ಆ ವಿಷಯ ಇಲ್ಲಿ ವಿಚಾರಕ್ಕೆ ಬಂದಾಗ ನ್ಯಾಯಾಂಗ ವಿಚಾರಣೆ ಆಗಬೇಕೆಂದು ನಾವು ಕೇಳಿದ್ದೆವು. ಅದಕ್ಕಾಗಿ ನ್ಯಾಯಾಂಗ ವಿಚಾರಣೆ ಆಗಬೇಕು. ಪೋಲಿಸರು ಇನ್ವೆಸ್ಟಿಗೇಶನ್ ಮಾಡಿ ವಿಚಾರಣೆ ಮಾಡಿ, ಸಿಓಡಿ. ಎನ್‌ಕ್ವಯರಿ ಮಾಡಿ, ಚಾರ್ಜ್‌ಶೀಟ್ ಹಾಕಿ ಸುಮ್ಮನೆ ಕುಳಿತುಕೊಳ್ಳುವುದಲ್ಲ, ಇವೊತ್ತು ಹೆಣ್ಣುಮಕ್ಕಳ ಮಾನಭಂಗ ಕುದುರೆಮೋತಿಯಲ್ಲಿ ನಡೆಯಿತು ; ನಾಳೆ ಕತ್ತೆಮೋತಿಯಲ್ಲಿ ನಡೆಯುತ್ತದೆ, ಮತ್ತೊಂದು ಕಡೆ ನಡೆಯುತ್ತದೆ. ಎಲ್ಲಿಯವರೆಗೆ ಇಂತಹ ಜನರನ್ನು ಮಟ್ಟ ಹಾಕುವುದಿಲ್ಲವೋ ಅಲ್ಲಿಯವರೆಗೆ ಇದು ನಡೆಯುತ್ತಾ ಇರುತ್ತದೆ. ಬಡವರಿಗೆ, ಅಮಾಯಕರಿಗೆ, ನಿರಪರಾಧಿಗಳಿಗೆ, ಬಡಬಗ್ಗರಿಗೆ, ಯಾರ ವಿರುದ್ಧ ಹೊರಡಲೂ, ಆರ್ಥಿಕ ದೃಷ್ಟಿಯಿಂದ, ಸಾಮಾಜಿಕ ಅಂತಸ್ತಿನ ದೃಷ್ಟಿಯಿಂದ, ಸಾಧ್ಯವಿಲ್ಲವಾಗಿದೆ, ಅಂತಹವರಿಗೆ ರಕ್ಷಣೆ ಕೊಡುವುದಕ್ಕೆ ನಿಮ್ಮಿಂದ ಸಾಧ್ಯವಾಗಲಿಲ್ಲ. ಆ ನಿರಪರಾಧಿಗಳು, ರಕ್ಷಣೆಗಾಗಿ ಇಲ್ಲಿಯವರೆಗೆ ಬರಬೇಕಾಯಿತು. ಅವರು ಬೆಂಗಳೂರಿಗೆ ಬಂದಮೇಲೆ ನಿಮ್ಮ ಸರ್ಕಾರ ಕಾರ್ಯಕ್ರಮ ನಡೆಸಿದ್ದು.

ಶ್ರೀಮತಿ ಪಾರ್ವತವ್ವ ಮತ್ತು ಶ್ರೀಮತಿ ಹುಸೇನಾಬಿ ಎನ್ನತಕ್ಕ ಇಬ್ಬರು ಹೆಣ್ಣುಮಕ್ಕಳ ಮಾನಭಂಗ ನಡೆಯಿತು. ಅವರನ್ನು ತೆಗೆದುಕೊಂಡು ಹೋಗಿ ರೋಡಿನಲ್ಲಿ ಸಾರ್ವಜನಿಕವಾಗಿ ಮೆರವಣಿಗೆ ಮಾಡಿದ್ದಾರೆ. ಹಾಗಾದರೆ ಈಗ ಅಲ್ಲಿರತಕ್ಕಂತಹ ಜನರು ಏನು ಮಾಡುತ್ತಿದ್ದರು ? ಎನ್ನತಕ್ಕಂತಹ ವಿಚಾರ ನನಗೂ ಕೂಡಾ ಬರುತ್ತದೆ. ಇದರ ಬಗ್ಗೆ ಏಕೆ ಕಾರ್ಯಕ್ರಮ ಸಾರ್ವಜನಿಕರು ಕೂಡಾ ಹಾಕಿಕೊಂಡಿಲ್ಲ ಎನ್ನತಕ್ಕಂಥಾದ್ದು ಮತ್ತು ಹೆಣ್ಣುಮಕ್ಕಳ ಮರ್ಯಾದೆ ಕಾಪಾಡಲು ಪೋಲೀಸರೇ ಬರಬೇಕೆ ? ಸಾರ್ವಜನಿಕರೂ ಕೂಡಾ ಏಕಾಗಿ ಆ ಕೆಲಸವನ್ನು ಮಾಡಲಿಲ್ಲ ಎನ್ನುವುದು ನನ್ನ ವಿಚಾರ. ಹೆಣ್ಣುಮಕ್ಕಳ ಮರ್ಯಾದೆಯನ್ನು ಉಳಿಸಿಕೊಳ್ಳುವುದು ಯಾರಿಗೆ ಸಾಧ್ಯವೋ ಅವರು ಮೊದಲು ಅದನ್ನು ಮಾಡಬೇಕು.

ಈ ವಿಷಯದಲ್ಲಿ ಅಲ್ಲಿನ ಸಾರ್ವಜನಿಕರಿಂದಲೂ ಜವಾಬ್ದಾರಿ ಕಾಣಿಸುತ್ತಾ ಇಲ್ಲ. ಪೋಲೀಸರು ಅನಂತರ ಬರುತ್ತಾರೆ. ಆಮೇಲೆ ವೈರ್‌ಲೆಸ್ ಸೆಟ್, ಪೋಲೀಸ್ ಔಟ್‌ಪೋಸ್ಟ್ ಎಲ್ಲಪೂ ಬರುತ್ತದೆ. ಇದು ನಮ್ಮ ಇಂಡಿಯನ್ ಪೀನಲ್‌ಕೋಡ್‌ನ ಹಣೆಬರಹ. ಎಲ್ಲಾ ಕೆಲಸ ಮುಗಿದುಹೋದ ಮೇಲೆ ಕಣ್ಣು ತೆರೆದುಕೊಂಡು ನಿಧಾನವಾಗಿ ಪೋಲೀಸರು ಬರುವುದು. ಅವರು ಬರುವುದರೊಳಗಾಗಿ ಎಲ್ಲವೂ ಅಂದರೆ, ಮಾನ, ಮರ್ಯಾದೆ ಎಲ್ಲವೂ ಹೋಗಿರುತ್ತದೆ. ಇದು ನಮ್ಮ ಕಾನೂನಿನ ವಿಪರ್ಯಾಸ. ಇದಕ್ಕೆ ಏನಾದರೂ ಬೇರೆ ವ್ಯವಸ್ಥೆ ಮಾಡದಿದ್ದರೆ ಕಷ್ಟವಾಗುತ್ತದೆ. ಇದರ ಬಗ್ಗೆ ಸಾಮಾಜಿಕ ಜನಜಾಗೃತಿ ಮೂಡಿಸಬೇಕಾಗುತ್ತದೆ. ಇದು ಯಾವ ಪಕ್ಷದ ಮೇಲೆಯಾಗಲೀ, ಮಾಡತಕ್ಕಂತಹ ಆಪಾದನೆಯಲ್ಲ, ಜನಜಾಗೃತಿ ಮಾಡದಿದ್ದರೆ ಎಲ್ಲವೂ ಕೆಟ್ಟು ಇಂತಹ ಘಟನೆಗಳು ನಡೆಯುವುದು ಆಮೇಲೆ ನಾವು ಇಂತಹ ವಿಚಾರಗಳನ್ನು ಇಲ್ಲಿ ಖಂಡಿಸುವುದು, ಇಲ್ಲಿಗೆ ಇದು ಮುಗಿಯುತ್ತದೆ. ಅದು ನಮ್ಮ ಹೊಣೆಗಾರಿಕೆಯಲ್ಲ. ನಾವು ಜವಾಬ್ದಾರಿಯುತವಾಗಿ ಇಲ್ಲಿ ಕೆಲಸ ಮಾಡಬೇಕಾಗುತ್ತದೆ. ಇಂತಹ ವಿಚಾರಗಳು, ಅಂದರೆ ಇಂತಹ ಹೇಯ ಕೃತ್ಯಗಳು ಮುಂದೆ ನಡೆಯದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ಸಾರ್ವಜನಿಕರು, ಅದರಲ್ಲಿಯೂ ಸರ್ಕಾರ ಈ ವಿಷಯಕ್ಕೆ ಸಂಪೂರ್ಣ ಗಮನ ಕೊಡಬೇಕು, ಈ ಘಟನೆಗೆ ಸಂಬಂಧಪಟ್ಟಂತೆ ಮತ್ತೊಂದು ವಿಚಾರ ನಡೆಯಿತು. ಅದು, ರಾಜಿ ಮಾಡತಕ್ಕಂತಹ ಪ್ರಯತ್ನ. ಹೆಣ್ಣು ಮಕ್ಕಳ ಮರ್ಯಾದೆಯನ್ನು ರಾಜಿಮಾಡಿ ಹಿಂತೆಗೆದುಕೊಳ್ಳುವುದು ಸಾಧ್ಯವಿಲ್ಲ ; ಅದು ಆಗುವುದಿಲ್ಲ ಮತ್ತೆ ಬರುವುದೂ ಇಲ್ಲ, ಅದು ಹೇಗೆ ಎಂದರೆ, ದೇವರ ಹುಂಡಿಗೆ ಹಾಕಿದ ಹಣದ ಹಾಗೆ. ಹುಂಡಿಯನ್ನು ಪೂರ್ಣವಾಗಿ ಸೀಲ್ ಮಾಡಿರುತ್ತಾರೆ. ಅದಕ್ಕೆ ಹತ್ತು ರೂಪಾಯಿಗಳನ್ನು ಹಾಕಿಬಿಟ್ಟು, ಅದರಿಂದ ಐದು ರೂಪಾಯಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರೆ ಆಗುವುದಿಲ್ಲ. ಮರ್ಯಾದೆ ಹೋದರೆ ಸಂಪೂರ್ಣವಾಗಿ ಹೋದ ಹಾಗೆಯೇ. ರಾಜಿ ಮಾಡುವುದು ಯಾಕೆಂದು ಹೇಳಿದರೆ, ಮಾಡಿದವರು ದೊಡ್ಡ ಮನುಷ್ಯರು, ಇಂತಹ ರಾಜಿ ಕೆಲಸಗಳನ್ನು ಮಾಡುವುದಕ್ಕೋಸ್ಕರವೇ ಕೆಲವು ಜನರು ಇರುತ್ತಾರೆ. ಅವರು ಹೇಳುತ್ತಾರೆ, ದೊಡ್ಡ ಮನುಷ್ಯರೇ ಏನೋ ಮಾಡಿದ್ದಾರೆ, ಹಾಗೆ ಮಾಡಬಾರದಾಗಿತ್ತು, ಹೋಗಲಿ ಈಗ ಅವರನ್ನು ಎದುರಿಸಲಿಕ್ಕೆ ಆಗುತ್ತದೆಯೇ ಎಂದು ಹೇಳುತ್ತಾರೆ, ಮತ್ತು ರಾಜಿ ಮಾಡಿಸಲು ಪ್ರಯತ್ನ ಮಾಡುತ್ತಾರೆ.

ನನ್ನ ತಾಲ್ಲೂಕಿನಲ್ಲಿ ಹಿಂದೆ ಗೇಣಿದಾರರು ಅರ್ಜಿ ಹಾಕಿ ಎಂದು ಹೇಳಿದಾಗ ಅವರು ಹಾಕುವುದಕ್ಕೆ ತಯಾರಾಗಿರಲಿಲ್ಲ. ಯಾಕೆಂದರೆ, ಅವರು ಬಡವರು, ಹರಿಜನ ಗಿರಿಜನರು. ಅವರಿಗೆ ಜಮೀನ್ದಾರರ ವಿರುದ್ಧ ಹೋಗಲು ಹೆದರಿಕೆ. ನಾನು ಏನು ಮಾಡಿದೆ ಎಂದರೆ, ಪ್ರತಿಯೊಂದೂ ಗ್ರಾಮಕ್ಕೂ ಭೇಟಿ ಕೊಟ್ಟು ವಿಷಯವನ್ನು ವಿವರವಾಗಿ ಅವರಿಗೆ ತಿಳಿಸಿದೆ. ಫ್ರೀಯಾಗಿ ಎಲ್ಲಾ ಕೆಲಸಗಳನ್ನೂ ಮಾಡಿದೆ. 13 ಸಾವಿರ ಜನಗಳಿಂದ ಅರ್ಜಿ ಹಾಕಿಸಿದೆ. ಸುಮಾರು 10 ಸಾವಿರ ಜನರು, ಕುಟುಂಬಗಳು, ಈಗ ಖಾತೆದಾರರು ಆಗಿದ್ದಾರೆ. ಆಗ ಜಮೀನ್ದಾರರು ಅವರನ್ನು ಹೆದರಿಸಿದರು. ಹೈಕೋರ್ಟ್, ಸುಪ್ರೀಂ ಕೋರ್ಟಿಗೆ ಓಡಿಸುತ್ತೇವೆಂದು ಹೇಳಿದರು. ಈ ಜನರು ಕೂಡಾ ಹೆದರಿದರು. ಪಾಪ ಸಾಗರದತನಕವೂ ನಡೆದುಕೊಂಡು ಹೋಗುವ ಜನಗಳು ಅವರು. ಆಗ ನಾನು ಅವರಿಗೆ ಧೈರ್ಯಕೊಟ್ಟೆ. ಪಾಂಪ್ಲೆಟ್‌ಗಳನ್ನು ಪ್ರಿಂಟ್ ಮಾಡಿಸಿದೆ. ವಿಷಯವನ್ನು ಆ ಜನರಿಗೆ ಮನದಟ್ಟು ಮಾಡಿಸಿಕೊಟ್ಟೆ. ಸುಪ್ರೀಂ ಕೋರ್ಟಿಗೆ ಹೋದರೂ ಕೂಡಾ ನಿಮ್ಮ ಖರ್ಚನ್ನು ನಾನು ನೋಡಿಕೊಳ್ಳುತ್ತೇನೆಂದು ಹೇಳಿದೆ, ಈ ಬಡವರಿಗೆ, ದೇವರೇ ಗತಿ. ಈ ರೀತಿಯಾಗಿ ಧೈರ್ಯ ತುಂಬ ಬೇಕಾಯಿತು. ದೊಡ್ಡವರು ಏನು ಮಾಡಿದರೂ ಬಡವರು ಹೆದರಿ ಸುಮ್ಮನಿರಬೇಕಾಗುತ್ತದೆ. ಹೆಣ್ಣು ಮಕ್ಕಳ ಮರ್ಯಾದೆ ಹೋದರೂ ಚಿಂತೆ ಇಲ್ಲ. ದೊಡ್ಡವರನ್ನು ಎದುರಿಸಬಾರದು. ಅವರಿಗೆ ತಲೆಬಾಗಿ ನಡೆಯಬೇಕು ಅಧ್ಯಕ್ಷರೇ. ಈ ವಿಷಯದಲ್ಲಿ ನನ್ನ ಪ್ರಶ್ನೆ ಇಷ್ಟೆ. ಸರ್ಕಾರದವರು ಕೇಸ್ ಹಾಕಿದ್ದಾರೆ. ಕೋರ್ಟಿನಲ್ಲಿರತಕ್ಕಂತಹ ಕೇಸ್ ಬಗ್ಗೆ ನಾನು ಹೆಚ್ಚಾಗಿ ಮಾತನಾಡುತ್ತಿಲ್ಲ. ಹೆಣ್ಣು ಮಕ್ಕಳ ಹೋದ ಮರ್ಯಾದೆಯನ್ನು ತುಂಬಿ ಕೊಡುವುದು ಬಹಳ ಕಷ್ಟ. ಒಬ್ಬ ವ್ಯಕ್ತಿ ಕಳೆದುಕೊಂಡ ಮರ್ಯಾದೆಯನ್ನು ಹೇಗೆ ಪುನಃ ಪಡೆಯಬೇಕೆಂಬ ಪ್ರಶ್ನೆ ಇದು. ಇದರಲ್ಲಿ ಸೆಕ್ಸುವೆಲ್ ಹೆರಾಸ್‌ಮೆಂಟ್ ಆಗಿದೆ. ಹೆಣ್ಣು ಮಕ್ಕಳ ಬಗ್ಗೆ ನನಗೆ ತುಂಬಾ ಗೌರವವಿದೆ, ಮತ್ತು ಅನುಕಂಪವಿದೆ. ನಾನು ಆ ಹೆಣ್ಣುಮಗಳನ್ನು ಈಗ ಅಭಿನಂದಿಸಬೇಕಾಗಿದೆ, ಯಾಕೆಂದರೆ ಅನ್ಯಾಯದ ವಿರುದ್ಧ ಧೈರ್ಯದಿಂದ ಕೈಯಲ್ಲಿ ಚಪ್ಪಲಿ ತೆಗೆದುಕೊಂಡಿದ್ದಕ್ಕಾಗಿ.

5-00 p. m.

ಶ್ರೀಮತಿ ಪಾರ್ವತಮ್ಮನವರು ಸ್ವಾಮಿಗಳಿಗೆ ಚಪ್ಪಲಿಯನ್ನು ತೋರಿಸಿದ ಧೈರ್ಯ ನಿಜವಾಗಿಯೂ ಕೂಡ ನಾವು ಮೆಚ್ಚತಕ್ಕಂಥಾದ್ದು. ಆಕೆಯನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸಬೇಕಾಗುತ್ತದೆ. ಕೆಲವು ಜನ ಹೆಣ್ಣುಮಕ್ಕಳಲ್ಲಿ ಅಂಥ ಧೈರ್ಯ ಇರುವುದಿಲ್ಲ. ಕಾರಣ ಅವರು ಮಾನ ಮರ್ಯಾದೆಗಳಿಗೆ

ಅಂಜಿ ಸುಮ್ಮನೆ ಕುಳಿತುಕೊಳ್ಳುತ್ತಾರೆ. ನಾವು ಈ ವಿಷಯವನ್ನು ಲಘುವಾಗಿ ತೆಗೆದುಕೊಳ್ಳಬಾರದು. ಶ್ರೀಮತಿ ಪಾರ್ವತಮ್ಮನವರು ಮೊದಲು ತಮ್ಮ ಗಂಡ ವಿರೂಪಾಕ್ಷಗೌಡರಿಗೆ ಹೇಳಲಿಲ್ಲ. ಆಮೇಲೆ ತಮ್ಮ ಮಗನಿಗೆ ವಿಷಯ ಗೊತ್ತಾಗಿ ಆತ ಉಪಾಧ್ಯಾಯರಾದ ಶ್ರೀಮಾನ್ ವಿರೂಪಾಕ್ಷಗೌಡರಿಗೆ ತಿಳಿಸಿದ್ದಾರೆ. ಎಷ್ಟೋ ಜನ ಹೆಣ್ಣುಮಕ್ಕಳ ಮಾನಭಂಗವಾದರೂ ಸಹ ಅವರು ಬಾಯಿ ಬಿಡುವುದಿಲ್ಲ. ಕಾರಣವೇನೆಂದರೆ, ಆ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಳ್ಳಲು ಯಾರೂ ಮುಂದೆ ಬರುವುದಿಲ್ಲ. ಇದು ಸಣ್ಣ ವಿಷಯವಲ್ಲ. ಈ ವಿಷಯ ಎಲ್ಲರ ಕಣ್ಣು ಕುಕ್ಕಿಸುವಂಥಾದ್ದು. ಶ್ರೀಮತಿ ಪಾರ್ವತಮ್ಮನವರ ಗಂಡ ಉಪಾಧ್ಯಾಯ ವಿರೂಪಾಕ್ಷಗೌಡರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗಾವಣೆ ಕೂಡ ಮಾಡಿದ್ದಾರೆ. ಈ ವರ್ಗಾವಣೆಗೆ ಕಾರಣ, ಆಕೆ ಮೊದಲು ಸ್ವಾಮೀಜಿಗಳ ಅನುಕಂಪಕ್ಕೆ ಮಣಿಯಲಿಲ್ಲವೆಂದು ಮತ್ತೆ ಈ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾದ ಮೇಲೆ ಅನೇಕ ಸಂಘ ಸಂಸ್ಥೆಯವರು ಮೆರವಣಿಗೆಯನ್ನು ಮಾಡಿ ಬಂದ್ ಆಚರಿಸಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಬಂದ್ ಆಚರಿಸಿದ್ದಾರೆ. ಮೈಸೂರು ನಗರದಲ್ಲಿ ಬಂದ್ ಆಚರಿಸಿದ್ದಾರೆ. ಅದೇರೀತಿಯಲ್ಲಿ ರಾಯಚೂರ್ ನಗರದಲ್ಲಿ ಬಂದ್ ಆಚರಿಸಿದ್ದಾರೆ. ಇದೇ ರೀತಿಯಲ್ಲಿ ಇನ್ನೂ ಅನೇಕ ನಗರಗಳಲ್ಲಿ ಮಹಿಳಾ ಸಂಘ ಸಂಸ್ಥೆಗಳು ಬಂದ್ ಆಚರಿಸಿವೆ. ಆ ಎಲ್ಲಾ ಸಂಘ ಸಂಸ್ಥೆಗಳಿಗೂ ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗ ಈ ವಿಚಾರ ಈ ಸದನದಲ್ಲಿ ಪ್ರಸ್ತಾಪಕ್ಕೆ ಬಂದಿದೆ. ಮೇಲ್ಮನೆಯಲ್ಲಿ ಕೂಡ ಈ ವಿಷಯ ಚರ್ಚೆಯಾಗಿ ಅಲ್ಲಿ ಮಾನ್ಯ ಗೃಹ ಸಚಿವರು ಸದನದ ಸಮಿತಿಯನ್ನು ಕಳುಹಿಸಿಕೊಡುವಂತೆ ಭರವಸೆ ನೀಡಿದ್ದಾರೆ. ಈ ವಿಷಯ ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಓದಿದ್ದೇನೆ. ಇದರ ಅರ್ಥ ಕೆಳಮನೆಯ ಸದಸ್ಯರು, ಮತ್ತು ಮೇಲ್ಮನೆಯ ಸದಸ್ಯರು ಸೇರಿ ಸ್ಥಳಕ್ಕೆ ಭೇಟಿಕೊಟ್ಟು ಒಂದು ವರದಿಯನ್ನು ಕೊಡುತ್ತಾರೆ, ಆಮೇಲೆ ಸರ್ಕಾರದವರು ಆ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಗಳು ಈ ಸದನದಲ್ಲಿ ಹೇಳಬೇಕು. ಏಕೆಂದರೆ ಈಗಾಗಲೇ ಎರಡು ಕೇಸುಗಳಲ್ಲಿ ಚಾರ್ಜ್‌ಶೀಟ್ ಹಾಕಿದ್ದಾರೆ. ಇನ್ನೆರಡು ಕೇಸುಗಳಲ್ಲಿ ಚಾರ್ಜ್‌ಶೀಟ್ ಹಾಕಿಲ್ಲ. ಒಂದು ವೇಳೆ ಚಾರ್ಜ್‌ಶೀಟ್ ಫೈಲ್ ಮಾಡದೆ ಇದ್ದಿದ್ದರೆ ಆದರ ವಿಚಾರವೇ ಬೇರೆಯಾಗಿತ್ತು. ಆದರೆ ಇಲ್ಲಿ ಪರಿಸ್ಥಿತಿ ಹಾಗಿಲ್ಲ.

ಶ್ರೀ ಬಿ. ರಾಚಯ್ಯ.—ಎರಡು ಕೇಸ್‌ಗಳಲ್ಲಿ ಚಾರ್ಜ್‌ಶೀಟ್ ಹಾಕಿದ್ದಾರೆ. ಇನ್ನೆರಡು ಕೇಸ್‌ಗಳಲ್ಲಿ ಚಾರ್ಜ್‌ಶೀಟ್ ಹಾಕಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಒಂದೆರಡು ಪ್ರಕರಣಗಳು ಅಲ್ಲ. ಇಲ್ಲಿ ಸುಮಾರು ನಾಲ್ಕು ಪ್ರಕರಣಗಳು ಇವೆ. ಒಂದು ಮಠದಲ್ಲಿ ನಡೆದಿರತಕ್ಕಂಥ ಪ್ರಕರಣ, ಇನ್ನೊಂದು ಮೆರವಣಿಗೆ ಮಾಡಿರುವುದು, ಅದೂ ಬೆತ್ತಲೆಯಾಗಿ. ಇನ್ನೊಂದು ಶ್ರೀಮತಿ ಹುಸೇನ್ ಬೀಯವರನ್ನು ಮಾನಭಂಗ ಮಾಡಿರುವುದು. ಶ್ರೀಮತಿ ಪಾರ್ವತಮ್ಮ ಮತ್ತು ಸಾರ್ವಜನಿಕವಾಗಿ ಗಲಾಟೆಯಾಗಿರುವುದು, ಇತ್ಯಾದಿ ಕೇಸುಗಳನ್ನು ಹಾಕಿದ್ದೀರಿ. ಇದರಲ್ಲಿ ಯಾವ ಕೇಸಿನಲ್ಲಿ ಚಾರ್ಜ್‌ಶೀಟ್ ಹಾಕಿದ್ದೀರಿ, ಯಾವ ಕೇಸಿನಲ್ಲಿ ಚಾರ್ಜ್‌ಶೀಟ್ ಹಾಕಿಲ್ಲ ಎಂಬುದು ನಮಗೆ ಗೊತ್ತಿಲ್ಲ, ತಾವು ಸದನದ ಸಮಿತಿಯನ್ನು ನೇಮಕಮಾಡಿ ಕಳುಹಿಸಿ ಕೊಡುತ್ತಿದ್ದೀರಿ. ಈ ಮೇಲ್ಕಂಡ ನಾನಾ ವಿಚಾರಗಳಲ್ಲಿ ಯಾವುದಕ್ಕೆ ಸದನದ ಸಮಿತಿಯನ್ನು ನೇಮಕಮಾಡಿದ್ದೀರಿ ಎಂಬುದನ್ನೂ ಸಹ ಮಾನ್ಯ ಗೃಹ ಸಚಿವರು ತಿಳಿಸಬೇಕು. ಇದು ಸಾಮಾನ್ಯ ವಿಷಯವಲ್ಲ, ಇದು ಹೆಣ್ಣುಮಕ್ಕಳ ಸೀರೆಯನ್ನು ಬೀದಿಯಲ್ಲಿ ಕಿತ್ತು ಹಾಕಿರತಕ್ಕಂಥ ಪ್ರಕರಣ. ಇಂಥ ಪ್ರಕರಣವನ್ನು ಸ್ವಾಮೀಜಿಯವರು ಮಾಡದೆ ಬೇರೆ ಯಾರಾದರೂ ಮಾಡಿದ್ದರೆ ಇಷ್ಟರಲ್ಲಿ ನಿಮ್ಮ ಇಲಾಖೆಯ ಅಧಿಕಾರಿಗಳು ಹೋಗಿ ಅವರಿಗೆ ಬೇಡಿಗಳನ್ನು ಹಾಕಿ ಎಳೆದುಕೊಂಡು ಬರುತ್ತಿದ್ದರು. ಆದರೆ ತಾವು ನಿಜವಾದ ಅಪರಾಧಿಗಳಿಗೆ ಬೇಡಿಗಳನ್ನು ಹಾಕುವುದಕ್ಕೆ ಹೆದರಿಕೊಂಡಿದ್ದೀರಿ. ನಿರಪರಾಧಿಗಳಿಗೆ ಬೇಡಿಗಳನ್ನು ಹಾಕುವುದಕ್ಕೆ ನೀವು ಮುಂದಾಗುತ್ತೀರಿ. ಅನೇಕ ಜನ ರಾಜಕೀಯ ವ್ಯಕ್ತಿಗಳ ಕೈಗೆ ತಾವು ಬೇಡಿಗಳನ್ನು ಹಾಕಿದ್ದೀರಿ. ನಾನು ಈಗ ನಿಮ್ಮ ಮಾತನ್ನು ಹೇಳುತ್ತಿಲ್ಲ. ಹಿಂದೆ ನಡೆದಿರುವಂಥಾದ್ದು ಇಂತಹ ಪ್ರಯೋಗಗಳು ಬೇಕಾದಷ್ಟು ಸಾರಿ ನಡೆದಿವೆ. ಆದರೆ ತಾವು ಇಲ್ಲಿ ಮಾತ್ರ ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ಹೆಣ್ಣುಮಕ್ಕಳ ಮಾನವನ್ನು ಬೀದಿಯಲ್ಲಿ ಮಾರಾಟ ಮಾಡಲಾಗಿದೆ. ಆ ಹೆಣ್ಣು ಮಗಳ ಮಾನ ಬೀದಿಯಲ್ಲಿ ಮಾರಾಟವಾಗಿದೆ. ಈ ಬಗ್ಗೆ ಮಾನ್ಯ ಗೃಹ ಸಚಿವರು ಏನು ಹೇಳಿಕೆಯನ್ನು ಕೊಡುತ್ತಾರೋ ನೋಡಿಕೊಂಡು ಅನಂತರ ನಾನು ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ ಹಿಂದೆ ಮಧುಗಿರಿ ಪ್ರಕರಣದಲ್ಲಿ ಅಂದಿನ ಗೃಹಸಚಿವರಾದಂಥ ಶ್ರೀಮಾನ್ ರಾಮರಾವ್‌ರವರು ರಾಜೀನಾಮೆಯನ್ನು ಕೊಟ್ಟಿದ್ದಾರೆ ಬಹುಶಃ ಅದು ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿರಬೇಕು- ನನ್ನ ಇಲಾಖೆಯ ಅಧಿಕಾರಿಗಳು ಮಾಡಿರತಕ್ಕಂಥ ತಪ್ಪಿಗೆ ನಾನು ರಾಜೀನಾಮೆಯನ್ನು ಕೊಡುತ್ತೇನೆಂದು ಸ್ವಇಚ್ಛೆಯಿಂದ ರಾಜೀನಾಮೆಯನ್ನು ಕೊಟ್ಟರು. ಆದರೆ ನಾವು ಈಗ ನಿಮ್ಮ ರಾಜೀನಾಮೆಯನ್ನು ಕೇಳುತ್ತಿಲ್ಲ. ಆ ಒಂದು

ಉದ್ದೇಶ ಕೂಡ ನಮ್ಮದು ಅಲ್ಲ. ಕಾರಣ ತಮ್ಮ ಹೇಳಿಕೆಯಲ್ಲಿ ಹೇಳಿದ್ದೀರಿ ರೇಪ್ ಆಗಿಲ್ಲವೆಂದು. ಆದ್ದರಿಂದ ನಾವು ತಮ್ಮ ರಾಜೀನಾಮೆಯನ್ನು ಕೇಳುವುದಿಲ್ಲ. ಆದರೂ ಕೂಡ ಸರ್ಕಾರ ಈ ವಿಷಯದ ಬಗ್ಗೆ ತಲೆ ತಗ್ಗಿಸಬೇಕಾದುದು ಅವಶ್ಯಕ ಸದನದ ಸಮಿತಿಯನ್ನು ಏತಕ್ಕಾಗಿ ಮಾಡಿದ್ದೀರಿ ಎನ್ನುವ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದರೆ ಉಳಿದ ವಿಷಯವನ್ನು ಆಮೇಲೆ ಪ್ರಸ್ತಾಪ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಿದ ಮೇಲೆ ತಾವು ಬೇಕಾದರೆ ಕ್ಲಾರಿಫಿಕೇಷನ್ಸ್ ಕೇಳಿ. ನಾನು ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇಷ್ಟು ಹೇಳಿ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಧರ್ಮಸಿಂಗ್.—ಸನ್ಮಾನ್ಯ ಅಧ್ಯಕ್ಷರೇ ಕುದುರೆಮೋತಿಯ ಪ್ರಕರಣ ಇಡೀ ಕರ್ನಾಟಕ ರಾಜ್ಯದಲ್ಲಿಯೇ ಅಲ್ಲ ಇಡೀ ಭಾರತ ದೇಶದಲ್ಲಿಯೇ ಸಾಕಷ್ಟು ಪ್ರಚಾರ ಪಡೆದಿದೆ. ಈ ಬಗ್ಗೆ ಮೊಟ್ಟ ಮೊದಲನೆಯದಾಗಿ ನಾನು ಪತ್ರಿಕೆಗಳವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು. ಪತ್ರಿಕೆಯಲ್ಲಿ ಈ ವಿಷಯ ಪ್ರಕಟವಾದ ಮೇಲೆ ಎಲ್ಲಾ ಜನರಿಗೆ ಈ ವಿಷಯ ಗೊತ್ತಾಯಿತು. ಮಾನ್ಯ ಗೃಹಸಚಿವರಾದಂಥ ಶ್ರೀಮಾನ್ ರಾಚಯ್ಯನವರ ಕಾಲದಲ್ಲಿ ಅದೂ ಕರ್ನಾಟಕ ರಾಜ್ಯದಲ್ಲಿ ಇಂತಹ ಕೃತ್ಯ ನಡೆದಿದೆ. ಕರ್ನಾಟಕ ರಾಜ್ಯದಲ್ಲಿ ಹೆಣ್ಣು ಮಕ್ಕಳ ಮಾನಭಂಗ ಮತ್ತು ಬೀದಿಯಲ್ಲಿ ಮಾನಭಂಗ ಮಾಡುವುದು, ಬೆತ್ತಲೆಯಾಗಿ ಮಾನಭಂಗ ಮಾಡುವುದು ಇದೇ ಮೊದಲಬಾರಿಗೆ ಎಂದು ಕಾಣುತ್ತದೆ. ಯಾವ ಸರ್ಕಾರವಿದ್ದಾಗ ಕೂಡ ಇಂತಹ ಕಠೋರ ರೀತಿಯಲ್ಲಿ ನಡೆದಿರಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇದರಿಂದ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಹರಿಜನ ಗಿರಿಜನ ಮತ್ತು ಇನ್ನೂ ಅನೇಕ ಜನ ಹಿಂದುಳಿದ ಜನಾಂಗದವರನ್ನು ರಕ್ಷಣೆ ಮಾಡುವ ನಿರೀಕ್ಷೆ ಏನೂ ನನಗೆ ಇಲ್ಲ. ಈ ಘಟನೆ ನಡೆದ ತಕ್ಷಣ ಮಾನ್ಯ ಗೃಹಸಚಿವರು ತಮ್ಮ ರಾಜೀನಾಮೆಯನ್ನು ಕೊಡಬೇಕಾಗಿತ್ತು. ಆದರೆ ನಾವು ತಮ್ಮ ರಾಜೀನಾಮೆಯನ್ನು ಕೇಳುತ್ತಿಲ್ಲ. ಆ ಘಟನೆಯ ಹಿನ್ನೆಲೆಯನ್ನು ಅರಿತು ನೈತಿಕತೆಯಿಂದ ತಾವು ರಾಜೀನಾಮೆಯನ್ನು ಕೊಡಬೇಕಾಗಿತ್ತು. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಮಧುಗಿರಿಯ ಪ್ರಕರಣದಲ್ಲಿ ಶ್ರೀಮಾನ್ ರಾಮರಾವ್‌ರವರು ರಾಜೀನಾಮೆಯನ್ನು ಕೊಟ್ಟರು ಅದೇರೀತಿಯಲ್ಲಿ ಮುನಿಯಮ್ಮನ ಪ್ರಕರಣದಲ್ಲಿ ಅಂದಿನ ಗೃಹಸಚಿವರು ರಾಜೀನಾಮೆಯನ್ನು ಕೊಟ್ಟರು. ಅದೇರೀತಿಯಲ್ಲಿ ಶ್ರೀಮಾನ್ ಕಿತ್ತೂರ್‌ರವರು ಒಂದು ಪ್ರಕರಣದಲ್ಲಿ ರಾಜೀನಾಮೆಯನ್ನು ಕೊಟ್ಟರು. ಶ್ರೀಮಾನ್ ದೇವೇಂದ್ರಪ್ಪ ಘಾಳಪ್ಪನವರು ರಾಜೀನಾಮೆಯನ್ನು ಕೊಟ್ಟರು. ಆದರೆ ನಾವು ಮಾತ್ರ ತಮ್ಮ ರಾಜೀನಾಮೆಯನ್ನು ಕೇಳುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು.—ದೇವೇಂದ್ರಪ್ಪ ಘಾಳಪ್ಪನವರ ಕೇಸು ಬೇರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ವಿಷಯದ ಗಂಭೀರತೆಯನ್ನು ಅರಿತುಕೊಂಡರೆ ಒಳ್ಳೆಯದು.

ಶ್ರೀ ಧರ್ಮಸಿಂಗ್.—ಅದೇ ರೀತಿ ಒಂದು ಸಲ ಪೋಲೀಸ್ ಸ್ಟೇಷನ್‌ನಲ್ಲಿ ರೇಪ್ ಆಗಿರತಕ್ಕ ಹೊಣೆ ನನ್ನದು ಎಂಬ ರೀತಿಯಲ್ಲಿ ಮಾನ್ಯ ಪೂಣಚ್ಚ ಅವರು ಗೃಹಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇಂತಹ ಒಂದು ಘಟನೆಗೆ ಈಗಾಗಲೇ ಚಾರ್ಜ್‌ಶೀಟ್ ಹಾಕಿದ್ದೀರಿ, ಮತ್ತೊಂದು ಚಾರ್ಜ್ ಶೀಟ್ ಹಾಕುವವರಿದ್ದೀರಿ, ಮತ್ತು ಇದು ತನಿಖೆ ನಡೆಯುತ್ತಿದೆ ಎನ್ನತಕ್ಕ ರೀತಿಯುಲ್ಲಿದೆ. ಮಾನ್ಯ ರಾಚಯ್ಯನವರಿಗೆ ಈ ಬಗ್ಗೆ ಬಹಳ ಅನುಕಂಪ ಇದೆ. ಅವರು ಇದರ ಬಗ್ಗೆ ಏನಾದರೂ ಮಾಡಬೇಕೆಂದು ಮನಸ್ಸಿನಲ್ಲಿ ತೀರ್ಮಾನ ತೆಗೆದುಕೊಂಡರೂ ಕೂಡ, ಈ ವೆಸ್ಟೆಡ್ ಇಂಟರೆಸ್ಟ್, ಪಟ್ಟಭದ್ರ ಹಿತಾಸಕ್ತಿಗಳು ಡೆಮಾಕ್ರೆಟಿಕ್ ಟೈಪ್‌ನಲ್ಲಿ ಎಲ್ಲಾ ಕಾಲದಲ್ಲೂ ಇದ್ದೇ ಇರುತ್ತವೆ. ಏನೋ ಒತ್ತಾಡದ ಪರಿಣಾಮವಾಗಿ ಅವರಿಗೆ ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಅವರಿಗೆ ಕೈಕಟ್ಟಿದಂತಾಗಿದೆ. ಅಲ್ಲಿಗೆ ಸದನದ ಸಮಿತಿ ಹೋಗಬಹುದು. ಇದು ಹೆಣ್ಣುಮಕ್ಕಳ ಮಾನ ಮರ್ಯಾದೆ ಪ್ರಶ್ನೆ ಇದೆ. ಇವತ್ತೂ ಕೂಡಾ ಹಾಸನದಲ್ಲಿ ಎಲ್ಲಾ ಹೆಣು ಮಕ್ಕಳು, ವಿದ್ಯಾರ್ಥಿನಿಯರು, ಮೆರವಣಿಗೆ ಮಾಡಿ, ತಮ್ಮ ಭಾಷಣದಲ್ಲಿ ಇದನ್ನು ಹೇಳಿದ್ದಾರೆ. ಈ ರೀತಿಯಾದ ನಾಚಿಕೆಪಡತಕ್ಕ ಘಟನೆ ಕರ್ನಾಟಕದಲ್ಲಿ ಜರಗಿದೆ ಎಂದು ಹೇಳಿದ್ದೇನೆ. ಈ ಮುಂಚೆ ಕೂಡಾ ಹೇಳಿದ್ದೆ. ಒಂದು ವರ್ಷದ ಹಿಂದೆ ಗುಲ್ಬರ್ಗಾದಲ್ಲಿ ಪತ್ರಿಕಾ ಸಂಪಾದಕ ಶ್ರೀ ಸಿದ್ಧರಾಮೇಶ್‌ರವರನ್ನು ಪೋಲೀಸರು ಸಡಕ್‌ನಲ್ಲಿ ಹೊಡೆದುಕೊಂಡು ಹೋದರೂ ಕೇಳಲಿಲ್ಲ. ಅವರು ನನ್ನ ಕೊಲೆ ಆಗುತ್ತದೆ ಎಂದು ಹೇಳುತ್ತಿದ್ದರು. ಕೊಲೆ ಆಗಿಯೇ ಹೋಯಿತು ಸರಕಾರ ಇದೆ, ಕಾನೂನು ಇದೆ, ವಿಶೇಷವಾಗಿ ಇಂತಹ ಘಟನೆ ನಡೆದಂಥ ಸಂದರ್ಭದಲ್ಲಿ ಸರಕಾರ ಕಣ್ಣುಮುಚ್ಚಿಕೊಂಡು ಕುಳಿತಿಲ್ಲ ಎನ್ನತಕ್ಕ ರೀತಿಯಲ್ಲಿ, ಸರಿಯಾಗಿ, ಪ್ರಾಮಾಣಿಕತೆಯಿಂದ ಅವರು ವಾಚ್ ಮಾಡಿ ರಕ್ಷಣೆ ಕೊಡಬೇಕು. ರಾಜೀ ಮಾಡಲಿಕ್ಕೆ ಹೊರಟರೆ ಗದ್ದಲ ನಿರ್ಮಾಣವಾಗುತ್ತದೆ. ಹೆಣುಮಕ್ಕಳನ್ನು ಸಂರಕ್ಷಣೆ ಮಾಡುವ

ದಕ್ಕೆ ಆಗಲಿಲ್ಲ, ಅವರ ಮಾನ ಮರ್ಯಾದೆ ಸಂರಕ್ಷಣೆ ಮಾಡುವುದಕ್ಕೆ ಆಗಲಿಲ್ಲ. ಇದರಿಂದ ನೈತಿಕ ಹೊಣೆಗಾರಿಕೆ ಸರಕಾರದವರಿಗೆ ಇಲ್ಲ ಎಂಬುದು ಜನಗಳಿಗೆ ಗೊತ್ತಾಗುತ್ತದೆ. ಇದರ ಬಗ್ಗೆ ಸದನದ ಸಮಿತಿ ಆಗಲಿ ಸರಕಾರದಿಂದ ಸರಿಯಾದ ಉತ್ತರ ಬರಲಿ. ಮಾನ್ಯ ವೆಂಕಟರಾಮಯ್ಯನವರು ಹೇಳಿದರು—ಯಾರು ಯಾರು ಆ ಕ್ಷೇತ್ರದಲ್ಲಿರತಕ್ಕಂಥ, ಆ ಜಿಲ್ಲೆಯಲ್ಲಿರತಕ್ಕಂಥ, ಎಲ್ಲ ಕೆಲಸ ಕಾರ್ಯಗಳನ್ನು ಮಾಡತಕ್ಕ ಜನ ಏನಿದ್ದಾರೆ, ಅವರು ಇದರಲ್ಲಿ ಏನು ಅಡಗಿದೆ ಅದನ್ನು ಹೊರಗೆ ತರತಕ್ಕಂಥ ಪ್ರಯತ್ನ ಮಾಡದೆ. ಆ ಜನರಿಗೆ ಬೆದರಿಕೆ ಹಾಕಿದ್ದಾರೆ ಎಂದು ಎಲ್ಲ ಕಡೆಗೂ ಕೂಡಾ ಉದ್ಧಟತನ ಆಗುತ್ತಿದೆ ಸ್ವಾಮೀಜಿ ಇರಲಿ, ಬೇರೆ ಯಾರೇ ಇರಲಿ, ಅದಕ್ಕೆ ಹೋಗುವುದಿಲ್ಲ. ಇವತ್ತು ಏನಾಗಿದೆ ಎಂದರೆ ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಗೂಂಡಾ ಆಕ್ಟ್ ಮಾಡಿರುತ್ತೀರಿ, ಇವತ್ತು ಗೂಂಡಾ ಆಕ್ಟ್ ಏತಕ್ಕೆ ಮಾಡಿರುತ್ತೀರಿ ? ನೋಡಿ ಖುಷಿ ಪಡುವುದಕ್ಕೆ ಮಾಡಿರುತ್ತೀರಾ ? ಗೂಂಡಾ ಆಕ್ಟ್‌ನಲ್ಲಿ ಯಾರು ಯಾರು ಸಮಾಜದಲ್ಲಿ ಇಂತಹ ವ್ಯಕ್ತಿಗಳು ಇದ್ದಾರೆ ಅವರ ಮೇಲೆ ಕ್ರಮ ತೆಗೆದ ಕೊಳ್ಳುವುದಕ್ಕೆ ಇದನ್ನು ತಂದಿದ್ದೇವೆ ಎಂದು ಹೇಳಿದ್ದಾರೆ. ಪೋಲೀಸ್ ಅಧಿಕಾರಿಗಳಿಗೆ ಇವತ್ತಿನ ದಿವಸ ನೀವು ಆದೇಶ ಕೊಟ್ಟರೆ, ನೀವು ಮಾಡಲೇ ಬೇಕೆಂದು ಹೇಳಿದರೆ ಮಾಡುತ್ತಾರೆ. ನನಗನ್ನಿಸುತ್ತಿದೆ'—ಇದರ ಹಿನ್ನೆಲೆಯಲ್ಲಿ ಸಾಕಷ್ಟು ವೆಸ್ಟೆಡ್ ಇಂಟರೆಸ್ಟ್ಸ್ ಕೆಲಸ ಮಾಡುತ್ತಿವೆ ಎಂದು ಸರಕಾರ ಇದರ ಬಗ್ಗೆ ಒಂದು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ರಾಚಯ್ಯನವರು ಬಹಳ ಪ್ರಾಮಾಣಿಕತನದಿಂದ ಇವತ್ತು ಈ ವಿಷಯ ದಲ್ಲಿ ಮುಚ್ಚುಮರೆ ಇಲ್ಲದೆ, ಒಳ್ಳೆಯವನ್ನು ಮಾಡಿದ್ದೇವೆ ಎಂದು ಕರ್ನಾಟಕದ ಜನರಿಗೆ ತೋರಿಸಿಕೊಡಬೇಕಾದರೆ ತಪ್ಪಿತಸ್ಥರನ್ನು ಶಿಕ್ಷಿಸಬೇಕು. ಇದರಿಂದ ನಮ್ಮ ರಾಜ್ಯದಲ್ಲಿ ಒಳ್ಳೆಯ ಕಾನೂನು ವ್ಯವಸ್ಥೆ ಇದೆ, ರಕ್ಷಣಾ ವ್ಯವಸ್ಥೆ ಇದೆ ಎಂದು ಜನಗಳಿಗೆ ಗೊತ್ತಾಗುತ್ತದೆ. ಇಷ್ಟನ್ನು ನಾನು ಪ್ರಸ್ತಾಪ ಮಾಡುತ್ತೇನೆ.

*ಶ್ರೀಮತಿ. ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ವಿಚಾರ ಮಾತನಾಡವಾಗ ಗಂಟಲು ಹಿಡಿಯುತ್ತದೆ, ನನಗೆ ಎದೆ ಹೊಡೆದುಕೊಳ್ಳುತ್ತಿದೆ. ಇಂಥ ವಿಚಾರಗಳನ್ನು ಈ ಸಭೆಯಲ್ಲಿ ಮಾತನಾಡಬೇಕು. ಹೆಣ್ಣು ಮಕ್ಕಳಿಗೆ ಹೀಗೆ ಆಗಿದೆ, ಹಾಗೆ ಆಗಿದೆ ಎಂದು ಗಂಡು ಮಕ್ಕಳ ಮುಂದೆ ಹೇಳಬೇಕು. ನಮಗೆ ರಕ್ಷಣೆ ಇಲ್ಲ ಎಂದು ಹೇಳಿಕೊಳ್ಳಬೇಕೆಂದರೆ ನಮ್ಮ ಪರಿಸ್ಥಿತಿ ಏನಾಗಿದೆ ಎನ್ನತಕ್ಕದ್ದನ್ನು ಎಲ್ಲರೂ ನೋಡಬೇಕು. ಹೆಣ್ಣುಮಕ್ಕಳು ಈ ದೇಶದಲ್ಲಿ ಇಲ್ಲಿಯಲ್ಲ, ಎಲ್ಲಾ ಕಡೆಗಳಲ್ಲೂ ಫರ್ಸ್ಟ್ ಕ್ಲಾಸ್ ಸಿಟಿಜನ್ಸ್ ಅಲ್ಲ, ಫೋರ್ತ್‌ಕ್ಲಾಸ್ ಸಿಟಿಜನ್ಸಿಗಿಂತ ಕಡಿಮೆಯಾಗಿದ್ದಾರೆ. ಅಂತಹ ಹೀನ ಸ್ಥಿತಿ ಬಂದಿದೆ. ಇದು ಎಲ್ಲರಿಗೂ ತಮಾಷೆ, ಎಲ್ಲರಿಗೂ ಹುಡುಗಾಟ, ಎಲ್ಲರಿಗೂ ನಗೆ ಪಾಟಲು. ಒಬ್ಬರು ಸೀರೆ ಬಿಚ್ಚಿದರು, ಇನ್ನೊಬ್ಬರು ಲಂಗ ಬಿಚ್ಚಿದರು ಎನ್ನುತ್ತಾರೆ. ಇನ್ನೊಬ್ಬರು ರೇಪ್ ಆಗಿಲ್ಲ ಎನ್ನುತ್ತಾರ, ಇನ್ನೊಬ್ಬರು ರೇಪ್ ಆಗಿದೆ ಎನ್ನುತ್ತಾರೆ. ಇನ್ನೂ ಏನೇನು ಕೇಳಬೇಕೊ, ಈ ಸಭೆಯಲ್ಲಿ. ಇನ್ನು ನಮಗೆ ಏನೇನು ಶಿಕ್ಷೆ ಆಗಬೇಕು, ಈ ದೇಶದಲ್ಲಿ ಹೆಣ್ಣುಮಕ್ಕಳು ಬಹಳ ಧೈರ್ಯದಿಂದ ಹಾಡುಹಗಲಿನಲ್ಲಿ, ರಾತ್ರಿವೇಳೆಯಲ್ಲಿ ಸರಿಹೊತ್ತಿನಲ್ಲಿ ಓಡಾಡಬಹುದಾದಂತಹ ಪರಿಸ್ಥಿತಿ ಇಲ್ಲ. ಎಷ್ಟು ಜನರ ಮಾಂಗಲ್ಯದ ಸರ ಕಿತ್ತುಕೊಂಡರು, ಎಷ್ಟು ಜನರ ಕಿವಿ ಓಲೆ ಕಿತ್ತು ಕೊಂಡರು, ಎಷ್ಟು ಜನರ ಬಟ್ಟೆ ಕಿತ್ತುಕೊಂಡರು ಎಂಬುದನ್ನು ಹೆಣ್ಣು ಮಕ್ಕಳು ಕೇಳಬೇಕಾಗಿದೆ. ನಮಗಿರತಕ್ಕ ರಕ್ಷಣೆ ಇದು ಬರೀ ಪೋಲೀಸರಿಂದ ಆಗುವುದಿಲ್ಲ. ಗೃಹ ಮಂತ್ರಿಗಳಿಂದ ಆಗುವುದಿಲ್ಲ. ಇಲ್ಲಿ ಕುಳಿತಂಥ ಎಲ್ಲಾ ಗಂಡು ಮಕ್ಕಳಿಂದ ಆಗಬೇಕಾದ ಕೆಲಸ ಇದು. ಇದನ್ನು ಯಾರು ನೋಡಬೇಕಾಗಿತ್ತು. ಅಲ್ಲಿರತಕ್ಕಂಥ ಗಂಡಸರು ಏನು ಸತ್ತು ಹೋಗಿದ್ದರೇ ಅವರೇನು ಮನುಷ್ಯರಾಗಿದ್ದಾರೋ ? ರಾಕ್ಷಸರಾಗಿದ್ದಾರೋ ? ಅವನು ಸ್ವಾಮಿನೋ ಯಾವ್ನೋನೋ ? ಅವನು ಎಂಥವನಾದರೂ ಆಗಲೀ, ನಾನೇನಾದರೂ ಗೃಹಮಂತ್ರಿಯಾಗಿದ್ದರೆ ಅವನನ್ನು ಹಿಡಿದುಕೊಂಡು ಒಂದು ದೊಡ್ಡ ಮರಕ್ಕೆ ನೇಣು ಹಾಕಿಸಿಬಿಡುತ್ತಿದ್ದೆ. ಇಂತಹ ಸಂದರ್ಭದಲ್ಲಿ ಅವರೊಬ್ಬರು ಹೇಳುತ್ತಾರೆ, ಇವರೊಬ್ಬರು ಕೇಳುತ್ತಿದ್ದಾರೆ. ಮೂಗ ಹೇಳಿದ, ಕಿವುಡ ಕೇಳಿದ, ಕುರುಡ ನೋಡಿದನಂತೆ, ಇಂತಹ ಪರಿಸ್ಥಿತಿ ಬಂದಿದೆ ; ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳಿಗೆ ಯಾವ ತರಹದ ರಕ್ಷಣೆಯೂ ಇಲ್ಲ. ದೊರೆತನಕ ದೂರು ಹೋಗಬೇಕು. ದಿನಬೆಳಗಾದರೆ ಅದೇ. ಇವತ್ತು ಕುದುರೆಮೋತಿ ಆಯಿತು. ಇವತ್ತು ಹಾಸನದಲ್ಲಿ ಇದೇ ರೀತಿ ಆಗಿದೆ. ನಾನು ಇದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ಮೋಷನ್ ಕಳುಹಿಸಿದ್ದೇನೆ. ದಿನೇ ದಿನೇ ಪತ್ರಿಕೆ ತೆಗೆದರೆ ಸಾಕು, ಎದೆ ಡಬ ಡಬ ಹೊಡೆದುಕೊಳ್ಳುತ್ತಿದೆ. ಯಾವ ಹೆಣ್ಣು ಮಕ್ಕಳಿಗೆ ಏನಾಗಿದೆಯೋ ? ಯಾರ ಅಕ್ಕತಂಗಿಯರಿಗೆ ಏನಾಗಿದೆಯೋ, ಯಾರ ಮನೆಯಲ್ಲಿ ಏನಾಗಿದೆ, ಎಲ್ಲಿ ನೋಡಿದರೂ ಇದೇ ರೀತಿಯ ವ್ಯವಹಾರ ಆಗಿ ಹೋದರೆ ಯಾರ ಹತ್ತಿರ ಹೋಗಿ ನಾವು ದೂರು ಹೇಳಬೇಕು, ಜಾಸ್ತಿ ಮಾತು ನನಗೆ ಬೇಕಾಗಿಲ್ಲ. ಹೆಣ್ಣು ಮಕ್ಕಳಿಗೆ ಯಾವ ತರಹ ರಕ್ಷಣೆ ಕೊಡಬೇಕು, ಯಾವ ತರಹ ನಡೆದುಕೊಳ್ಳಬೇಕು. ನಿಮ ? ಹೆಂಡತಿಯರು ಇಲ್ಲವೇ ? ಹೆಂಡತಿಯರು, ಬೇಡ, ಅಕ್ಕತಂಗಿಯವರು ಬೇಡ, ತಾಯಿ ಇಲ್ಲವೇಗು

ತಾಯಿಯ ಮರ್ಯಾದೆ ಎಷ್ಟು ಎಂದು ಹೇಳುವುದಕ್ಕೆ ಹೊರಟಿದ್ದೀರಿ. ನೀವು ಪರಿಹಾರ ಕೊಡುತ್ತಿದ್ದೀರಿ. ಸೀರೆ ಬಿಚ್ಚಿದರೆ ಹತ್ತು ಸಾವಿರ ರೂಪಾಯಿ ಪರಿಹಾರ ಕೊಡುತ್ತೀರಿ, ರೇಪ್ ಮಾಡಿದರೆ ಹದಿನೈದು ಸಾವಿರ ರೂಪಾಯಿ ಪರಿಹಾರ ಕೊಡುತ್ತೀರಿ. ಹಾಗಾದರೆ ಹೆಣ್ಣು ಮಕ್ಕಳ ಮಾನದ ಬೆಲೆ ಎಷ್ಟು ? ಒಂದು ಕಾಸೇ ಒಂದು ಸಾವಿರ ರೂಪಾಯಿಯೇ, ಒಂದು ಲಕ್ಷ ರೂಪಾಯಿಯೇ, ಒಂದು ಕೋಟಿ ರೂಪಾಯಿಯೇ ? ಒಂದು ಸಾರಿ ಕಳೆದುಕೊಂಡ ಮಾನ ತಿರುಗಿ ಬರುತ್ತದೆಯೇ ? ಯಾರಿಗಾದರೂ ಬಂದಿರುವುದನ್ನು ಸ್ವಲ್ಪ ತೋರಿಸಿ. ನಿಮ್ಮ ಕಾಲದಲ್ಲಿ ಆಗಲೀ, ಕಲಿಯುಗದಲ್ಲೇ ಆಗಲಿ, ಬಂದಿರುವುದನ್ನು ತೋರಿಸಿ. ದ್ರೌಪದಿಯ ಸೀರೆಯನ್ನು ಸೆಳೆದ ಗಂಡಸು ಜನಾಂಗ ನೀವು. ಅದೇ ಟ್ರೆಡಿಷನ್ ಇಟ್ಟುಕೊಂಡು ಬಂದಿದ್ದೀರಿ. ಅದನ್ನು ಬಿಡುವುದಕ್ಕೆ ಸಾಧ್ಯವಿಲ್ಲ. ಯಾರೋ ಗೃಹಸಚಿವರನ್ನು ರಾಜೀನಾಮೆ ಕೊಡಿ ಎಂದು ಹೇಳಿದರು. ರಾಜೀನಾಮೆ ಕೊಟ್ಟರೆ ಆಕಾಶ ಬಿದ್ದು ಹೋಗುತ್ತದೆಯೇ ? ರಾಜೀನಾಮೆ ಕೊಟ್ಟರೆ ಭೂಮಿ ಕುಸಿದು ವಿಧಾನಸೌಧ ಬಿದ್ದು ಹೋಗುತ್ತದೆಯೇ ? ರಾಜೀನಾಮೆ ಕೊಟ್ಟರೆ ನಿಮ್ಮ ಗೌರವ ಹೊರಟುಹೋಗಿ ಎಲ್ಲ ಹರಾಜಾಗುತ್ತದೆ. ಆದರೆ ಹೆಣ್ಣು ಮಕ್ಕಳ ಮಾನ ಹೋದರೆ ಏನೂ ಆಗುವುದಿಲ್ಲ. ಹೆಣ್ಣು ಮಕ್ಕಳು ನಿಮ್ಮ ಕೈಯಲ್ಲಿ ಸಿಕ್ಕಿಕೊಂಡು ಆಟಿಕೆಯ ವಸ್ತುಗಳಾಗಿದ್ದಾರೆ. ಅವರಿಗೆ ಮಾನ ಮರ್ಯಾದೆ ಏನೂ ಇಲ್ಲ. ಹೆಣ್ಣುಮಕ್ಕಳನ್ನು ಹರಾಜು ಹಾಕಿಬಿಡಿ. ಯಾರಿಗಾದರೂ ಆಯ್ಯೋ ಹೀಗಾಗಿದೆಯಲ್ಲ ಎಂದು ತವಕ ಇಲ್ಲ. ಎಲ್ಲರಿಗೂ ನಗು, ತಮಾಷೆಯಾಗಿಹೋಯಿತು. ಇಷ್ಟೆಲ್ಲಾ ಆಗಿ ಹೋಯಿತು. ಈಗ ಯಾವ ತರಹ ರಕ್ಷಣೆ ಕೊಡುತ್ತೀರೋ, ಅವರಿಗೆ ಕೊಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೇ, ಇವತ್ತು ಯಾರು ಧರ್ಮವನ್ನು ರಕ್ಷಣೆ ಮಾಡಬೇಕಾಗಿತ್ತು ಅವರೇ ಆ ಧರ್ಮಕ್ಕೆ ಇಳಿದಿದ್ದಾರೆ. ಇಂತಹ ಸ್ವಾಮೀಜಿಗಳನ್ನು ಸರ್ಕಾರದವರು ಈ ಘಟನೆ ನಡೆದ ಮರುದಿನವೇ ಅರೆಸ್ಟ್ ಮಾಡಿ ಬೀದಿಯಲ್ಲಿ ಕೋಳ ಹಾಕಿಕೊಂಡು ಮೆರವಣಿಗೆ ಮಾಡಬೇಕಾಗಿತ್ತು. ಸರ್ಕಾರ ಇವತ್ತು ಇದರ ಬಗ್ಗೆ ಯಾವ ಒಂದು ಯೋಚನೆಯನ್ನೂ ಮಾಡಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಎಲ್ಲಾ ಸೇರಿ ಬೀದಿಯಲ್ಲಿ ಹೆಣ್ಣುಮಕ್ಕಳ ಬೆತ್ತಲೆ ಮೆರವಣಿಗೆ ಮಾಡಿದರೂ ಸಹಾ ಪೋಲೀಸರು ಸುಮ್ಮನಿದ್ದರು ಎಂದು ಹೇಳಿದರೆ ಸರ್ಕಾರ ಇದೆಯೇ ಎಂಬುದನ್ನು ನೋಡಬೇಕಾಗುತ್ತದೆ. ಇದರಿಂದ ಇಷ್ಟೆಲ್ಲಾ ಸರ್ಕಾರಕ್ಕೆ ಮೊದಲೇ ಗೊತ್ತಿತ್ತು ಎಂದು ಹೇಳಬೇಕಾಗುತ್ತದೆ. ಇಂತಹ ಸಂದರ್ಭ ಇದ್ದಾಗ್ಯೂ ಸಹಾ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿರತಕ್ಕಂಥದ್ದು ಬಹಳ ದೊಡ್ಡ ಅನ್ಯಾಯ. ಕರ್ನಾಟಕದಲ್ಲಿ ಹಿಂದೆ ಎಂದೂ ಇಂತಹ ಘಟನೆ ನಡೆದಿಲ್ಲ, ಇನ್ನುಮುಂದೆಯೂ ನಡೆಯಬಾರದು ಎಂದು ಹೇಳುತ್ತೇನೆ. ಈ ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡದೇ ಇರತಕ್ಕಂಥ ಕಾಲದಲ್ಲಿ ಸರ್ಕಾರ ಯಾರಿಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯ ಎಂಬುದನ್ನು ನೋಡಬೇಕಾಗಿದೆ.

ಯಾರಿಗೆ ರಕ್ಷಣೆ ಅಗತ್ಯವೋ ಅಂಥವರಿಗೆ ರಕ್ಷಣೆ ಕೊಡಲು ಸರ್ಕಾರಕ್ಕೆ ಸಾಧ್ಯತೆ ಇದೆ ಎಂಬುದನ್ನು ಹೇಳಬಯಸುತ್ತೇನೆ. ಇಂತಹ ಸ್ವಾಮಿಗಳು, ಮಠಗಳು ಬೇಕಾದಷ್ಟು ಇವೆ. ಒಂದು ಸಾರಿ ಒಂದುಕಡೆ ಒಬ್ಬ ಸ್ವಾಮೀಜಿಯವರು ಅಕೃತ್ಯ ನಡೆಸಿದ ಸಂದರ್ಭದಲ್ಲಿ ಅವರನ್ನು ಹೊಡೆದು ಓಡಿಸಿರತಕ್ಕಂಥ ಸಂದರ್ಭಗಳೂ ಉಂಟು. ಇಂತಹ ವಿಚಾರಗಳಲ್ಲಿ ಸರ್ಕಾರ ಒಂದೇ ಅಲ್ಲ, ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಕ್ರಮ ತೆಗೆದುಕೊಂಡು ಇದನ್ನು ಖಂಡನೆ ಮಾಡುವುದಲ್ಲದೆ, ಮುಂದೆ ಇಂತಹ ಕೃತ್ಯಗಳು ಮಠಗಳಲ್ಲಿ ಆಗದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ನಮ್ಮ ವೈಜ್ಞಾನಿಕ ಯುಗದಲ್ಲಿ ಹೆಂಗಸರೆಲ್ಲರೂ ಅಕ್ಕತಂಗಿಯರೆಂದು ಭಾವಿಸಬೇಕು. ಈ ರೀತಿಯಾದ ಅಮಾನುಷ ಕೃತ್ಯ ಎಂದೂ ಎಲ್ಲೂ ನಡೆದಿರಲಿಲ್ಲ, ಪ್ರಪಂಚದಲ್ಲಿ ಎಲ್ಲೂ ನಡೆದಿರಲಿಲ್ಲ. ಇದನ್ನು ಎಲ್ಲರೂ ಖಂಡನೆ ಮಾಡಬೇಕು. ಇಲ್ಲದೇಹೋದರೆ, ಅಲ್ಲಿನ ಜನ ಮುಂದೆಯೂ ಇಂತಹ ಅಮಾನುಷ ಕೃತ್ಯಗಳನ್ನು ಮಾಡಲು ಹೆದರುವುದಿಲ್ಲ. ಅದಕ್ಕೋಸ್ಕರವಾಗಿ ತಾವು ರಕ್ಷಣೆ ಕೊಡುವುದಕ್ಕೆ ಅಲ್ಲಿ ಒಂದು ಪೋಲೀಸ್ ಠಾಣೆಯನ್ನು ಮಾಡಿ, ಪೋಲೀಸ್ ವ್ಯಾನ್‌ನನ್ನು ಇಡುವ ಏರ್ಪಾಡು ಮಾಡಬೇಕು. ಇನ್ನುಮುಂದೆ ಹೆಣ್ಣುಮಕ್ಕಳಿಗೆ ಎಲ್ಲಾ ರೀತಿಯ ರಕ್ಷಣೆ ಕೊಟ್ಟರು ಮುಂದೆ ಇಂಥಾದ್ದು ಆಗದಂತೆ ಕ್ರಮ ತೆಗೆದುಕೊಂಡು, ಇಂತಹವರಿಗೆ ಶಿಕ್ಷೆ ಕೊಡಲೇಬೇಕು. ಅಷ್ಟೇ ಅಲ್ಲ ಪೋಲೀಸ್ ಅಧಿಕಾರಿಗಳು ಇನ್‌ವೆಸ್ಟಿಗೇಷನ್ ಮಾಡತಕ್ಕ ಕಾಲದಲ್ಲಿ ಸರಿಯಾದ ರೀತಿಯಲ್ಲಿ ಇನ್‌ವೆಸ್ಟಿಗೇಷನ್ ಮಾಡಬೇಕು. ಯಾರ ಬಲೆಗೂ ಬೀಳದೆ, ಇಂತಹ ಘಟನೆಗಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷೆ ಆಗುವ ರೀತಿಯಲ್ಲಿ ಮಾಡಬೇಕು ಇನ್ನುಮುಂದೆ ಇಂತಹ ಕೃತ್ಯ ಆಗಕೂಡದು ಎಂದು ಹೇಳಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Smt. Muktarunnisa (Narasimharaja).—Mr. Speaker Sir, I dont want to take much of the time of this august House. I fully endor e the views expressed by Smt' Nagarathnamma. I don't know in

detail as to what trauspired in Kudermothi village. But I have read about it in the newspapers. I think women are our mothers, sisters and daughtere. I am pained very much to pose one question to the Hon'ble Home Mininister. Has he taken any initiative in conducting proper enquiry when Smt. Hussainabee was beaten severely and admitted to the hospital? Has he conducted enquiry when the people threw mud on her and touched her breast with burning Cigarette? It is not shameful? We the women, are mothers, sisters or daughters of somebody. We constitute 53% of the population. What is the punishment that the Government is giving to the cnlprits? Is it only imprisonment? I urgs that the cuiprits should be made to wear Sarees and blouse and taken in a procession as in the case of Kudremotoi village. It is a shame on the part of Karnataka, to have treated a lady in this way. Karnataka State is known as a sacred State and the peopla say that the people of Karnataka are orthodox. But this incident is a reflection on the part of Karnataka State. I know the Hon'ble Home Minister. He comes form my district and I know that he is a good man. Hon'ble lady Members are also on other side and in this matter, we are all one. It is a question of the prestige of the women I request the Hon'bie Minister to hold proper enquiry and initiate immodiate action against the culprits and I also insist that tae culprits should be taken in a proossion, as they have done to the women in Kudremothi

* ಶ್ರೀ ಎಂ. ಎಸ್. ಕೃಷ್ಣನ್.— ಸನ್ಮಾನ್ಯ ಅಧ್ಯಕ್ಷರೇ, ಜೂನ್ 11ನೇ ತಾರೀಖು ನಮ್ಮ ರಾಜ್ಯದಲ್ಲಿ ಒಂದು ಕರಾಳ ದಿನ. ನಮ್ಮ ಅಭಿಪ್ರಾಯದಲ್ಲಿ ಯಾರು ಮನುಷ್ಯರಾಗಿ ವರ್ತಿಸಬೇಕಾಗಿತ್ತೋ ಅವರು ಮನುಷ್ಯರಾಗಿ ವರ್ತಿಸಿಲ್ಲ. ಯಾರು ಸ್ವಲ್ಪ ಮಟ್ಟಿಗಾದರೂ ಮಾನವೀಯತೆಯನ್ನು ತೋರಿಸಬೇಕಾಗಿತ್ತೋ ಅಂತಹವರು ತೋರಿಸಿಲ್ಲ. ಮಹಿಳೆಯರೂ ನಮ್ಮ ದೇಶದಲ್ಲಿ ಸರ್ವಸಮಾನವಾಗಿ ಇರಬೇಕೆಂದು ಯಾರು ಹೇಳಿಕೊಳ್ಳುತ್ತಾರೆ ಅಂತಹ ಜನ ಮಹಿಳೆಯರ ಬಗ್ಗೆ ಕಾಳಜಿ ವ್ಯಕ್ತಪಡಿಸಿಲ್ಲ. ಮೂಕ ಪ್ರಾಣಿಗಳಾಗಿ ನಡೆದುಕೊಂಡಹಾಗೆ ಕಾಣುತ್ತದೆ ಶ್ರೀಮತಿ ನಾಗರತ್ನಮ್ಮನವರು ಹೇಳಿದ್ದನ್ನು ನಾನು ಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ. ಇಂತಹ ಘಟನೆ ನಡೆದಾಗ ಎಷ್ಟು ಜನರು ಪ್ರತಿಭಟನೆ ತೋರಿಸಿದರು. ಮಠದ ಸ್ವಾಮಿಗಳು ಮಾಡಿದ ಘಟನೆ, ತೀರಾ ಖಂಡಿಸಬೇಕಾದ ಘಟನೆ. ಅವರಿಗೆ ನಾವು ಮರ್ಯಾದೆ ಕೊಡುತ್ತೇವೆ. ದೈವಾಂಶಸಂಭೂತರೆಂದೂ, ಸಕಲ ಸದ್ಗುಣಗಳೂ ಇವೆಯೆಂದೂ ಹೇಳಿಕೊಳ್ಳುತ್ತಾರೆ. ಇಂತಹವರು ಈ ತರಹ ಕೆಲಸಗಳಿಗೆ ಹೋಗುವುದಿಲ್ಲ. ಇಂತಹ ಜನ ಈ ಕೃತ್ಯಗಳಿಗೆ ಇಳಿದರೆ ಅದನ್ನು ನಾವು ನೋಡಿಕೊಂಡು ಸುಮ್ಮನೆ ಇದ್ದೇವೆ. ಇದರ ಬಗ್ಗೆ ಸ್ವಾಮಿಗಳನ್ನು ಟೀಕೆ ಮಾಡಬೇಕೋ, ಯಾರನ್ನು ಟೀಕೆ ಮಾಡಬೇಕೋ ನನಗೆ ಅರ್ಥವಾಗುವುದಿಲ್ಲ. ಸ್ವಾಮಿಗಳ ಬಗ್ಗೆ ಟೀಕೆ ಮಾಡಬೇಕು ಎಂದು ಎಲ್ಲರೂ ಹೇಳಿದ್ದಾರೆ. ಖಂಡಿಸಬೇಕು ಅಥವಾ ಏನು ಮಾಡಿದರೂ ಸರಿಯೇ. ಅವರು ಜಾಮೀನು ತೆಗೆದುಕೊಡು ಬಂದಿದ್ದಾರೆ. ಪೋಲೀಸಿನವರು ಚಾರ್ಜ್‌ಶೀಟ್ ಹಾಕಿದ್ದಾರೆಂದು ಹೇಳುತ್ತಿದ್ದಾರೆ. ಚಡಿ ಏಟು ಹಾಕಿಸಬೇಕಾಗಿತ್ತು. ಗೂಂಡಾ ಆಕ್ಟ್‌ನಲ್ಲಿ ಅವರನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಇಡಬೇಕಾಗಿತ್ತು. ಇಂತಹ ಸಮಾಜಘಾತಕರು ಮತ್ತು ಸಮಾಜ ಕಂಟಕರನ್ನು ಜೈಲಿನಲ್ಲಿ ಇಡಲಿಲ್ಲ. ಇದು ಏಕೆ ಆಯಿತು, ಇಂತಹ ಸನ್ನಿವೇಶಗಳು ಹಲವಾರು ಕಡ ನಡೆದಿವೆ. ಕರ್ನಾಟಿಕದಲ್ಲಿ ಪತ್ರಿಕೆಯವರು ಇದನ್ನು ದೊಡ್ಡದಾಗಿ ಪ್ರಚಾರ ಮಾಡಿರುವುದನ್ನು ಶ್ಲಾಘನೆ ಮಾಡಬೇಕಾಗಿದೆ. ಇಂತಹ ಘಟನೆಗಳು ಎಷ್ಟೋ ಕಡೆ ಆಗಿದ್ದು, ಮಾನಭಂಗ ಆಗಿರುವುದನ್ನು ನಾವು ಪತ್ರಿಕೆಯಲ್ಲಿ ಓದುತ್ತೇವೆ. ಹಾಸನದಲ್ಲಿ ಇಂತಹ ಕೃತ್ಯ ನಡೆದಿದೆ. ಅರಸೀಕೆರೆಯ ಹತ್ತಿರ ಯಾವುದೋ ಒಂದು ಹಳ್ಳಿಯಲ್ಲಿ ಇದೇ ತರಹ ಘಟನೆ ನಡೆದಿದೆ. ಇದನ್ನು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಏತಕ್ಕಾಗಿ ಈ ರೀತಿ ಆಗುತ್ತದೆ ? ಕೆಲವರಿಗೆ ಕಾಮುಕತನ ಇದೆ, ಆ ಕಾಮುಕತನದಿಂದ ಇದು ಬಂದಿದೆಯೆಂದು ಕೆಲವರು ಹೇಳಿಕೊಳ್ಳುತ್ತಾರೆ. ಅದು ನಿಜವಿರಬಹುದು, ಮೂಲಭೂತವಾಗಿ, ಜಾತಿ, ಮತ ಕುಲ ಎಂದು ಹೇಳಿ

ಕೊಂಡು ಕೆಲವರು ದೇಶವನ್ನು, ಸಮಾಜವನ್ನು ಕಟ್ಟಿದ್ದಾರೆ, ಅವರಿಂದ ಇದು ನಡದಿದೆ. ಅವರ ಜೊತೆಯಲ್ಲಿ ಕೆಲವು ವರ್ಗಗಳು ಶೋಷಣೆ ಮಾಡುತ್ತಿವೆ. ಅವರು ಇವರ ಜೊತೆಯಲ್ಲಿ ಸೇರಿಕೊಳ್ಳುತ್ತಾರೆ. ಸ್ವಾಮಿಗಳೆಂದು ಸೋಗು ಹಾಕಿಕೊಂಡು ಮಾಡುವವರೂ ಇದ್ದಾರೆ. ಎಲ್ಲಿಯವರೆಗೆ ಬಂಡವಾಳಶಾಹಿ ಸಮಾಜ ಇರುತ್ತದೆ, ಅಲ್ಲಿಯ ತನಕ ಇದು ನಡೆಯುತ್ತಿರುತ್ತದೆ.

ಶ್ರೀ ಬಿ. ಸೋಮಶೇಖರ್.—ರಷ್ಯಾ ದೇಶದಲ್ಲಿ ಇಂಥದ್ದೇನೂ ನಡೆಯುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ಇಂತಹ ಕೃತ್ಯಗಳು ನಡೆದರೆ, ಬೂಟ್ ತೆಗೆದುಕೊಂಡು ಹೊಡೆಯುತ್ತಾರೆ.

5-30 p m.

ಇದರ ಬಗ್ಗೆ ಹೆಂಗಸರಲ್ಲಿ ಜಾಗೃತಿ ಬರಬೇಕು. ದುರ್ದೈವವಶಾತ್ ಏತಕ್ಕೆ ಜಾಗೃತಿ ಬಂದಿಲ್ಲವೋ ಗೊತ್ತಿಲ್ಲ. ಈ ವಿಚಾರದಲ್ಲಿ ಅಲ್ಲಿಯ ಪುರುಷರೂ ಸಹ ಜಾಗೃತಿ ಹೊಂದಿಲ್ಲ. ಇದನ್ನು ನೋಡಿದರೆ ಅವರು ಇನ್ನೂ ಓಬೀರಾಯನ ಕಾಲದ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ ಎಂದು ಕಾಣುತ್ತದೆ. ಹೆಂಗಸರು ಮನೆಯಲ್ಲಿ ಅಡುಗೆ ಮಾಡಿಕೊಂಡಿರಬೇಕು; ಗಂಡ ಹೇಳಿದಂತೆ ನಡೆಯಬೇಕು, ಗಂಡಸು ಬಂದ ಹೊತ್ತಿಗೆ ಊಟ ಹಾಕಬೇಕು, ಈ ಅಭಿಪ್ರಾಯ ಇನ್ನೂ ಅನೇಕರಲ್ಲಿ ಇದೆ. ಈ ಪದ್ಧತಿ ಈಗಲೂ ಇಲ್ಲ ಎಂದು ನಾನು ಹೇಳುವುದಿಲ್ಲ. ನಾನು ಈ ಮಾತನ್ನು ನಮ್ಮ ಮೆಂಬರ್ಸ್ ಬಗ್ಗೆ ಹೇಳಲಿಲ್ಲ, ನಾವೆಲ್ಲ ದೊಡ್ಡ ದೊಡ್ಡ ಮಹಾ ನಾಯಕರು. ನಾವು ಅವರನ್ನು ಆರೀತಿ ನೋಡಿಕೊಳ್ಳುವುದಿಲ್ಲ, ಈವೊತ್ತಿನ ಸಮಾಜ ಬೇರೆರೀತಿಯಾಗಿದೆ. ಈ ಸಮಾಜದಲ್ಲಿ ಬಂಡವಾಳಶಾಹಿಗಳು ಬಡವರನ್ನು ಸುಲಿಗೆ ಮಾಡುವ ಸಮಾಜ ಏನು ಇದೆ, ಮತ್ತು ಜಾತಿ ಮತ ಭೇದ ಎಲ್ಲಿಯವರೆಗೆ ನಡೆಯುತ್ತದೋ ಅಲ್ಲಿಯತನಕ ಈರೀತಿ ನಡೆಯುತ್ತದೆ. ಹೀಗೇ ಇದ್ದರೆ ಇನ್ನು ಮುಂದೆಯೂ ನಡೆಯುತ್ತದೆ. ಇದಕ್ಕೆ ಸರಿಯಾದ ಪರಿಹಾರ ಏನು ಎಂದರೆ ಇದನ್ನು ಸುಟ್ಟು ಬೂದಿ ಮಾಡಬೇಕಾಗಿದೆ. ಈ ಜಾತಿ ಮತ ಭೇದವನ್ನು ಸುಟ್ಟು ಬೂದಿ ಮಾಡುವ ಹಾಗೆ ಇದನ್ನ ಪರಿವರ್ತನೆ ಮಾಡಿದರ ಆವಾಗ ಸರಿಹೋಗುತ್ತದೆ ಎಂದು ಕಾಣುತ್ತದೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕಾಗುತ್ತದೆ. ಇದಕ್ಕೆ ಮುಂಚೆಯೂ ಒಂದು ಘಟನೆ ನಡಿದಿದೆ; ಹೋಗಲಿ, ಈಗ ಏನು ಘಟನೆ ನಡೆದಿವೆ ಇದರ ಬಗ್ಗೆ ಯಾವ್ಯಾವ ಪಕ್ಷಗಳು ಎಷ್ಟೆಷ್ಟು ಪ್ರತಿಭಟನೆ ಮಾಡಿದರು? ಯಾರೂ ಇಲ್ಲ. ತಾವೆಲ್ಲಾ ಆಳುವ ಪಕ್ಷದಲ್ಲಿದ್ದೀರಿ. ಜನತಾಪಕ್ಷವಾಗಲಿ ಈ ಅಮಾನುಷ ಕೃತ್ಯ ನಡೆದಿದೆಯಲ್ಲಾ ಇದಕ್ಕೆ ಎಲ್ಲರೂ ಬನ್ನಿ ಪ್ರತಿಭಟನೆ ಮಾಡೋಣ ಎಂದು ಏನಾದರೂ ಕರೆದರೇ? ಕರೆಯಲಿಲ್ಲ. ಕಾಂಗ್ರೆಸ್ ಪಕ್ಷದವರು ಇದಕ್ಕೆ ಪ್ರತಿಭಟನೆ ಮಾಡಿದಂತೆ ಕಾಣಲಿಲ್ಲ. ಅವರಲ್ಲಿ ಕೆಲವರು ಮಾಡಿರಬಹುದು.

ಶ್ರೀ ರಾಮನಾರಾಯಣ ನಾಯಕ್.—ನಾವು ಪ್ರತಿಭಟನೆ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಅದನ್ನೇ ನಾನು ಹೇಳುತ್ತಿದ್ದೇನೆ. ತಾವು ಯುವಕರು. ಬಿಸಿ ರಕ್ತ ಇದೆ. ನಾನು ತಮ್ಮ ಬಗ್ಗೆ ಹೇಳುವುದಿಲ್ಲ. ನನ್ನ ಅಭಿಪ್ರಾಯ ಏನೆಂದರೆ ಅವರನ್ನು ನೀವು ಏನೂ ಮಾಡಲಿಲ್ಲ ಎನ್ನುವುದು, ಅವರನ್ನು ಗೂಂಡಾ ನಿಶೇಧ ಕಾನೂನು ಪ್ರಕಾರ ಹಿಡಿಯಬೇಕಾಗಿತ್ತು, ಜೈಲಿನಲ್ಲಿ ಇಡಲಿ. ಬೇಕಾದರೆ ಹೊಡೆಯಲಿ. ಅದಕ್ಕೆ ನಮ್ಮ ವಿರೋಧ ಏನೂ ಇಲ್ಲ. ನಾನು ಹೇಳುವುದು ಇಷ್ಟೆ. ನಾವು ಇದರ ಬಗ್ಗೆ ಆ ಜನರಲ್ಲಿ ಒಂದು ಜಾಗೃತಿ ಉಂಟುಮಾಡಬೇಕಾಗಿತ್ತು. ಇದರ ಬಗ್ಗೆ ಮೊದಲು ಪ್ರತಿಭಟನೆ ಆರಂಭ ಮಾಡಿದ್ದು ಅಖಿಲ ಭಾರತದ ವಿದ್ಯಾರ್ಥಿಗಳ ಫೆಡರೇಷನವರು. ಕೊಪ್ಪಳದಲ್ಲಿ ಮೆರವಣಿಗೆ ಮಾಡಿದರು. ಅನಂತರ ಬೇರೆ ಬೇರೆ ಕಡೆಯಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದರು. ಮೊನ್ನೆ ಹಾಸನ ಜಿಲ್ಲೆಯಲ್ಲಿ 10 ಸಾವಿರ ಮಹಿಳೆಯರು ಪ್ರತಿಭಟನೆ ಮಾಡಿದರು. ಸಾಮಾನ್ಯವಾಗಿ ಒಂದು ಹೆಚ್ಚಿನ ಜವಾಬ್ದಾರಿ ಮಹಿಳೆಯರ ಮೇಲೆ ಜಾಸ್ತಿ ಇದ್ದರೂ ಕೂಡ ಅವರು ಅಷ್ಟು ಕಾಳಜಿ ವಹಿಸಿಲ್ಲ, ಅವರು ಹೊರಗೆಯೇ ಇದ್ದಾರೆ; ಏತಕ್ಕೆ ಮಾಡಲಿಲ್ಲವೋ ಗೊತ್ತಿಲ್ಲ. ಈಗಲಾದರೂ ಅದನ್ನು ಮಾಡಬೇಕು. ಅವರು ಇನ್ನೂ ಹೆಚ್ಚಿನ ರೀತಿಯಲ್ಲಿ ಇದರ ಬಗ್ಗೆ ಪ್ರತಿಭಟನೆ ಮಾಡಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದು ಇಲ್ಲಿಗೇ ನಿಂತಿಲ್ಲ. ನಮ್ಮ ಸ್ನೇಹಿತರು ಹೇಳಿದ ಹಾಗೆ ಅದರು ಹೆದರಿಕೆ, ಬೆದರಿಕೆ ಹಾಕುತ್ತಿದ್ದಾರೆ. ಈ ಮಹಂತೇಶಸ್ವಾಮಿಯವರ ಮೇಲೆ ಯಾರು ಮಾತನಾಡುತ್ತಾರೋ ಅವರ ಮೇಲೆ ಹೆದರಿಕೆ, ಬೆದರಿಕೆ ಹಾಕುತ್ತಾರೆ. ಕನ್ನಡ ಕ್ರಿಯಾ ಸಮಿತಿಯವರು ಹೊರಡಿಸಿರುವ ಜುಲೈ 31, 1985ರ ಕೆಂಬಾವುಟ, ಪತ್ರಿಕೆಯಲ್ಲಿ ಈ ಒಂದು ವಿಷಯ ಪ್ರಕಟವಾಗಿದೆ. ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ, ಈ ಪತ್ರವನ್ನು ಬರೆದದ್ದು ಅಲ್ಲಮ ಪ್ರಭು ಬೆಟದೂರರವರಿಗೆ, ಅದರಲ್ಲಿ ಅವರಿಗೆ ಮತ್ತು ಎಐ ಎಸ್ ಎಫ್ ಹುಡುಗರಿಗೂ ಬೆದರಿಕೆ ಹಾಕಲಾಗಿದೆ.

"ಕುದುರೆ ಮೋತಿ : ಸ್ವಾಮಿ ಕಪೆಯುವರಿಂದ ಬೆದರಿಕೆ ಈ ರೀತಿಯ ಒಂದು ಹೆಡ್ಡಿಂಗ್ ಹಾಕಿ ಬರೆದಿದ್ದಾರೆ. ಈ ಪತ್ರದಲ್ಲಿ ಈ ರೀತಿ ಇದೆ :

12-7-1985

ಅಲ್ಲಮ ಪ್ರಭು ಬೆಟದೂರ ಇವರಿಗೆ--ಇವರು ಲೆಕ್ಚರರ್ ಆಗಿದ್ದಾರೆ, ಇವರನ್ನು ಈ ರೀತಿಯಾಗಿ ಟೀಕಿಸಿದ್ದಾರೆ.—

"ನಿನಗೆ ಪ್ರಾಣದ ಮೇಲೆ ಆಶೆ ಇದ್ದಂತಿಲ್ಲ. ನೀನು ಒಬ್ಬ ವೀರಶೈವನಾಗಿ ವೈಯ್ಯಕ್ತಿಕ ದ್ವೇಷಕ್ಕಾಗಿ ನಾಲ್ಕು ಹುಡುಗರನ್ನು (ಎಐಎಸ್‌ಎಫ್) ಕಟ್ಟಿಕೊಂಡು ಯಾವ ವಿಷಯವನ್ನೂ ತಿಳಿಯದೆ ಶ್ರೀಗಳವರನ್ನು ಈ ಪ್ರಕರಣದಲ್ಲಿ ಎಳೆದಿರಿ. ಇದು ನಿನಗೆ ಮತ್ತು ಆ ಹಿಂಬಾಲಕ ಸಂಘದವರಿಗೆ ಕೊನೆ ಎಚ್ಚರಿಕೆ. ಈ ಪ್ರಕರಣಕ್ಕೂ ಸ್ವಾಮಿಗಳಿಗೂ ಯಾವುದೇ ಸಂಬಂಧವಿಲ್ಲವೆಂದು ಎಲ್ಲ ಪೇಪರಿಗೆ ನಿಮ್ಮ ಹೇಳಿಕೆಗಳನ್ನು ಕೊಟ್ಟರೆ ಸರಿ ಇಲ್ಲದಿದ್ದರೆ ನಿನಗೆ ಒಂದು ವ್ಯವಸ್ಥೆ ಮಾಡುತ್ತೇವೆ. ಹಣ ಬೇಕಾದರೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಕೊಡಲು ನಾವು ತಯಾರ್. ಒಟ್ಟಿನಲ್ಲಿ ಇಷ್ಟೆಲ್ಲ ಹಗರಣಕ್ಕೆ ಕಾರಣರಾದ ನೀವೆ, ಶ್ರೀಗಳವರು ಅರೆಸ್ಟ್ ಆಗುವ ಮೊದಲು ನಿಮ್ಮ ಹೇಳಿಕೆಗಳು ಪೇಪರಿನಲ್ಲಿ ಬಾರದಿದ್ದಲ್ಲಿ ನಿಮ್ಮ ಅಂತ್ಯಕಾರಿ ಸಮೀಪಿಸಿದೆ ಎಂದು ತಿಳಿಯಿರಿ." ಇದು ಒಂದು ಪತ್ರ. ಇದರಲ್ಲಿ ಸಹಿ ಹಾಕಿಲ್ಲ.

ಇಂತಹುದೇ ಇನ್ನೊಂದು ಪತ್ರ ಬಂದಿದೆ. ಅದನ್ನೂ ಸಹ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ಈ ರೀತಿ ಇದೆ.—

"ಇಂತಹದೇ ಇನ್ನೊಂದು ಪತ್ರದ ಜೆರೋಕ್ಸ್ ಪ್ರತಿಯೂ ನಮ್ಮಲ್ಲಿದೆ. ಎಐಎಸ್‌ಎಫ್‌ನ ಸ್ಥಳೀಯ ಮಹಂತೇಶ ಕೊತಬಾಳರಿಗೆ ಬರೆದುದು. ಆ ಪತ್ರವನ್ನು 12-7-85ರಂದೇ ಬರೆದುದು. ಅದರಲ್ಲಿ ಹೀಗೆನ್ನಲಾಗಿದೆ :

'ಸದರಿ ಸಂಘದವರಿಗೆ—

"ಈ ಪತ್ರದ ಮುಖಾಂತರ ತಿಳಿಸುವುದೇನೆಂದರೆ ಕುದುರೆ ಮೋತಿ ಶ್ರೀಗಳವರ ಪ್ರಕರಣದಲ್ಲಿ ಇವೇನು ಹುಡುಗ ಬುದ್ಧಿ ಏನು ಮಾಡಿಯಾವು ಎಂದು ತಿಳಿದುಕೊಂಡಿದ್ದೆವು. ಆದರೆ ನೀವು ಆ ಪ್ರಭು ಮಾಸ್ತರನ ಕೇಳಿ ಇಷ್ಟೆಲ್ಲ ಹಗರಣಕ್ಕೆ ಕಾರಣರಾದಿರಿ. ಈಗಲೂ ನಿಮಗೆ ಹೇಳುತ್ತಿದ್ದೇವೆ. ನಿಮ್ಮ ಪ್ರಾಣದ ಮೇಲೆ ಆಶೆ ಇದ್ದರೆ ಶ್ರೀಗಳನ್ನು ಅರೆಸ್ಟ್ ಮಾಡುವ ಮೊದಲೇ ನಿಮ್ಮ ಸಂಘದಿಂದ ಎಲ್ಲ ಪೇಪರುಗಳಿಗೂ ಹೇಳಿಕೆ ಕೊಡಿ. ಏನೆಂದರೆ ಈ ಘಟನೆಗೂ ಶ್ರೀಗಳವರಿಗೂ ಯಾವುದೇ ಸಂಬಂಧವಿಲ್ಲವೆಂದು ಮತ್ತು ನಿಮಗೆ ಎಷ್ಟು ಹಣ ಬೇಕೋ ಅಷ್ಟು ಹಣ ಕೊಡಲು ನಾವು ತಯಾರ, ನಿಮ್ಮ ಹಟ ನೀವೇ ಸಾಧಿಸಿದಲ್ಲಿ ಏನು ಮಾಡಬೇಕೆಂಬುದು ನಮಗೆ ಗೊತ್ತಿದೆ." ಈ ರೀತಿ ಇದೆ.

ಇದನ್ನು ಇಷ್ಟಕ್ಕೆ ಬಿಡಲಿಕ್ಕೆ ಅವರು ಹೋಗುವುದಿಲ್ಲ. ಅಲ್ಲದೆ ಇದಕ್ಕೆ ಎಐಎಸ್‌ಎಫ್ ಹುಡುಗರು ಮತ್ತು ಅಲ್ಲಮ ಪ್ರಭು ಅವರೂ ಸಹ ಬಗ್ಗುವುದಿಲ್ಲ. ಇದು ಇನ್ನೂ ನಡೆಯುತ್ತಲೇ ಇದೆ, ಈ ಪ್ರಕರಣ ಇಲ್ಲಿಗೇ ನಿಂತಿಲ್ಲ. ಇನ್ನೂ ಸಹ ಹೆದರಿಸುತ್ತಾ ಇವೆ. ಆದ್ದರಿಂದ ತಕ್ಷಣ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಿ. ಅವರನ್ನು ಗೂಂಡಾಗಿರಿ ಶಾಸನದ ಪ್ರಕಾರ ಅರೆಸ್ಟ್ ಮಾಡಬೇಕು, ಅಲ್ಲಿನ ಜನರಿಗೆ ಸರಿಯಾದ ರಕ್ಷಣೆ ಕೊಡಬೇಕು. ಅಲ್ಲಿಗೆ ನಮ್ಮವರೂ ಸಹ ಹೋಗಿದ್ದಾರೆ. ಅಲ್ಲಿ ಗಂಡಸರಿಗೂ, ಹೆಂಗಸರಿಗೂ ಹೆದರಿಕೆಯಾಗುತ್ತದೆ. ಅಲ್ಲಿಯ ಗಂಡಸರಿಗೆ ಧೈರ್ಯ ತುಂಬುವುದು, ಸಾರ್ವಜನಿಕರಿಗೆ ಧೈರ್ಯ ಹೇಳುವುದು-ಅದರ ಜವಾಬ್ದಾರಿ ನಿಮ್ಮ ಮೇಲೂ ಇವೆ, ನಮ್ಮ ಮೇಲೂ ಇದೆ, ಆದರೆ ಸರಿಯಾದ ದಾರಿಯಲ್ಲಿ ಹೋಗಬೇಕು. ಮೇಲ್ಮನೆಯಲ್ಲಿ ಇದಕ್ಕೆ ಒಂದು ಸದನದ ಸಮಿತಿ ಮಾಡಿದ್ದೀರಿ. ಆದರೆ ಅದರ ಟರ್ಮ್ಸ್ ಆಫ್ ರೆಫರೆನ್ಸ್ ಏನು ಅನ್ನುವುದು ಗೊತ್ತಿಲ್ಲ. ನಾವೇನೋ ಹೋಗುತ್ತೇವೆ, ನಮಗೆ ಟಿ ಎ ಮತ್ತು ಡಿ ಎ ಬರುತ್ತದೆ, ಅಲ್ಲಿಗೆ ಹೋಗಿ ಅವರ ಗೋಳನ್ನು ಕೇಳಿಕೊಂಡು ಬರಬೇಕು ಅಷ್ಟೆ. ನೀವು ಅಲ್ಲಿ ಒಂದು ಪಬ್ಲಿಕ್ ಮೀಟಿಂಗ್‌ಗೆ ಏರ್ಪಾಡು ಮಾಡಿ. ಎಲ್ಲ ರಾಜಕೀಯ ಪಕ್ಷಗಳವರೂ ಹೋಗೋಣ, ಅಲ್ಲಿನ ಜನಗಳಿಗೆ ಧೈರ್ಯ ತುಂಬೋಣ. ಇದು ಎಲ್ಲರೂ ತಲೆಬಾಗಿಸುವ ವಿಚಾರ. ಏತಕ್ಕೆ ಹೀಗೆ ಮಾಡುತ್ತೀರಾ ? ಗೂಂಡಾಗಿರಿ ಶಾಸನದ ಪ್ರಕಾರ ಅವರನ್ನು ಅರೆಸ್ಟ್ ಮಾಡಿ. ಆಗ ಅವರಿಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದು ಎದ್ದು ಕಾಣುತ್ತದೆ. ಇಲ್ಲದೇ ಹೋದರೆ ಇದು ಕಣ್ಣು ಒರೆಸುವ ಕೆಲಸ ಮಾಡುತ್ತಾ ಇದ್ದಾರೆ ಅಂತ ತಿಳಿದುಕೊಳ್ಳುತ್ತಾರೆ. ಇದು ಸರಿಯಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಶಾಸಕರೂ ಹಾಗೂ ನಾಗರೀಕ ಪ್ರಜೆಗಳೂ ನಾವಲ್ಲ. ಇದು ನಾಚಿಕೆಯಾಗುತ್ತದೆ. ತಲೆತಗ್ಗಿಸಬೇಕಾದಂಥ ಒಂದು ಅಮಾನುಷ ಕೃತ

ಇಂದು ನಡೆದಿದೆ. ಇದನ್ನು ಚರ್ಚಿಸತಕ್ಕ ದೌರ್ಭಾಗ್ಯ ನಮಗೆ ಬಂದೊದಗಿದೆ. ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಇದು ತಮಾಷೆ ವಿಚಾರವಲ್ಲ. ಇದು ಒಂದು ಕಾಟು ನೆಪ ನಮ್ಮನ್ನು ನಾವೇ ಮೋಸ ಪಡಿಸಿಕೊಳ್ಳತಕ್ಕಂಥ ವಿಚಾರವಲ್ಲ. ಇದು ಪಕ್ಷಪಂಗಡಗಳ ವಿಚಾರವಲ್ಲ. ಇಂಥ ಸಂದರ್ಭದಲ್ಲಿ ಈ ಸದನ ಎಲ್ಲ ಭಿನ್ನ ಭೇದಗಳನ್ನು ಮರೆತು ಎದ್ದು ನಿಲ್ಲಬೇಕಾಂಥ ಒಂದು ಸಂದರ್ಭ ಇದು. ಈವೊತ್ತು ಇದು ಒಂದು ದಾರುಣ ಕಥೆ. ಈ ಅಧ್ಯಾಯವನ್ನು ಚರ್ವಿತಚರ್ವಣ ಮಾಡುವುದಕ್ಕೆ ನನಗೆ ಇಷ್ಟ ಇಲ್ಲ. ಕಾರಣ ಇದರ ಅಗತ್ಯ ಇಲ್ಲ. ಇನ್ನೊಂದು ಕಾರಣ, ಆ ವಿವರಗಳನ್ನು ಮಾತ್ರವೇ ನಮ್ಮ ಬಾಯಿಯಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಹೇಳಿದರೆ ಅದರ ಅವಿಭಾಜ್ಯ ಅಂಗವಾಗಿ ನಾವೂ ಅದರಲ್ಲಿ ಪಾಲುದಾರರಾಗಿದ್ದೇವೆ ಎಂಬ ಒಂದು ಭಾವನೆಯಿಂದ ಪೀಡಿತರಾಗಿದ್ದೇವೆ ಎಂದು ಅನ್ನಿಸುತ್ತದೆ. ಆದುದರಿಂದ ಅದನ್ನು ಮತ್ತೇ ಹೇಳಲಿಕೆ ಸಾಧ್ಯವಿಲ್ಲ. ಇವತ್ತು ಆ ಎಲ್ಲಾ ವಿವರಗಳಿವೆ. ಇಂತಹ ಒಂದು ಸಂದರ್ಭದಲ್ಲಿ ನಾವು ಏನು ಮಾಡಬೇಕಾಗಿತ್ತು ಅಥವಾ ಏನು ಮಾಡುವುದಕ್ಕೆ ಸಾಧ್ಯ ಎಂಬ ಸವಾಲನ್ನು ನಮ್ಮ ಮುಂದೆ ನಾವು ಇಟ್ಟುಕೊಳ್ಳಬೇಕಾಗಿದೆ. ನಾನು ಆ ವರದಿಗಳನ್ನೆಲ್ಲಾ ನೋಡಿದ್ದೇನೆ. ಪೋಲೀಸ್ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಸಹಜವಾಗಿ ಯಾರೇ ಅದನ್ನು ಓದಿದರೂ ಸ್ಥಳದಲ್ಲಿರತಕ್ಕ ಪೋಲೀಸರು ತೆಗೆದುಕೊಂಡಿರತಕ್ಕ ಕ್ರಮದಲ್ಲಿ ಸಾಕಷ್ಟು ಗೋಲ್‌ಮಾಲ್ ಆಗಿದೆ ಎನ್ನುವುದು ಸ್ಪಷ್ಟವಾಗಿದೆ. ಅವರು ನಿರ್ದಿಷ್ಟವಾಗಿ ದಿಟ್ಟತನದಿಂದ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎನ್ನುವುದು ಹಸಿ ಹುಡುಗ ನೋಡಿದರೂ ಕೂಡ ಸ್ಪಷ್ಟವಾಗಿ ಗೊತ್ತಾಗುತ್ತದೆ ಪೋಲೀಸರು ಸಂಧರ್ಭಾನುಸಾರವಾಗಿ ಯಾವರೀತಿ ಕೆಲಸಮಾಡುತ್ತಾರೆ ಎನ್ನುವುದು ನಮಗೆ ಗೊತ್ತಿದೆ. ಅಲ್ಲಿ ಕೊಡತಕ್ಕಂಥ ದೂರುಗಳ ಪರಿಸ್ಥಿತಿ ಏನಾಗುತ್ತದೆ ಎನ್ನುವುದು ನಮಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೆ, ನಾವು ಪ್ರಜಾಪ್ರಭುತ್ವದ ಆಡಳಿತ ಪದ್ಧತಿ ಅಥವಾ ಸರ್ಕಾರದ ರಚನಾ ಪದ್ಧತಿಯನ್ನಷ್ಟೇ ಸಾಧನೆ ಮಾಡಿದ್ದೇವೆ, ನಮ್ಮ ಸಮಾಜ, ಇವತ್ತು ನಾವು ಬದುಕುತ್ತಾ ಇರತಕ್ಕಂಥ ಸಮಾಜ ತಲೆತಲಾಂತರದಿಂದ ನಾನಾರೀತಿಯ, ಶೋಷಣೆಗೆ, ನಾನಾರೀತಿಯ ದಬ್ಬಾಳಿಕೆಗೆ, ನಾನಾ ರೀತಿಯ ತಾರತಮ್ಯಕ್ಕೆ ತುತ್ತಾಗಿ ಮೇಲು ಕೀಳು ಬಡವ ಬಲ್ಲಿದ, ಉಳ್ಳವ ಇಲ್ಲದವ ಎನ್ನುವ ವಿಷಮತೆಗೆ ತುತ್ತಾಗಿರತಕ್ಕಂಥ ಸಮಾಜದಲ್ಲಿ ನಾವು ಬದುಕುತ್ತಾ ಇರುತ್ತೇವೆ ಇದನ್ನು ಸಂಪೂರ್ಣವಾಗಿ ಬದಲಾವಣೆ ಮಾಡತಕ್ಕಂಥ ಜವಾಬ್ದಾರಿ ನಮ್ಮ ಮೇಲಿದೆ. ಇದಕ್ಕೆ ಯಾವುದೇ ಒಂದು ಬಹಳ ದೊಡ್ಡ ಸಿದ್ಧಾಂತ ಬೇಕಾಗಿಲ್ಲ ಅಥವಾ ಯಾವುದೇ ಬೇರೆ ದೇಶದಿಂದ ಸಿದ್ಧಾಂತವನ್ನು ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ ವಿಷಮತೆಗೆ ತುತ್ತಾಗಿರತಕ್ಕಂಥ ಸಮಾಜವನ್ನು ಪುನರ್ನಿರ್ಮಾಣ ಮಾಡಬೇಕು ಎನ್ನುವುದಕ್ಕೆ ಪ್ರಾಯಶಃ ಯಾವುದೇ ವೇದಾಂತದ ಅಗತ್ಯ ನಮಗೆ ಇಲ್ಲ, ಇದಕ್ಕೆ ದೃಢವಾದ ಸಂಕಲ್ಪ, ದೃಢವಾದ ಇಚ್ಛಾಶಕ್ತಿ ಅಗತ್ಯವಿದೆ ಇವತ್ತು ಕಾನೂನು ಇದೆ ನಿಜ. ಮಾನ್ಯ ಸ್ನೇಹಿತರಾದ ಪಟೇಲರು ಇಲ್ಲಿ ಇಲ್ಲ ಅವರು ಕಾನೂನಿನ ಸ್ವರೂಪದ ಬಗ್ಗೆ ಹೇಳುತ್ತಿದ್ದರು. ಕಾನೂನು ಎನ್ನುವುದು ಜೇಡರ ಬಲೆ ಇದ್ದಹಾಗೆ, ದೊಡ್ಡ ಜನರು ಸೀಳಿಕೊಂಡು, ಪಾರಾಗುತ್ತಾರೆ, ಸಣ್ಣ ಜನರು ನುಸುಳಿಕೊಂಡು ಪಾರಾಗುತ್ತಾರೆ ಮಧ್ಯದಲ್ಲಿರತಕ್ಕವರು ಮಾತ್ರ ಸಿಕ್ಕಿ ಬೀಳುತ್ತಾರೆ ಎಂದು ಹೇಳುತ್ತಾರೆ, ಅವರು ಆಂಗ್ಲಭಾಷೆಯಲ್ಲಿ ಹೇಳುತ್ತಾರೆ, ನಾನು ಕನ್ನಡದಲ್ಲಿ ಹೇಳಿದೆ. ಕಾನೂನು ಇದಕ್ಕೆಲ್ಲಾ ಸಿಕ್ಕುವುದಿಲ್ಲ, ಸರ್ಕಾರ ಅಂದರೆ ಏನು ಎಂದು ತಿಳಿದುಕೊಂಡಿದ್ದಾರೆ. ಮಾನ್ಯ ಗೃಹಸಚಿವರಾದ ರಾಚಯ್ಯನವರ ಬಗ್ಗೆ ನನಗೆ ಗೌರವವಿದೆ, ಅವರ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಸರ್ಕಾರದ ಬಗ್ಗೆ ಅಥವಾ ಮಂತ್ರಿ ಪದವಿ ಬಗ್ಗೆ ಏನು ಕಲ್ಪನೆ ಇದೆ ಎಂದು ಕೇಳಬಯಸುತ್ತೇನೆ. ಸರ್ಕಾರ ಅಂದರೆ ಬರೀ ರೂಲ್ಸ್ ರೆಗ್ಯುಲೇಷನ್ಸ್, ಕಾನೂನು ಎಂದು ತಿಳಿದುಕೊಂಡಿದ್ದೀರಾ ? ಸರ್ಕಾರ ಅಂದರೆ ಯಾವುದೋ ನಿಗ್ರಹ, ಅನುಗ್ರಹ, ಅಂತಿಮವಾಗಿ ಇದೆಯೋ, ಅದೇ ಒಂದು ಶಕ್ತಿ. ಆ ಶಕ್ತಿಗೆ ಅನುಗುಣವಾಗಿ ಬದಲಾಯಿಸಬೇಕು. ಕಾನೂನು, ರೂಲ್ಸ್ ಎಲ್ಲಾ ಇದೆ. ಆದರೆ ಯಾವುದಾದರೂ ಇಂತಹ ಒಂದು ಸಂದರ್ಭವನ್ನು ಕಂಡೂ ಕೂಡ ಅದಕ್ಕೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಅಂದರೆ ಸರ್ಕಾರ ನಡೆಸಲಿಕ್ಕೆ ಲಾಯಕ್ಕು ಇಲ್ಲ. ಯಾವುದೇ ಸಂದರ್ಭದಲ್ಲಿ ಸರ್ಕಾರ ಹೆಲ್ಪ್‌ಲೆಸ್‌ನೆಸ್ ಅಂದರೆ ಅಸಹಾಯಕತೆಯನ್ನು ತೋರಿಸತಕ್ಕ ಸರ್ಕಾರ ಸರ್ಕಾರವಾಗಿ ಇರುವುದಕ್ಕೆ ಯೋಗ್ಯತೆಯಿಲ್ಲ, ಆ ರೀತಿ ಹೇಳತಕ್ಕಂಥ ಯಾವುದೇ ಮಂತ್ರಿ, ಮಂತ್ರಿಯಾಗಿರತಕ್ಕಂಥಾದ್ದು ಸರಿಯಲ್ಲ. ಇವತ್ತು ನಾನು ಹೇಳುತ್ತೇನೆ. ಇಂತಹ ಒಂದು ಸಂದರ್ಭದಲ್ಲಿ ಇಡೀ ಜನರ ಮನಸ್ಸು ಇಷ್ಟೊಂದು ದಾರುಣವಾದಂಥ ರೀತಿಯಲ್ಲಿ ಈ ಘಟನೆಯಿಂದ ಕಲಕಿರತಕ್ಕಂಥ ಸಂದರ್ಭದಲ್ಲಿ ಆರೋಪಿಗಳಾಗಿ ಜೈಲಿನಲ್ಲಿ ಇರಬೇಕಾದಂಥ ವ್ಯಕ್ತಿಗಳು ಆರಾಮವಾಗಿ ತಿರುಗಿಕೊಂಡು ಬೆಂಗಳೂರಿನವರೆಗೂ ಬಂದು, ಕಾನೂನನ್ನು ದುರುಪಯೋಗ ಮಾಡಿಕೊಂಡು, ಕಾನೂನು ಬಲದಿಂದಲೇ ನಮ್ಮನ್ನು ಹೆದರಿಸುತ್ತಾರೆ ಅಂದರೆ ನಾವು ವಿಧಾನಸಭೆಯಲ್ಲಿದ್ದು ಏನು ಪ್ರಯೋಜನ. ನಮ್ಮ ಕಾನೂನನ್ನು ತೋರಿಸಿ ಹೆದರಿಸತಕ್ಕ ಜನ ಕಾನೂನಿನ ಅಡಿಯಲ್ಲಿ ರಕ್ಷಣೆ ಪಡೆಯುತ್ತಾರೆ ಅಂದರೆ ನಾವು ವಿಧಾನಸಭೆಯಲ್ಲಿರುವುದಕ್ಕೆ ಲಾಯಕ್ಕಿರುವುದಿಲ್ಲ.

ಕಾನೂನು ಬರೇ ಕಾನೂನು, ಅದು ಏನು ಮಾಡುತ್ತದೆ. ಅದಕ್ಕೆ ಜೀವ ಇದೆಯೋ ? ಆ ಕಾನೂನನ್ನು ಬಳಸುವುದು ಹೇಗೆ ಎನ್ನುವುದರ ಬಗ್ಗೆ ನಮಗೆ ಸರಿಯಾದ ಕಲ್ಪನೆ ಬೇಕು. ಗೂಂಡಾ ಕಾಯಿದೆಯನ್ನು ತಮ್ಮ ಕೈಯಲ್ಲಿ ಕೊಟ್ಟೆವು, ನಾವು ಸರಿಯಾದ ಪ್ರಕರಣದಲ್ಲಿ ಬಳಸುತ್ತೇವೆ ಎಂದು ಹೇಳಿದಿರಿ. ಯಾವ ಯಾವ ಪ್ರಕರಣದಲ್ಲಿ ಜನಗಳು ದಗಲ್‌ಬಾಜಿ ಮಾಡಿದ್ದಾರೆ, ದೇಶದ್ರೋಹ ಮಾಡಿದ್ದಾರೆ, ಅಪರಾಧವನ್ನು ಮಾಡುತ್ತಾರೋ, ಸರ್ವೇಸಾಧಾರಣವಾಗಿ ಚಾಲ್ತಿಯಲ್ಲಿರುವ ಕಾನೂನುಗಳಿಂದ ಪ್ರಾಯೋಗಿಕವಾಗಿ ಯಾರನ್ನು ನಿರ್ಬಂಧ ಮಾಡುವುದಕ್ಕೆ ಆಗುವುದಿಲ್ಲವೋ ಅಂತಹ ಅಯೋಗ್ಯರ ಮೇಲೆ, ಅಂತಹ ಅಪರಾಧಿಗಳ ಮೇಲೆ ಈ ಕಾನೂನನ್ನು ಪ್ರಾಯೋಗಿಕವಾಗಿ ಬಳಸುತ್ತೇವೆ ಎಂದು ವಚನಕೊಟ್ಟಿರಿ. ಇದು ಏನಾಯಿತು ಎಂದರೆ ಹೇಡಿಗಳ ಕೈಗೆ ಚಂದ್ರಾಯುಧ ಕೊಟ್ಟ ಹಾಗೆ ಆಯಿತು. ಆಯುಧ ಇದ್ದರೆ ಏನು ಪ್ರಯೋಜನ, ಉಪಯೋಗಿಸತಕ್ಕ ಧೈರ್ಯ ತೋರಿಸಬೇಕು. ನಿಮ್ಮ ಕೂದಲು ಕೊಂಕಬಾರದು, ನೀವು ಗೃಹಮಂತ್ರಿಯಾಗಿ ಚಲಾವಣೆಮಾಡಿ. ಪೋಲೀಸ್ ಇಲಾಖೆಯಲ್ಲಿ, ಯಾರು ನಿಜವಾದ ಅಪರಾಧಿಗಳಿದ್ದಾರೆ ಅವರನ್ನು ಪತ್ತೆಹಚ್ಚುವುದಕ್ಕೆ ಶಕ್ತಿ ಇರತಕ್ಕ ಅಧಿಕಾರಿಗಳಿದ್ದಾರೆ, ಅಂತಹವರು ರಾಜ್ಯದಲ್ಲಿದ್ದಾರೆ. ಇಲಾಖೆಯಲ್ಲಿರತಕ್ಕವರೆಲ್ಲರೂ ಅಯೋಗ್ಯರು ಎಂದು ಅಲ್ಲ. ಇಂತಹ ಸಂದರ್ಭದಲ್ಲಿ ನಾಯಕತ್ವ ಅವರಿಗೆ ಶಕ್ತಿ ಕೊಡಬೇಕು. ಪೋಲೀಸರು ಒಂದು ಮಾಡಿದರೆ ಹೆಚ್ಚು, ಇನ್ನೊಂದು ಮಾಡಿದರೆ ಕಡಿಮೆ ಎಂದು ನಾಳೆ ಎಲ್ಲಿ ಕೆಲಸ ಕಳೆದುಕೊಂಡು ಹೋಗಬೇಕಾದ ಪರಿಸ್ಥಿತಿ ಬರುತ್ತದೋ ಎಂದು ಹೆದರುತ್ತಾರೆ. ಏನು ಬಂದರೂ ನೋಡಿಕೊಳ್ಳುತ್ತೇನೆ ಬಲಿ ಹಾಕಿ ಎಂದು ಧೈರ್ಯ ತೋರಿಸಿದ್ದರೆ ಇಷ್ಟು ಹೊತ್ತಿಗೆ ಆ ಸ್ವಾಮಿ ಒಳಗಡೆ ಇರುತ್ತಿದ್ದ. ಹೀಗೆ ಧೈರ್ಯ ತೋರಿಸುವುದು ಬಿಟ್ಟು ಸದನದ ಸಮಿತಿ ಮಾಡುತ್ತೇನೆ ಎಂದು ಹೇಳಿದ್ದೀರಿ. ಇನ್ನಷ್ಟು ತಮಾಷೆ ನೋಡಲಿಕ್ಕೆ ಅಲ್ಲಿಗೆ ಹೋಗಬೇಕಾ. ಎಲ್ಲಿ ಸೀರೆ ಹರಿದರು, ಎಲ್ಲಿ ಏನು ಮಾಡಿದರು ಎಂದು ಚಕ್ಕಂದ ನೋಡತಕ್ಕ ವಿಚಾರವಲ್ಲ. ಇವತ್ತು ಯಾವುದೇ ಕಾನೂನು ಇದ್ದು ಅದರಿಂದ ಮಾಡುವುದಕ್ಕೆ ಆಗದೇ ಹೋದರೆ ಸುಗ್ರೀವಾಜ್ಞೆ ತನ್ನಿ ನಾಳೆ ಪಾಸ್ ಮಾಡೋಣ. ಈ ಪ್ರಕರಣವನ್ನು ಎದುರಿಸುವುದಕ್ಕೆ ಒಂದು ಕಾನೂನು ತನ್ನಿ, ಪಾಸ್ ಮಾಡೋಣ. ನಿನ್ನೆ ದಿವಸ ಅರಸೀಕೆರೆ ತಾಲ್ಲೂಕಿನಲ್ಲಿ ಇದೇರೀತಿ ಒಂದು ಘಟನೆ ನಡೆದಿದೆ, ಅದು ಪತ್ರಿಕೆಯಲ್ಲಿ ಬಂದಿದೆ. ಇನ್ನೊಂದು ವಿಚಾರವೇನೆಂದರೆ, ಒತ್ತಡಗಳ ವಿಷಯ ಬಂದಿದೆ, ಕೆಲವೊಂದು ರಾಜಕೀಯ, ಇನ್ನಿತರ ಒತ್ತಡಗಳು ಸಾಕಷ್ಟು ಬಂದಿವೆ ಎನ್ನತಕ್ಕ ಪ್ರಶ್ನೆ ಸರ್ಕಾರಕ್ಕೆ ಮತ್ತು ಆ ಕಡೆಯಲ್ಲಿರತಕ್ಕ ಸ್ನೇಹಿತರಿಗೆ ವಿನಯಪೂರ್ವಕವಾಗಿ ಹೇಳುತ್ತೇನೆ. ಯಾವುದೇ ಪಕ್ಷಕ್ಕಾಗಲಿ, ಸಿದ್ಧಾಂತಕ್ಕಾಗಲಿ ಸೇರದೇನೇ ತಮ್ಮ ಹಳೆಯ ಪಾಳೆಯಗಾರಿಕೆ ಏನಿದೆ ಅದು ಜಾತಿಗೆ ಹೊಂದಿಕೊಂಡಿರಬಹುದು, ಅಂತಸ್ತಿಗೆ ಹೊಂದಿಕೊಂಡಿರಬಹುದು ಹಣದ ಪಾಲು ನಡೆದಿರಬಹುದು ಈ ರೀತಿ ಹಲವಾರು ರೀತಿಯ ಪಾಳೆಯಗಾರಿಕೆ ವ್ಯವಸ್ಥೆಯ ಪಳೆಯುಳಿಕೆಗಳು ಇವೆ, ಆ ಪ್ರತಿನಿಧಿಗಳು ನಮ್ಮ ಊರೂರುಗಳಲ್ಲಿಯೂ ಇದ್ದಾರೆ. ಅವರು ಯಾವ ಪಕ್ಷಕ್ಕೂ ಸೇರುವುದಿಲ್ಲ. ಚುನಾವಣೆ ಬಂದಾಗ ಅವರಿಗೆ ಜೀವ ಬರುತ್ತದೆ. ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ನಮ್ಮ ಬೇಳೆ ಬೇಯುವುದಿಲ್ಲ ಎಂದು ಅವರು ಬೇಲಿ ಮೇಲೆ ಕೂತರು, ಇನ್ನೊಂದು ಪಕ್ಷ ಅಧಿಕಾರಕ್ಕೆ ಬಂದರೆ ಅಲ್ಲಿಗೆ ಹಾರಿಕೊಂಡರು. ಕೆಲವೊಮ್ಮೆ ಎಲ್ಲಿ ಅವರ ಬೇಳೆ ಬೇಯುತ್ತದೆ ಅದು ಅವರ ಪಕ್ಷವೇ ಎಂದು ತೋರಿಸಿಕೊಳ್ಳುವುದು, ಸರ್ಕಾರ ತಮ್ಮಿಂದಲೇ ಬಂದಿದೆ. ಎಂದು ಹೇಳತಕ್ಕ ಹವ್ಯಾಸಕ್ಕೆ ಅನೇಕ ಕಡೆಗಳಲ್ಲಿ ತೊಡಗಿದ್ದಾರೆ. ಇವತ್ತು ನಾನು ಜನತಾ ಸರ್ಕಾಕ್ಕೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ನಿಮ್ಮನ್ನು ಇದಕ್ಕೆ ಪಾಲುದಾರರನ್ನಾಗಿ, ಹೊಣೆಗಾರರನ್ನಾಗಿ ಮಾಡುವುದಕ್ಕೆ ತಯಾರಿಲ್ಲ. ನೀವೆಲ್ಲ ಪಾಲುದಾರರು, ಅಂತಹವರ ಬೆಂಬಲ ತೆಗೆದುಕೊಳ್ಳುತ್ತೀರಿ ಎಂಬ ಆರೋಪವನ್ನು ಮಾಡುವುದಕೆ ತಯಾರಿಲ್ಲ. ಸ್ಥಳದ ಅಧಿಕಾರಿಗಳಿಗೆ ತಾನೇ ಮುಖಂಡ ಎಂದು ತೋರಿಸಿಕೊಂಡು, ಹಳೇ ಪಾಳೆಯಗಾರಿಕೆಯನ್ನು ಮಾಡಿ ಜೀವ ತುಂಬತಕ್ಕ ಪ್ರಯತ್ನ ಮಾಡತಕ್ಕಂತಹವರನ್ನು ಬಲಿ ಹಾಕುವುದು ಸರ್ಕಾರದ ಕರ್ತವ್ಯ. ನಾವೂ ಕೂಡ ಬಲಿ ಹಾಕುತ್ತೇವೆ. ಇದು ಸುಲಭವಾದ ವಿಚಾರವಲ್ಲ. ಇಚ್ಛಾಶಕ್ತಿಯಿಂದ ನಾವು ಮಾಡದೇ ಹೋದರೆ ನಾಳೆ ಯಾವ ಸರ್ಕಾರ ಬಂದರೂ ಕೂಡ ಅವರು ಆಡಳಿತ ನಡೆಸತಕ್ಕ ಪರಿಸ್ಥಿತಿ ಬರುತ್ತದೆ. ಇವತ್ತು ತಾವು ಧೈರ್ಯವನ್ನು ತೋರಿಸಬೇಕಾಗುತ್ತದೆ. ಯಾವುದೇ ಒತ್ತಡಗಳಿಗೆ ಬಲಿಯಾಗಬಾರದು. ಇಂತ ಸಂದರ್ಭ ಸಿಕ್ಕಿದಾಗ ಧೈರ್ಯ ತೋರಿಸಬೇಕು. ಇಂತಹ ಸಂದರ್ಭ ಪ್ರಾಪ್ತಿಯಾದಾಗ ಧೈರ್ಯ ತೋರಿಸದೇ ಇದ್ದಾಗ ನಿಮ್ಮ ಮೇಲಿರತಕ್ಕ ನಂಬಿಕೆ ದೂರವಾಗುತ್ತದೆ. ಈ ರೀತಿ ವಿಫಲರಾದರೆ, ಅಸಹಾಯಕತೆಯನ್ನು ತೋರಿಸಿದರೆ ಅದು ಖಂಡಿತವಾಗಿಯೂ ಸರ್ಕಾರಕ್ಕೆ ಭೂಷಣವಾದುದಲ್ಲ. ಆದುದರಿಂದ ಈಗಲಾದರೂ ಈ ಒಂದು ಘಟನೆಯನ್ನು ತೀವ್ರವಾದ ರೀತಿಯಲ್ಲಿ ಪರಿಗಣಿಸಬೇಕು. ಇಂಥ ಕೆಲಸ ಇನ್ನು ಎಲ್ಲಿಯಾದರೂ ಮಾಡಿದರೆ ಖಂಡಿತ ಬಚಾವ್ ಮಾಡಿಕೊಳ್ಳಲಿಕ್ಕೆ ಸಾಧವಿಲ್ಲ ಎನ್ನುವ ಭಾವನೆ ಬರುವಂತೆ ಸರ್ಕಾರ ಮಾಡಬೇಕು. ಅದು ನಿಮಗೆ ಬಿಟ್ಟಿದೆ. ನಿಮಗೆ ಏನಾದರ ತೊಡಕಾದರೆ ಅದಕ್ಕೆ ಬೆಂಬಲ ಕೊಡಲಿಕ್ಕೆ ತಯಾರಿದ್ದೇವೆ. ಇನ್ನಷ್ಟು ದುರ್ಬಲಗೊಳಿಸತಕ್ಕ ಹವ್ಯಾಸ

ಅವಕಾಶ ಕೊಡದೇ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೆ, ಇಷ್ಟು ಹೊತ್ತು ಹಿರಿಯ ಸದಸ್ಯರು ಮತ್ತೆ ಮಾತೃ ಶ್ರೀಯುವರಾದಂಥ ನಾಗರತ್ನಮ್ಮನವರು ಮಾತನಾಡಿದ್ದಾರೆ ಆದ್ದರಿಂದ, ಹೆಚ್ಚು ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ. ಬಹುಶಃ ಕಳೆದ ಮೂರು ದಿವಸಗಳಿಂದಲೂ ಬರಗಾಲದ ಬಗ್ಗೆ ಮಾತನಾಡಿದೆವು. ಇಂತಹ ಸ್ವಾಮಿಗಳು ಮತ್ತು ಇಂತಹ ಸ್ವಾಮಿಗಳಿಗೆ ಬೆಂಬಲ ಕೊಡತಕ್ಕವರು, ರಕ್ಷಣೆ ಕೊಡತಕ್ಕ ವರ್ಗ ಇರುವುದರಿಂದ, ಮಳೆ ಆಗಲಿಲ್ಲ ಎಂದು ಭಾವಿಸಿದ್ದೇನೆ. ಏಕೆಂದರೆ, ಧರ್ಮ ಇಲ್ಲದೇ ಇದ್ದರೆ ಮಳೆಯಾಗುವುದಿಲ್ಲ, ಬೆಳೆಯಾಗುವುದಿಲ್ಲ, ಎಂದು ಪುರಾಣದ ಕಡೆಗಳಲ್ಲಿ ಕೇಳಿದ್ದೇವೆ. ಇವೊತ್ತಿನ ದಿವಸ ಒಂದು ತರಹ ಅರಾಜಕತೆ ನಡೆದಿದೆ. ನಿನ್ನೆಯ ದಿವಸ ಪತ್ರಿಕೆಯಲ್ಲಿ ನೋಡಿದೆ, ಯಾರೋ ಒಬ್ಬರು ಗೇಣಿದಾರ ಪತ್ತೆ ಇಲ್ಲ, ಈ ಮಂತ್ರಿಮಂಡಲದಲ್ಲಿ ಇದ್ದವರು ಯಾರೋ ಅಪಹರಿಸಿದ್ದಾರೆಂದು ಕೇಳಿದ್ದೇನೆ. ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ನಾನು ಮತ್ತು ನನ್ನ ಶಾಸಕ ಮಿತ್ರರು ಹೋಗಿ ಇದರ ಕಾಲ್ ಅಟೆನ್‌ಷನ್ ಹಾಕಬಹುದೇ ಎಂದು ಕೇಳಿದ ಕ್ಕೆ ಈಗ ಇದು ಕೋರ್ಟಿನಲ್ಲಿ ಇದೆ, ಈ ರೀತಿ ಹಾಕಲಿಕ್ಕೆ ಆಗುವುದಿಲ್ಲ ವೆಂದು ನಮ್ಮ ಕಾನೂನು ಸಲಹೆಗಾರರು ಸಲಹೆ ಕೊಟ್ಟರು. ಈಗ ನನಗೆ ಅವಕಾಶ ಸಿಕ್ಕಿದ್ದರಿಂದ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಹೀಗೆ ಒಂದಲ್ಲ, ಎರಡು ಅಲ್ಲ, ಅರಸೀಕೆರೆ ಪ್ರಕರಣ, ಕುದುರೆಮೋತಿ ಪ್ರಕರಣ, ಇದೇ ರೀತಿ ಪ್ರತಿನಿತ್ಯ ನಡೆಯುತ್ತಿದೆ. ಯಾರಿಗೂ ರಕ್ಷಣೆ ಇಲ್ಲ. ಈ ರಾಜ್ಯದಲ್ಲಿ ಅರಾಜಕತೆ ಇದೆ. ಮಂತ್ರಿಗಳೂ ಕೂಡ ಕಣ್ಣು ಮುಚ್ಚಿ ಕುಳಿತಿದ್ದಾರೆ. ಪೋಲೀಸರು ಕಣ್ಣು ಮುಚ್ಚಿ ಕುಳಿತಿದ್ದಾರೆ. ಸ್ವಾಮಿ, ಇಷ್ಟೆಲ್ಲಾ ಆಟ ಆಡಿ ಆ್ಯಂಟಿಸಿಪೇಟರಿ ಬೇಲ್ ತರುವವರೆಗೂ ಸರ್ಕಾರಿ ವಕೀಲರು ಏನು ಮಾಡುತ್ತಿದ್ದರು. ಅವರಿಗೆ ಸರ್ಕಾರದಿಂದ ಫೀಜ್ ಆಗಲಿ, ಚೆಕ್ ಆಗಲಿ ದೊರಕಿರಲಿಲ್ಲವೇ ? ಅಥವಾ ಚೆಕ್ ಆನರ್ ಆಗಿರಲಿಲ್ಲವೇ ಎಂದು ಕೇಳಬೇಕಾಗಿದೆ. ಇಂತಹ ದುರ್ಘಟನೆ ನಡೆದಾಗ ಯಾವ ಅಧಿಕಾರಿ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡಿಲ್ಲ ಅವರನ್ನು ಸರ್ವೀಸ್‌ನಿಂದ ಹೊರಗಡೆ ಇಡಬೇಕಾಗಿತ್ತು. ಒಂದೊಂದು ಭಾಗದಲ್ಲೂ ಡಿ.ಐ.ಜಿ. ಗಳು ಇದ್ದಾರೆ, ಉನ್ನತ ಅಧಿಕಾರಿಗಳು ಇದ್ದಾರೆ, ಹೋಮ್ ಸೆಕ್ರೆಟರಿ ಇದ್ದಾರೆ. ಮಂತ್ರಿಗಳು ಇದ್ದಾರೆ, ಮುಖ್ಯ ಮಂತ್ರಿಗಳು ಇದ್ದಾರೆ. ಇಷ್ಟೆಲ್ಲಾ ಇದ್ದರೂ ಸಹ ಎಷ್ಟು ಜಾಗ್ರತೆಯಿಂದ ಎಚ್ಚರಿಕೆ ವಹಿಸಬೇಕಾಗಿತ್ತೋ ಅಷ್ಟು ವಹಿಸಿಲ್ಲ. ಇಷ್ಟೊಂದು ಗೊಂದಲ ಉಂಟುಮಾಡಿ ರಾಜ್ಯದಲ್ಲಿರತಕ್ಕ ಎಲ್ಲಾ ಮಹಿಳೆಯರ ಮನಸ್ಸನ್ನು ಕೆಡಿಸಿ, ಅವರ ಮನಸ್ಸಿಗೆ ನೋವು ಮಾಡಿರತಕ್ಕ ವಿಚಾರಕ್ಕಾಗಿ ಇವೊತ್ತು ನಾವು ತಲೆ ತಗ್ಗಿಸತಕ್ಕ ಸಂದರ್ಭ ಬಂದಿದೆ, ಆದುದರಿಂದ, ಈ ಬಗ್ಗೆ ಕಾನೂನು ಕಟ್ಟಳೆ ನೋಡದೆ ಎಂಟು ದಿವಸದೊಳಗೆ ಅವರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಬಂಧನದಲ್ಲಿಟ್ಟು ಈ ಸರ್ಕಾರದ ಮಾನ ಮರ್ಯಾದೆ ಉಳಿಸಿಕೊಳ್ಳಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಆರ್. ಎನ್. ನಾಯಕ್ (ಬಟ್ಕಳ).—ಸನ್ಮಾನ್ಯ ಅಧ್ಯಕ್ಷರೆ, ಕೆಲವು ಸಮಯದಿಂದ ಈ ಸದನದಲ್ಲಿ ಒಬ್ಬ ಗೌರವಸ್ಥ ಮಹಿಳೆಯನ್ನು ಸಾರ್ವಜನಿಕ ಸ್ಥಳದಲ್ಲಿ ಯಾವರೀತಿ ನಡೆದುಕೊಳ್ಳಬಾರದೋ ಆ ರೀತಿ ನಡೆಸಿಕೊಂಡಿದ್ದಾರೆ, ಮತ್ತು ದುರ್ವ್ಯವಹಾರ ನಡೆಸಿದ್ದಾರೆ ಎನ್ನುವ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ರೀತಿ ಅಗೌರವವಾಗಿ ಮಹಿಳೆಯರನ್ನು ನಡೆಸಿಕೊಳ್ಳುವ ನೀತಿ ಸರಿಯಾದುದಲ್ಲ ಎಂದು ಗೊತ್ತಿದ್ದರೂ ಸಹ ಆ ರೀತಿ ನಡೆಸಲಿಕ್ಕೆ ಆ ಜನರಿಗೆ ಧೈರ್ಯ ಹೇಗೆ ಬಂತು ಎನ್ನುವುದನ್ನು ನೋಡಲಿಕ್ಕೆ ಹೊರಟರೆ ಈ ರಾಜ್ಯದಲ್ಲಿ ಆಡಳಿತ ನಡೆಸುವವರಿಗೆ ಶಕ್ತಿ ಕಡಿಮೆಯಾಗಿದೆ, ಅವರು ಆಡಳಿತ ನಡೆಸುವ ರೀತಿ ಸರಿಯಾಗಿಲ್ಲ ; ದಕ್ಷತೆಯಿಲ್ಲ ಎನ್ನುವ ತೀರ್ಮಾನಕ್ಕೆ ನಿಲ್ಲಬೇಕಾಗುತ್ತದೆ ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ, ಈಗ ಒಬ್ಬ ವ್ಯಕ್ತಿ ತಪ್ಪು ಮಾಡಬೇಕಾದರೆ ಅದರ ಹಿಂದೆ ಬಲವಾದ ಶಿಕ್ಷೆ ಇರುತ್ತದೆ. ಈ ರೀತಿ ದೌರ್ಜನ್ಯ ನಡೆಸುವವರಿಗೂ ಕೂಡ ಆ ಕಲ್ಪನೆ ಇದ್ದರೂ ಸಹ ಈ ರೀತಿಯಾಗಿ ತಪ್ಪು ಮಾಡಿರುವುದನ್ನು ನೋಡಿದರೆ ತಾವು ಏನು ಮಾಡಿದರೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದು ಎನ್ನುವುದೇ ಈ ರೀತಿಯ ದೌರ್ಜನ್ಯಕ್ಕೆ ಪ್ರೇರಣೆ ಕೊಟ್ಟಿದೆ ಈ ಸರ್ಕಾರದಲ್ಲಿ ನಾವು ಹೇಗಾದರೂ ನುಣಚಿಕೊಳ್ಳಬಹುದು ಎನ್ನುವ ಭಾವನೆ ಅವರಿಗೆ ಇದೆ. ಸರ್ಕಾರದಲ್ಲಿ ದಕ್ಷತೆ ಇಲ್ಲದೇ ಇರುವುದೇ ಕಾರಣ. ಇದರ ಹಿನ್ನೆಲೆಯಲ್ಲಿ ಯಾರಾದರೂ ಸಹಾಯ ಮಾಡುವವರು ಸಿಕ್ಕಿದರೂ ಸಿಕ್ಕಬಹುದು. ಆ ತರಹ ಸಹಾಯ ದೊರೆಯುವ ನಿರೀಕ್ಷೆಯಿಂದ ಈ ತರಹ ಕೃತ್ಯವನ್ನು ಎಸಗಿದ್ದಾರೆ. ಆಡಳಿತದ ವೈಖರಿಯಲ್ಲಿ ಈ ತರಹ ವಾತಾವರಣ ಇದ್ದರೆ, ಈ ತರಹ ಚರ್ಚೆ ಮಾಡುವ ಸಂದರ್ಭ ಬರಬಹುದು ಆ ಸಂದರ್ಭದಲ್ಲಿ ನಾನು ಮಾತನಾಡಲಿಕ್ಕೆ ಎದ್ದಾಗ ದಯಮಾಡಿ ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳುವ ಸಂದರ್ಭ ಬರಬಹುದು. ಆದ್ದರಿಂದ, ಸರ್ಕಾರದಲ್ಲಿ ದಕ್ಷತೆ ಬರಬೇಕೆಂದು ಹೇಳುತ್ತೇನೆ. ಮಾನ್ಯ ರಾಚಯ್ಯನವರಿಗೆ ದಕ್ಷತೆ ಇಲ್ಲ ಎಂದು ನಾನು ಹೇಳುವುದಿಲ್ಲ. ಅವರಿಗೆ ನಾನು ಸಲಹೆ ಕೊಡುವುದು ಇಷ್ಟೆ, ತಪ್ಪು

ಕಾರ್ಯ ಮಾಡಿದರ ಬಲವಾದ ಶಿಕ್ಷೆ ಇದೆ ಎನ್ನುವ ಭಯ ಬರುವಂತೆ ಆಗಬೇಕು. ಮಾನ್ಯ ರಾಚಯ್ಯನವರು ಏನೋ ಹೇಳುತ್ತಾರೆ, ಆದರೆ ಪೋಲೀಸ್ ಅಧಿಕಾರಿಗಳು ತಪ್ಪಿತಸ್ಥರನ್ನು ಹಿಡಿಯುತ್ತಾರೆ ಅನಂತರ ಅವರನ್ನು ಬಿಟ್ಟುಬಿಡುತ್ತಾರೆ. ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಸುಮ್ಮನೆ ಒಂದು ಕಂಪ್ಲೆಂಟ್ ಕೊಟ್ಟರೆ ಸಾಕು ಅವರ ಬಗ್ಗೆ ಕೇಸ್ ಹಾಕಿ ಅನಂತರ ಅವರನ್ನು ಬಿಟ್ಟುಬಿಡುತ್ತಾರೆ. ಅದು ಸರಿಯಲ್ಲ, ಸರ್ಕಾರ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕು. ತಪ್ಪು ಮಾಡಿದವರು ಬಲವಾದ ಶಿಕ್ಷೆಗೆ ಒಳಗಾಗುತ್ತಾರೆ ಎನ್ನುವುದನ್ನು ಜಾರಿಗೆ ತರಬೇಕು ತಪ್ಪು ಮಾಡುವ ಪೂರ್ವದಲ್ಲಿ ನಿಮ್ಮನ್ನು ಹಿಡಿದು ಬಲಿ ಹಾಕುತ್ತೇವೆ ಎನ್ನುವ ಶಕ್ತಿ ನಮ್ಮ ಸರ್ಕಾರಕ್ಕೆ ಬರಬೇಕು. ಇಂತಹ ವಿಚಾರಗಳ ಬಗ್ಗೆ ನಾವು ತಮಗೆ ಬೆಂಬಲ ಕೊಟ್ಟು ಗೂಂಡಾ ಕಾಯಿದೆಯನ್ನು ತಂದುಕೊಟ್ಟಿದ್ದೇವೆ. ಆದರೂ ಸಹ ಏತಕ್ಕೆ ಈ ರೀತಿ ನಡೆಯುತ್ತಿದೆ ? ಇದರ ಬಗ್ಗೆ ವಿಚಾರ ಮಾಡಬೇಕು. ಈಗ ನಾವು ಪೂರ್ವ ಕಾಲದ ಬಗ್ಗೆ ವಿಚಾರ ಮಾಡೋಣ. ಸೀತೆಯನ್ನು ರಾವಣ ಹಾರಿಸಿಕೊಂಡು ಹೋದ, ಆಗಲೂ ಸಹ 4 ಜನರು ಚರ್ಚೆ ಮಾಡಿರಬಹುದು. ಆ ಪಾಪದ ಕಾರ್ಯಕ್ಕೆ ರಾವಣ ನಾಶವಾದ. ಹಾಗೆಯೇ ದ್ರೌಪದಿಗೆ ದುಶ್ಯಾಸನ ಅವಮಾನ ಮಾಡಿದ. ಆಗಲೂ ಸಹ 4 ಜನರು ಚರ್ಚೆ ಮಾಡಿರಬಹುದು. ಆ ಪಾಪದ ಕಾರ್ಯಕ್ಕೆ ಅವನ ಕತೆಯೂ ಮುಗಿದು ಹೋಗುತ್ತದೆ. ಆ ಕಾಲದ ಸಮಾಜದಲ್ಲೂ ತಪ್ಪು ಕಾರ್ಯ ಮಾಡಿದವರಿಗೆ ಶಿಕ್ಷೆ ಕೊಟ್ಟು ಮಹಿಳೆಯರನ್ನು ಕೆಟ್ಟ ರೀತಿಯಿಂದ ನಡೆಸಿಕೊಳ್ಳುವುದು ಸರಿಯಲ್ಲ ಎಂದು ತೋರಿಸಿ ಕೊಟ್ಟಿವೆ. ಅವುಗಳನ್ನೆಲ್ಲಾ ನೆನೆಸಿಕೊಂಡು ಮಹಿಳೆಯರ ಬಗ್ಗೆಯಾಗಲಿ, ಅಥವಾ ಯಾರ ಬಗ್ಗೆಯಾಗಲಿ ಅಗೌರವದಿಂದ ನಡೆದುಕೊಂಡರೆ ಶಿಕ್ಷೆಯಾಗುತ್ತದೆ ಎನ್ನುವ ಭಾವನೆ ಬರುವಂತೆ ಮಾಡಬೇಕಾಗುತ್ತದೆ ಅದಕ್ಕೋಸ್ಕರ ನಿಮ್ಮ ನೀತಿಯಲ್ಲಿ ಬದಲಾವಣೆಯಾಗಬೇಕು. ಚುನಾವಣೆ ನಡೆಯುವಂಥ ಸಂದರ್ಭದಲ್ಲಿ ಕಾರಿಗೆ ಕಲ್ಲು ಏಟು ಬಿದ್ದುದ್ದು ಪೇಪರ್‌ನಲ್ಲಿ ಬಂದರೂ ಸಹ ಏನೂ ಆಗಲಿಲ್ಲ.

6-p.m.

ಈಗ ನನ್ನ ಸ್ಥಿತಿ ಏನಾಗಿದೆ ಎಂದರೆ ಆ ಸ್ಥಳದಲ್ಲಿ ಈಗಲೂ ಹೋಗುವಾಗ ನನ್ನನ್ನು ಭಯ ಆವರಿಸುತ್ತದೆ. ನಾನೂ ಗೂಂಡಾಗಳನ್ನು ಕರೆದೊಯ್ಯಬೇಕೇ ಹೇಳಿ ? ತಪ್ಪು ಮಾಡುವವರು ಭಯ ಪಡುವಂತಹ ವಾತಾವರಣ ಎಲ್ಲೆಲ್ಲೂ ಸೃಷ್ಟಿಯಾಗಿಲ್ಲ. ನೀವೂ ಲಕ್ಷ್ಮೀಸಾಗರ್ ತರಹ ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದೇವೆ ಎಂದು ಹೇಳಿಬಿಡಬಾರದು. ನಿಮಗೂ ಬೇರೆಯವರಿಗೂ ವ್ಯತ್ಯಾಸ ತೋರಿಸಬೇಕು. ನಿಮ್ಮ ಕೈಯಲ್ಲಿ ಪೋಲೀಸ್ ಶಕ್ತಿ ಇದೆ. ಕೇಸ್ ಒತ್ತಟ್ಟಿಗೆ ಇರಲಿ. ಒಟ್ಟಿನಲ್ಲಿ ಶಿಕ್ಷೆ ಕೊಡಿ. ಶ್ರೀಮತಿ ನಾಗರತ್ನಮ್ಮನವರು ಇಂದು ಸ್ವಲ್ಪ ಭಾವಾವೇಶಭರಿತರಾಗಿ ಎಲ್ಲ ಗಂಡಸರೂ ಹಾಗೇ ಎಂದು ದೂರಿದ್ದು ಸುಳ್ಳು. ಮಹಿಳೆಯರೂ ಸಹ ಈ ದುಷ್ಕೃತ್ಯದಲ್ಲಿ ಸಹಾಯ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ನಾಗರತ್ನಮ್ಮನವರೇ ಇದನ್ನು ಪರಿಶೀಲಿಸಿ ಪುರುಷರೂ ತಪ್ಪು ಮಾಡಿದ್ದಾರೆ, ಮಹಿಳೆಯರೂ ತಪ್ಪು ಮಾಡಿದ್ದಾರೆ. ಸಮಾಜದ ಒಂದು ಭಾಗ ಇನ್ನೊಂದು ಭಾಗಕ್ಕೆ ಅವಮಾನ ಮಾಡಿದೆಯೆಂಬುದು ಇಲ್ಲಿ ಮುಖ್ಯ. ಆದ್ದರಿಂದ ತಪ್ಪು ಮಾಡಿರುವ ಭಾಗ ತಪ್ಪು ಮಾಡದಿರುವ ಭಾಗಕ್ಕೆ ಅವಮಾನ ಮಾಡಿರುವ ಕಾರಣ ತಪ್ಪಿತಸ್ಥರಿಗೆ ನಿಷ್ಠುರವಾಗಿ ಶಿಕ್ಷೆ ಕೊಡಿ. ಇಲ್ಲಿ ಪಕ್ಷ, ಭೇದ ಮರೆತು ಬಿಡಬೇಕು. ನಾವೂ ನಿಮಗೆ ಬೆಂಬಲ ಕೊಡುತ್ತೇವೆ. ತಾವು ಇದರ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮತಿ ನಾಗರತ್ನಮ್ಮನವರು ಮಾತನಾಡುವಾಗ ಈ ಪುರುಷಪ್ರಧಾನ ಸಮಾಜದಲ್ಲಿ ಹೆಂಗಸರು ಬೀಕಾಗಿದ್ದಾರೆಂದೂ, ಮತ್ತು ಶೋಷಿತರಾಗುತ್ತಿದ್ದಾರೆಂದೂ ಹೇಳಿದ್ದಾರೆ. ಅವರಿಗೆ ರಕ್ಷಣೆ ಬೇಕೆಂದು ಹೇಳಿದ್ದಾರೆ. ಇದನ್ನು ಹೇಳಿದಾಗ ಶಿಲಾಯುಗದ ಮಾನವನ ಜೀವನ ಜ್ಞಾಪಕಕ್ಕೆ ಬಂತು. ''ಇತಿಹಾಸದ ಹಾಳೆಯ ಮೇಲೆ ರಕ್ತದ ಗೆರೆಗಳು" ಎಂದು ಒಬ್ಬ ಕವಿ ಬರೆದಿದ್ದ ಅದಕ್ಕೆ ಇನ್ನೊಬ್ಬ ಕವಿ ಈ ರೀತಿ ಹೇಳುತ್ತಾನೆ : ಹೆಣ್ಣು ಹೇಳುತ್ತಾಳಂತೆ.—"ತಾನು ನಾರಿ ಇರಬಹುದು, ಆದರೆ ನನ್ನ ಮುಂದೆ ನಿಂತ ನರ ಬರ್ಬರ ನಡುಗುತ್ತಾನೆ" 'ನನಗಾಗಿ ಯುದ್ಧಗಳಾಗಿ ನರರು ನರಳಿ ಉರುಳಿದ್ದಾರೆ' ಅಶ್ವಮೇಧಯಾಗ ನಡೆದಿದೆ. ಇಂತಹ ಪರಂಪರೆಯಲ್ಲಿ ಬಂದ ಹೆಣ್ಣು 20ನೇ ಶತಮಾನದಲ್ಲಿ ಪ್ರಧಾನ ಮಂತ್ರಿಯಾದಳು, ದ್ರೌಪದಿಯಾದಳು, ಕೈಕೆಯಾದಳು........

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸಾಕು ಸುಮ್ಮನಿರಿ ! ಅದೇನು ಹೇಳಿಕೊಳ್ಳುತ್ತೀರಿ ! ನಿಮ್ಮ ಗಂಡಸರಿಗೆಲ್ಲ ಹೆಣ್ಣು ಬಿಟ್ಟಿ, ಧೋಬಿಯಾಗಬೇಕು, ಬಿಟ್ಟಿ ತಾಯಿಯಾಗಬೇಕು, ಬಿಟ್ಟಿ ಊಟ ಮಾಡಿ ಹಾಕಬೇಕು, ಕೊನೆಗೆ ಬಿಟ್ಟಿ ಹೆಂಡತಿಯಾಗಬೇಕು. ಹೀಗೆ ಪುರಾಣ ಹೇಳೀ ಹೇಳಿ ಎಲ್ಲ ಹಾಳು ಮಾಡುತ್ತಿರುವವರು ನೀವೆ !

ಶ್ರೀ ಕೆ. ಬಿ. ಶಾನಪ್ಪ.—ನೋಡಿ, ಈ ಒಂದು ವ್ಯವಸ್ಥೆಯನ್ನು ನೀವು ಅರ್ಥ ಮಾಡಿಕೊಳ್ಳಬೇಕು. ನಾವು ನಿಮ್ಮ ವಿರುದ್ಧವಾಗಿ ಹೇಳುತ್ತಿಲ್ಲನೆಂಬುದನ್ನು ಆಗ ಅರಿಯುವಿರಿ. ನಾವು ಸ್ತ್ರೀಯರಿಗೆ ಪ್ರೊಟೆಕ್ಷನ್ ಕೊಡಬೇಕು ಎಂಬುದಲ್ಲ ಸ್ವಾತಂತ್ರ್ಯದ ಹಿಂದಿನ ಮಾತು. ಈಗ ಬದಲಾವಣೆ ಆಗಿದೆ. ನಾನು ಮೊಟ್ಟ ಮೊದಲಬಾರಿಗೆ ಕರ್ನಾಟಕದಲ್ಲಿ ಇದನ್ನು ಕೇಳಿದ್ದು, ಇದನ್ನು ಸದಸ್ಯರೆಲ್ಲ ವಿರೋಧಿಸಿದ್ದಾರೆ. ಪತ್ರಿಕೆಗಳಲ್ಲೂ ಓದಿದ್ದೇವೆ. ಬರೆದಿದ್ದೇವೆ. ಎಷ್ಟೋ ಜನ ಗೂಂಡಾಗಳು ಸ್ವಾಮೀಗಳ ಸೋಗು ಹಾಕಿಕೊಂಡು ಮೆರೆಯುತ್ತಿದ್ದಾರೆ. ಅವರನ್ನು ಮೊದಲು ಜೈಲಿಗೆ ಹಾಕಿ. ನೀವು ಪನಿಷ್‌ಮೆಂಟ್ ಎಂದು ಕೊಡುವುದು ಬೇಡ. ಮೊದಲ ಕ್ರಮವಾಗಿ ಅವರಿಗೆ ಶಿಕ್ಷೆ ನೀಡಿ. ಕೇಸ್ ಹಾಡಿಗೆ ಕೇಸ್ ನಡೆಯಲಿ. ನಾವೆಲ್ಲ ಸೇರಿ ಸಂಬಂಧಪಟ್ಟವರಿಗೆ, ಕಿರುಕುಳಕ್ಕೀಡಾಗಿರುವವರಿಗೆ ರಾಜಕೀಯ ಬೇಕಾದರೆ ಬಿಟ್ಟು ರಕ್ಷಣೆ ಕೊಡೋಣ. ಒಟ್ಟಾರೆ ಈ ಸದನದ ಅಭಿಪ್ರಾಯದ ಜವಾಬ್ದಾರಿ ನೀವು ಹೊರಬೇಕು.

*ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಚರ್ಚೆಯಾಗುತ್ತಿರುವುದು ಬಹಳ ಗಂಭೀರವಾಗಿರತಕ್ಕಂಥಾ ವಿಷಯ. ನಾವೇ ಅಲ್ಲ, ಹೊರಗೂ ಮತ್ತು ಜವಾಬ್ದಾರಿಇರತಕ್ಕಂಥ ಎಲ್ಲರೂ ಸಹ ಇದಕ್ಕೆ ಉತ್ತರಿಸಬೇಕು. ಇದು ಹೆಣ್ಣು ಗಂಡಿನ ಪ್ರಶ್ನೆಯಲ್ಲ. ಹೆಣ್ಣುತನದ ಪ್ರಶ್ನೆ ಈ ದೇಶದಲ್ಲಿ ಹೆಣ್ಣುತನವನ್ನು ಬಹಳ ಗೌರವದಿಂದ ಕಾಪಾಡಿಕೊಂಡು ಬಂದಿದ್ದಾರೆ. ಅಸಭ್ಯ ವರ್ತನೆ ಮಾಡತಕ್ಕಂಥ ಜನ ಇರಬಹುದು. ಮತ್ತೆ ಅದನ್ನು ಮಾಡದಿರತಕ್ಕಂಥವರೂ ಇರಬಹುದು. ಆದರೆ ನಾವು ಚರ್ಚೆ ಮಾಡತಕ್ಕಂಥ ವಿಷಯ ಎಂದರೆ ಒಬ್ಬಳ ಹೆಣ್ಣುತನವನ್ನು ಹರಣ ಮಾಡಿರತಕ್ಕಂಥ ವಿಚಾರ. ಈಗ ರಾಚಯ್ಯನವರು ಗೃಹಮಂತ್ರಿಗಳಾಗಿದ್ದಾರೆ. ನನಗಂತೂ ಬಹಳ ಆಸೆ, ಬಹಳ ಪ್ರೀತೀನೂ ಉಂಟು. ನಾವೆಲ್ಲ ಒಂದೇ ಜಾಗದಲ್ಲಿ ಓದಿದ್ದು, ಒಂದೇ ವಿಚಾರಕ್ಕೆ ಸೇರಿದವರು. ತಾವು ಮಾತ್ರ ಎರಡು ಕಡೆ ಮಾಡಿದ್ದು. ನನ್ನ ನಿರೀಕ್ಷೆ ಏನಿತ್ತೋ ಅದನ್ನು ಮೀರಿ ಕೆಲಸ ಮಾಡುತ್ತಾರೆ ಮತ್ತು ಈ ಕರ್ನಾಟಕದಲ್ಲಿ ಅಬಲ ಜನ ಇದ್ದಾರಲ್ಲ ಅವರ ಕಷ್ಟಕಾರ್ಪಣ್ಯಗಳನ್ನು ನಿವಾರಿಸಿ ಅವರನ್ನು ಕಾಪಾಡುತ್ತಾರೆ, ಅವರಿಗೆ ರಕ್ಷಣೆ ಸಿಗುತ್ತದೆಂದು ನಿರೀಕ್ಷೆ ಮಾಡಿದ್ದೆ. ನಾನೂ ಕೂಡ ಹಿಂದೆ ಉಪ ಗೃಹ ಮಂತ್ರಿಯಾಗಿದ್ದೆ. ಅದು ಎಲ್ಲರಿಗೂ ಗೊತ್ತು. ನಾನು ಏನು ಮಾಡಿದ್ದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಎಲ್ಲಿಯವರೆಗೆ ಅಧಿಕಾರದಲ್ಲಿದ್ದೆ, ಅಲ್ಲಿಯವರೆಗೆ ಕೂಡ ಯಾವ ಹೆಣ್ಣಿಗೇ ಆಗಲೀ ಯಾವ ಬಡ ಜನರಿಗೇ ಆಗಲಿ ಅನ್ಯಾಯವಾಗಿದ್ದು ಗೊತ್ತಿಲ್ಲ. ಕಾರಣವೇನೆಂದರೆ, ಸರ್ಕಾರ ನಡೆಸತಕ್ಕಂತಹವರು ಅಧಿಕಾರಿಗಳನ್ನು ಹತೋಟಿಯಲ್ಲಿ ಇಡಬೇಕು. ಅವರ ಕಾರ್ಯ ನಿರ್ವಹಣೆಯನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕು. ಪೋಲೀಸ್ ಅಧಿಕಾರಿಗಳು ನನ್ನ ಸ್ನೇಹಿತರು. ಹೋಮ್ ಸೆಕ್ರೆಟರಿಯವರು ನನ್ನ ಸ್ನೇಹಿತನ ಮಗ. ಇವರೆಲ್ಲರೂ ಒಳ್ಳೆಯ ವಾತವರಣದಲ್ಲಿ ಬೆಳೆದಿರತಕ್ಕಂತಹವರು. ಇಂತಹ ಒಂದು ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಹೆಣ್ಣಿಗೆ, ಹೆಣ್ಣುತನಕ್ಕೆ ಅವಮಾನ ಮಾಡಿದ್ದಾರೆ, ಇದು ಸರಿಯಲ್ಲ. ಇಂತಹ ಒಂದು ಪ್ರಸಂಗ ಆಗಬೇಕಾದರೆ, ಪೋಲೀಸ್ ಅಧಿಕಾರಿಗಳ ಬೆಂಬಲ ಇಲ್ಲದೇ ಹೋದರೆ, ಈ ಪ್ರಸಂಗ ಆಗುವುದಿಲ್ಲ. ಯಾರು ಕೆಟ್ಟ ಕೆಲಸ ಮಾಡುವುದಕ್ಕೆ ಮನಸ್ಸು ಮಾಡುತ್ತಾರೆ, ಅವರಿಗೆ ಪೋಲೀಸ್ ಅಧಿಕಾರಿಗಳ ಬೆಂಬಲ ಇರಲೇಬೇಕು. ಇಲ್ಲದೇ ಹೋದರೆ ಇಂತಹ ಪ್ರಸಂಗಗಳು ಆಗುವುದೇ ಇಲ್ಲ. ಉದಾಹರಣೆಗೆ ಹೇಳುತ್ತೇನೆ, ಹಿಂದೆ ನಾನು ಉಪ ಗೃಹ ಮಂತ್ರಿಯಾಗಿದ್ದಾಗ ಮಂಡ್ಯ ಜಿಲ್ಲೆಯಲ್ಲಿ ಪೋಲೀಸ್ ಟ್ರೀಟ್‌ಮೆಂಟ್ ಮೆತಡ್ ಎಂದು ಒಂದು ಪ್ರಯೋಗವನ್ನು ಮಾಡಿದ್ದೆ. ಆದರೆ ತಾಲ್ಲೂಕುಗಳಲ್ಲಿ, ಡಿಸ್ಟ್ರಿಕ್‌ಗಳಲ್ಲಿ ಪೋಲೀಸ್ ಸ್ಟೇಷನ್‌ಗಳ ಒಂದು ಚೌಕಟ್ಟು ಇದೆ, ಆ ಚೌಕಟಿನಲ್ಲಿ ಯಾರು ಕೆಟ್ಟವರು ಇದ್ದಾರೆ, ಕೆಟ್ಟ ಅಭ್ಯಾಸ ಮಾಡಿಕೊಂಡಿದ್ದಾರೆ, ಕೆಟ್ಟ ಅಭ್ಯಾಸವನ್ನೇ ಕಸಬನ್ನಾಗಿಸಿಕೊಂಡು ಜೀವನ ಮಾಡುತ್ತಿದ್ದಾರೆ, ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರತಿ ದಿನ ಕರೆದು ಸರಿಯಾಗಿ ಟ್ರೀಟ್‌ಮೆಂಟ್ ಕೊಟ್ಟು ಕಳಿಸುತ್ತಿದ್ದೆವು. ಆ ಆರು ತಿಂಗಳಲ್ಲಿ ಒಂದು ಕೇಸ್ ಕೂಡ ರಿಜಿಸ್ಟರ್ ಆಗಲಿಲ್ಲ. ಬೇಕಾದರೆ, ಇದರ ಬಗ್ಗೆ ಮಾನ್ಯ ಗರುಡಾಚಾರ್‌ರವರನ್ನು ಕೇಳಬಹುದು. ಕೋರ್ಟಿನಲ್ಲಿ ನಮಗೆ ಕೇಸುಗಳೇ ಇಲ್ಲವೆಂದು ಹೇಳುತ್ತಿದ್ದರು. ಪೋಲೀಸ್ ಅಧಿಕಾರಿಗಳು, ಮತ್ತು ಆಗಿನ ಐ.ಜಿ.ಪಿ. ಆಗಿದ್ದ ಶ್ರೀ ಮೋನಪ್ಪನವರು, ನಮಗೆ ಕೆಲಸಗಳೇ ಇಲ್ಲವೆಂದು ಕಂಪ್ಲೇಂಟ್ ಮಾಡಿದರು. ಸರ್ಕಾರ ನಡೆಸತಕ್ಕಂತಹವರು ಪಾವಿತ್ರ್ಯತೆಯ ಉದ್ದೇಶವನ್ನು ಇಟ್ಟುಕೊಂಡು ಕೆಲಸ ಮಾಡದೇ ಹೋದರೆ, ಅದು ಅಧಿಕಾರಿಗಳ ಮೇಲೆ ಪರಿಣಾಮ ಆಗುವುದೇ ಇಲ್ಲ. ಇಂಡಿಯನ್ ಪೀನಲ್ ಕೋಡ್ 156ನೇ ಸೆಕ್ಷನ್ ಪ್ರಕಾರ ಅಪರಾಧಿಗಳ ಮೇಲೆ ಚಾರ್ಜ್ ಷೀಟ್ ಹಾಕುತ್ತೇವೆ, ಇಂತಹ ಘಟನೆಗಳು ಮತ್ತೆ ಆಗಬಾರದು ಅನ್ನುವ ವಾತಾವರಣವನ್ನು ಸೃಷ್ಟಿ ಮಾಡಲಿಕ್ಕೆ ಈ ಜನತಾ ಸರ್ಕಾರ ಇರುವುದು. ಸರ್ಕಾರ ನಡೆಸತಕ್ಕಂತಹವರಿಂದ ಬಡವರಿಗೆ ಅನ್ಯಾಯ ಆಗುವುದು ನಿಲ್ಲಬೇಕು. ಹೆಣ್ಣುತನಕ್ಕೆ ಭಂಗ ಆಗುವುದು ನಿಲ್ಲಬೇಕು. ಇದನ್ನು ನಿಲ್ಲಿಸದೇ ಹೋದರೆ, ಸರ್ಕಾರ ಒಳ್ಳೆಯ ರೀತಿಯಲ್ಲಿ ಕಾರ್ಯಭಾರ ಮಾಡುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಇವತ್ತು ಜನತಾ ಪಕ್ಷದವರು ಅಧಿಕಾರಕ್ಕೆ ಬಂದಿದ್ದಾರೆ. ತಾವು ಪ್ರತಿ

ಯೊಂದು ಹಳ್ಳಿಗಳಿಗೆ ಹೋಗಿ ನೋಡಿ, ಉಳ್ಳವರು ಇಲ್ಲದವರ ಮೇಲೆ ಹಲ್ಲೆ ಮಾಡಿದ್ದಾರೆ. ಸೋಷಿಯಲ್ ಬಾಯ್‌ಕಾಟ್, ಎಕನಾಮಿಕ್ ಬಾಯ್‌ಕಾಟ್ ಮಾಡುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಚಿತ್ರ ಹಿಂಸೆಯನ್ನು ಕೊಡುತ್ತಿದ್ದಾರೆ. ಇದಕ್ಕೆ ಪೋಲೀಸರ ಹೆದರಿಕೆ ಇಲ್ಲದೇ ಹೋದರೆ, ತಪ್ಪು ಮಾಡುವವರಿಗೆ ಹೆದರಿಕೆ ಇರುವುದಿಲ್ಲ. ಈಗ ಪೋಲೀಸಿನವರ ಹೆದರಿಕೆ ಇಲ್ಲವೆಂದ ಹಾಗಾಯಿತು. ಕುದುರೆಮೋತಿ ಪ್ರಸಂಗ ಬೇರೆ. ಒಬ್ಬ ಗೃಹಿಣಿಯನ್ನು ಇವತ್ತು ಅಸಭ್ಯ ವರ್ತನೆಯಿಂದ ಕಾಣುವ ಸಾಹಸ ಮಾಡಬೇಕಾದರೆ, ಆ ಸ್ವಾಮಿ ಒಳ್ಳೆಯವನೋ, ಕೆಟ್ಟವನೋ ನನಗೆ ಗೊತ್ತಿಲ್ಲ. ಇದು ಪೋಲೀಸಿನವರಿಗೆ ಗೊತ್ತು. ಅವರ ಸಹಕಾರ ಇಲ್ಲದೇ ಹೋದರೆ, ಈ ಕೆಲಸ ಆಗುತ್ತಿರಲಿಲ್ಲ. ಚಾರ್ಜ್‌ಷೀಟ್ ಹಾಕಿದ್ದೀರಿ. ಕೇಸ್ ನಡೆಸಿದ್ದೀರಿ. ಸಾಕ್ಷಿಗಳ ವಿಚಾರಣೆ ಮಾಡಿದ್ದೀರಿ. ಇದರಿಂದ ಒಳ್ಳೆಯ ವಾತಾವರಣ ಮೂಡುತ್ತದೆಯೋ, ಸಭ್ಯತೆ ಬರುತ್ತದೆಯೋ, ಎಲ್ಲಾ ಅಸ್ತ್ರಗಳು ನಿಮ್ಮ ಕೈಯಲ್ಲಿಯೋ ಇವೆ. ಇಂತಹ ಅಸಭ್ಯ ವರ್ತನೆಗೆ ಹೆದರಿಕೆಯ ವಾತಾವರಣವನ್ನು ನಿರ್ಮಾಣ ಮಾಡದೇ ಹೋದರೆ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ. ಇವತ್ತು ಬಡವರಿಗೆ ನೆಲೆ ಇಲ್ಲ ಎನ್ನತಕ್ಕಂತ ಪರಿಸ್ಥಿತಿ ಬಂದಿದೆ- ಶ್ರೀಮಾನ್ ರಾಚಯ್ಯನವರು ತಿಳಿದವರಾಗಿದ್ದಾರೆ. ದಲಿತವರ್ಗಕ್ಕೆ ಸೇರಿದವರು. ಅವರಿಂದ ದಲಿತರಿಗೆ ರಕ್ಷಣೆ ಬೇಕು. ಆನೇಕಲ್ ತಾಲ್ಲೂಕಿನಲ್ಲಿ ಎಕನಾಮಿಕ್ ಬಾಯ್‌ಕಾಟ್ ಮಾಡಿದ್ದಾರೆ. ಒಂದು ಗ್ರಾಮದಲ್ಲಿ ಆರ್ಥಿಕ ದಿಗ್ಬಂಧನ ಮಾಡಿದ್ದಾರೆ. ಬಡವರು ಎಲ್ಲ ಚಿತ್ರಹಿಂಸೆಯನ್ನು ಸಹಿಸುವುದಕ್ಕೆ ತಯಾರಾಗಿದ್ದಾರೆ. ಅವರಿಗೆ ಸಿಟ್ಟು ಬರುವ ಹಾಗೆ ತಪ್ಪುಗಳನ್ನು ಮಾಡುವುದಕ್ಕೆ ಹೋಗಬೇಡಿ. ಆ ಪಕ್ಷ ಈ ಪಕ್ಷವೆಂದಲ್ಲ. ಜನತಾ ಪಕ್ಷ ಬಂದ ಮೇಲೆ ಬಡವರಿಗೆ ಚಿತ್ರಹಿಂಸೆ, ಅನ್ಯಾಯವಾಗತಕ್ಕಂಥಾದ್ದು ಜಾಸ್ತಿಯಾಗಿದೆ ಅದು ನಿಲ್ಲಬೇಕು. ಮಂತ್ರಿಗಳು 54 ಗಂಟೆಕಾಲ ಆಸಕ್ತಿ ವಹಿಸಿ ಕೆಲಸ ಮಾಡಬೇಕು. ತಮ್ಮ ಕೈಕೆಳಗೆ ಕೆಲಸ ಮಾಡುವಂತಹವರಿಗೆ ಹೆದರಿಕೆ ಇರಬೇಕು. ನಿಷ್ಠಾವಂತರಾಗಿ ಅಧಿಕಾರಿಗಳು ಕೆಲಸ ಮಾಡದೇ ಹೋದರೆ, ಕಾನೂನು ಪ್ರಕಾರ ಕೆಲಸ ಮಾಡದೇ ಹೋದರೆ, ಯಾವ ದಾಕ್ಷಿಣ್ಯವೂ ಇಲ್ಲದೆ, ಅವರನ್ನು ಶಿಕ್ಷಿಸಬೇಕು. ಇಂತಹ ಒಂದು ಹೆದರಿಕೆ ಎಲ್ಲ ಕಚೇರಿಯ ಅಧಿಕಾರಿಗಳಲ್ಲಿ ಬರಬೇಕು. ಇಲ್ಲದಿದ್ದರೆ ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ. ನಾನೂ ಸಹ ಸರ್ಕಾರದ ಕೆಲಸಗಳನ್ನು ನಿರ್ವಹಣೆ ಮಾಡಿದ್ದೇನೆ. ಎಲ್ಲ ಅಧಿಕಾರಿಗಳು ನನ್ನ ಜೊತೆ ಪ್ರೀತಿಯಿಂದ ಇದ್ದರು. ಕೆಟ್ಟ ಕೆಲಸ ಮಾಡುವಾಗ, ಅಸಭ್ಯವಾದ ಕೆಲಸ ಮಾಡುವಾಗ ಅವರು ನನ್ನನ್ನು ನೆನಸಿಕೊಳ್ಳಬೇಕು. ಆರೀತಿ ಇಟ್ಟುಕೊಂಡಿದ್ದೆ. ತಾವೂ ಈ ಮಾದರಿಯಾಗಿ ಕೆಲಸ ಮಾಡಿ ಎಂದು ಕೈಮುಗಿದು ಹೇಳುತ್ತಿದ್ದೇನೆ. ಪೋಲೀಸ್ ಅಧಿಕಾರಿಗಳೇನಿದ್ದಾರೆ, ಅವರನ್ನು ಸಾಮಾನ್ಯರೆಂದು ತಿಳಿದುಕೊಳ್ಳಬೇಡಿ. ಅವರು ಮಾಡತಕ್ಕಂತಹ ಕೆಲಸ, ಮಾಡದೇ ಇರತಕ್ಕಂತಹ ಕೆಲಸ ಯಾವುದೂ ಉಳಿದೇ ಇಲ್ಲ. ಅವರು ಒಳ್ಳೆ ಕೆಲಸ ಮಾಡುವುದಕ್ಕೆ ಅವರಿಗೆ ದಾರಿ ತೋರಿಸಿಕೊ ಈ ಇನ್ನು ಸನ್ಯಾಸಿಗಳ ಬಗ್ಗೆ ಹೇಳಬೇಕೆಂದರೆ, 5-6 ಜನ ಸನ್ಯಾಸಿಗಳಿಗೆ ನಾನು ಲಾಯರಾಗಿದ್ದೆ. ಬಿ. ಸ್ವಾಮಿಗಳಿಲ್ಲ. ನನ್ನ ಹತ್ತಿರ ಬರುತ್ತಿದ್ದ ಸ್ವಾಮಿಗಳಿಗೆ ಎಷ್ಟು ಜನ ಹೆಂಡತಿಯರು ! ಇವರನ್ನು ಸ್ವಾಮಿಗಳೆಂದು ಕರೆಯುತ್ತೀರಾ ? ಅವರಿಗೆ ಆಸ್ತಿ ಮಾಡಿಕೊಡುವುದು, ಸಂಪಾದನೆಗೆ ದಾರಿ ಮಾಡಿಕೊಡುವುದು ಹಣ ಒದಗಿಸುವುದು ಇದೇ ಕೆಲಸ ಇಂತಹವರಿಗೆ ಧಾರ್ಮಿಕ ದೃಷ್ಟಿಯಿಂದ, ಜಾತಿಯ ಬೆಂಬಲ ಪಂಥದ ಬೆಂಬಲ ಇರುವುದರಿಂದ ಇವನ್ನೆಲ್ಲಾ ಮಾಡುತ್ತಾರೆ. ಇಷ್ಟೆಲ್ಲಾ ಅನುಭವಿಸಿ ಅವನು ಚೆನ್ನಾಗಿ ತಿನ್ನುತ್ತಾನೆ ; ಸುಪ್ಪತ್ತಿಗೆ ಮೇಲೆ ಮಲಗುತ್ತಾನೆ, ಮತ್ತು ಯೋಚನೆ ಮಾಡುತ್ತಾನೆ. ಇದನ್ನು ನಾನು ಕಣ್ಣಾರೆ ನೋಡಿದ್ದೇನೆ. ಇವರಲ್ಲಿ ಎಲ್ಲಾ ಸ್ವಾಮಿಗಳು ಹೀಗೇ ಎಂದು ನಾನು ಹೇಳುವುದಿಲ್ಲ. ಕೆಲವರು ಮಾತ್ರ.

ಶ್ರೀ ಎಂ. ಎಸ್. ಕೃಷ್ಣನ್,—ತಾವು ಲಾಯರ್ ಕೆಲಸ ಮಾಡುತ್ತಿದ್ರಿ, ಇಂತಹ ಕೇಸುಗಳ ಬಗ್ಗೆ ತಾವು ವಕಾಲತ್ತು ವಹಿಸಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ —ಇದು ಬಹಳ ಸ್ವಾರಸ್ಯವಾದ ಸಮಸ್ಯೆ. ದೇಶದಲ್ಲಿ ಧಾರ್ಮಿಕಸಾಧನೆಯನ್ನು ಮಾಡಿಕೊಂಡು ಇಂತಹ ಅಸಭ್ಯ ವರ್ತನೆಯಿಂದ ನಡೆಯತಕ್ಕವರಿಗೆ ನೀವೇನು ಮಾಡಬೇಕು ? ನಿಮಗೆ ಅಸ್ತ್ರಗಳಿವೆ. ಮಾನ್ಯಸದಸ್ಯರಾದ ಶ್ರೀನಿವಾಸ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಇಂತಹವರನ್ನು ಸ್ವತಂತ್ರವಾಗಿ ಬೀದಿಯಲ್ಲಿ ತಿರುಗಾಡಲಿಕ್ಕೆ ಬಿಟ್ಟು ನೋಡುತ್ತಿದ್ದೀರಿ. ಅವರ ಮೇಲೆ ಚಾರ್ಜ್‌ಶೀಟ್ ಹಾಕಿದ್ದೇವೆಂದು ಹೇಳುತ್ತೀರಿ. ಅವರಿಗೆ ಯಾವ ಬೆಂಬಲವಿದೆ ? ನೀವು ಅವರಿಗೆ ಪಾಠ ಕಲಿಸಬೇಕು. ಜನಗಳಲ್ಲಿ ಶಾಂತಿ ವಾತಾವರಣವನ್ನು ಸೃಷ್ಟಿಮಾಡಲಿಕ್ಕೆ ತಾವು ಪ್ರಯತ್ನಮಾಡಬೇಕು. ಹೆಣ್ಣುಮಗಳ ಪರವಾಗಿ ಹೋದವರನ್ನು ಒಳಗೆ ಹಾಕುತ್ತೀರಿ, ವಿರೋಧವಾಗಿರುವವರನ್ನು ಬಿಟ್ಟು ಕಳುಹಿಸುತ್ತೀರಿ. ಸ್ವಾಮಿಗಳ ಕಡೆಯವರು ಬಂದು ದಂಡಿಸುತ್ತಾರೆ. ಹೊಡೆಯುತ್ತಾರೆ, ಮತ್ತು ತೊಂದರೆ ಕೊಡುತ್ತಿದ್ದಾರೆ. ಇಂತಹವರನ್ನು ಹತೋಟಿಗೆ ತರಲು ನೀವೇನು ಮಾಡಬೇಕಾದರೆ ನಿಮ್ಮಲ್ಲಿ ಪೋಲೀಸ್ ಆಕ್ಟ್ ಇದೆ, ಗೂಂಡಾ ಆಕ್ಟ್ ಇದೆ, ಐ.ಪಿ.ಸಿ. ಇದೆ, ಎಲ್ಲಾ ಇದೆ : ಎಲ್ಲಾ- ನೀವು ಏತಕ್ಕೆ ಅದನ್ನು,

ಉಪಯೋಗಿಸಿಲ್ಲ. ನೀವು ಒಳ್ಳೆಯ ವಾತಾವರಣವನ್ನು ಸೃಷ್ಟಿಸದೇ ಹೋದರೆ ನಿಮ್ಮ ಸರ್ಕಾರವನ್ನು ಒಳ್ಳೆಯ ಸರ್ಕಾರವೆಂದು ಹೇಗೆ ಹೇಳುವುದು ? ನಿಮ್ಮ ಅಧಿಕಾರಿಗಳು ಅನಿದ್ದಾರೆ ಅವರಿಗೆ ನೀವು ಸರಿಯಾದ ತಾಕತ್ತು ಕೊಡಿ. ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಇಂತಹ ಘಟನೆಗಳು ನಡೆಯಬಾರದು ಒಂದು ಪೋಲೀಸ್ ಸ್ಟೇಶನ್ನಿನ ವ್ಯಾಪ್ತಿಯಲ್ಲಿ ಏನೇನು ನಡೆಯುತ್ತಿದೆ. ಎನ್ನುವುದು ಅವರಿಗೆ ಎಲ್ಲರಿಗೂ ಗೊತ್ತಿರುತ್ತದೆ. ತಪ್ಪು ಮಾಡುವವರನ್ನು ಕಂಟ್ರೋಲ್ ಮಾಡುವುದಕ್ಕೆ ಯೋಗ್ಯತೆ ಇಲ್ಲದಿದ್ದರೆ ಅವರು ಅಲ್ಲಿರುವುದಕ್ಕೆ ನಾಲಾಯಕ್. ಅಲ್ಲಿ ನಡೆಯತಕ್ಕ ಅವ್ಯವಹಾರವನ್ನು ತಡೆಯದೇ ಹೋದರೆ ಪೋಲೀಸ್ ಏತಕ್ಕೆ ಇರಬೇಕು ? ಶ್ರೀಮತಿ ನಾಗರತ್ನಮ್ಮನವರು ಸರಿಯಾಗಿ ಹೇಳಿದ್ದಾರೆ. ಹೆಣ್ಣಿನ ಕರುಳಿನ ಮುಖಾಂತರ ಅವರು ಮಾತನಾಡಿದ್ದಾರೆಂದು ನಾನು ಹೇಳುತ್ತೇನೆ. ಅದನ್ನು ತಾವು ಅರಿತುಕೊಳ್ಳಬೇಕು. ಒಳ್ಳೆಯ ವಾತಾವರಣವನ್ನು ಸೃಷ್ಟಿಮಾಡಬೇಕು, ಬಡವರಿಗೆ ಯಾರಿಗೂ ಕಷ್ಟ ಬರಬಾರದು. ಜನಗಳಿಗೆ ಕಷ್ಟಬಂದಾಗ ಪೋಲೀಸ್‌ನವರು ಕಷ್ಟ ಕೊಡುವವರಿಗೆ ಶಿಕ್ಷೆ ಕೊಡಬೇಕು. ಈ ಬಗ್ಗೆ ಸದಸ್ಯರೆಲ್ಲಾ ಸಾಕಷ್ಟು ಹೇಳಿದ್ದಾರೆ, ನಾನೂ ಹೇಳಿದ್ದೇನೆ. ಇವಕ್ಕಿಂಥ ಹೆಚ್ಚಿಗೆ ಹೇಳಿದರೆ ಏನೂ ಪ್ರಯೋಜನವಿಲ್ಲ. ಒಳ್ಳೆಯ ವಾತಾವರಣವನ್ನು ಸೃಷ್ಟಿಮಾಡಲಿಕ್ಕೆ ಪ್ರಯತ್ನಮಾಡಿ. ಯಾರ್‍ಯಾರು ಕಾನೂನಿಗೆ ಭಂಗ ತರಲಿಕ್ಕೆ ಹೋಗುತ್ತಾರೆ ಮತ್ತು ಅಸಭ್ಯ ರೀತಿಯಲ್ಲಿ ವರ್ತನೆ ಮಾಡುತ್ತಾರೆ ಅಂತಹವರಿಗೆ ನಿಮ್ಮ ಕಡೆಯಿಂದ ಬೆದರಿಕೆಯಿರಬೇಕು ಮತ್ತು ಅಂತಹ ವಾತಾವರಣವನ್ನು ಸೃಷ್ಟಿ ಮಾಡಬೇಕೆಂದು ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೆ, ಸಾಕಷ್ಟು ಮಂದಿ ಸದಸ್ಯರು ಈ ಪ್ರಕರಣದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ನಾನು ಹೆಚ್ಚು ವಿಸ್ತಾರವಾಗಿ ಇದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಅಲ್ಲದೆ ಇಲ್ಲಿಯವರೆಗೆ ಯಾವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಪುನರುಚ್ಚಾರಣೆ ಮಾಡಲಿಕ್ಕೆ ಇಷ್ಟಪಡುವುದಿಲ್ಲ. ಆ ಒಂದು ಘಟನೆಯ ಬಗ್ಗೆ ಪ್ರಸ್ತಾಪಮಾಡಿಬೇಕಾದ ವಿಚಾರ ಕೂಡ ವಿಷಯಕ್ಕೆ ಸೀಮಿತವಾಗಿದೆ. ಏಕೆಂದರೆ, ಒಂದು ಪ್ರಮಾಣದ ವಿಚಾರದಲ್ಲಿ 19ನು ದಿಯ ಮೇಲೆ ಚಾರ್ಜ್‌ಶೀಟ್ ಹಾಕಿದ್ದಾರೆ ಅದರ ಬಗ್ಗೆ ಸಿ.ಒ.ಡಿ. ತನಿಖೆ ಕೂಡ ಆಗಿದೆ. ಯಾವ ಪ್ರಮಾಣದ ಬಗ್ಗೆ ಚಾರ್ಜ್ ಹಾಕಿದ್ದಾರೆ ಆ ವಿಚಾರವನ್ನು ಮಾನ್ಯ ಸಚಿವರು ಹೇಳಬೇಕು. ಇದರಲ್ಲಿ ಎರಡು ಭಾಗ ಇದೆ. ಇಬ್ಬರು ಮಹಿಳೆಯರ ಮೇಲೆ ಅಂದರೆ ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀಮತಿ ಹುಸೇನಬಿ ಇವರ ಮೇಲೆ ಅಮಾನುಷವಾದ, ಕ್ರೂರವಾದ, ನಾಗರೀಕರು ತಲೆತಗ್ಗಿಸಬೇಕಾದ ಕೃತ್ಯವನ್ನು ಕೆಲವು ಜನ ಕುದುರೆಮೋತಿಯಲ್ಲಿ ಎಸಗಿದ್ದಾರೆ. ಈ ಕೇಸಿನ ಬಗ್ಗೆ ಇನ್ವೆಸ್ಟಿಗೇಷನ್ ಮಾಡಿ ಅನ್ಯಾಯವಾಗಿರುವುವರ ಬಗ್ಗೆ ಚಾರ್ಜ್‌ಶೀಟ್ ಹಾಕಿದ್ದಾರೆ ಬಹುಶಃ ನಾವು ಇಲ್ಲಿ ಚರ್ಚೆಮಾಡುವುದನ್ನು ತಪ್ಪಿಸಬಹುದಾಗಿತ್ತು. ಆದರೆ ಈ ಕೇಸಿನಲ್ಲಿ ಚಾರ್ಜ್‌ಶೀಟ್ ಹಾಕತಕ್ಕಂತಹ ಸಂದರ್ಭದಲ್ಲಿ ಚಾರ್ಜ್‌ಶೀಟ್ ಹಾಕುವವಂತಹ ವಿಚಾರದಲ್ಲಿ ಕೂಡ ಸಮರ್ಪಕವಾದಂತಹ ಕೆಲಸವನ್ನು ಪೋಲೀಸ್‌ನವರು ಮಾಡಿಲ್ಲ ಎನ್ನುವ ಆಪಾದನೆ ಇದೆ. ವಿಧಾನಪರಿಷತ್ತಿನಲ್ಲೂ ಕೂಡ ಈ ವಿಚಾರ ಬಂತು. ಶ್ರೀಮತಿ ಪಾರ್ವತಮ್ಮನವರು ಕೊಟ್ಟಂತಹ ಹೇಳಿಕೆಯನ್ನು ನೋಡಿದರೂ ಅಮಾನುಷವಾಗಿ ನಡೆದುಕೊಂಡಿದ್ದಾರೆ ಎನ್ನುವ ಆಪಾದನೆ ಇದೆ. ಇದನ್ನು ಸಾರ್ವತ್ರಿಕವಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ವಿಚಾರದಲ್ಲಿ ಹೇಳಿಕೆಯನ್ನು ತೆಗೆದುಕೊಳ್ಳುವಾಗ ಏನೋ ಒಂದು ರೀತಿಯ ಕುತಂತ್ರ ನಡೆದಿದೆ ಎಂದು ವಿಧಾನಪರಿಷತ್ತಿನಲ್ಲಿ ಚರ್ಚೆಯಾಗಿದೆ. ಅದು ನಡೆದಿದ್ದರೂ ಪುನಃ ಮರು ಹೇಳಿಕೆಯನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ. ಚಾರ್ಜ್ ಶೀಟ್ ಹಾಕುವುದಕ್ಕೆ ಮೊದಲು ಪುನರ್ ವಿಮರ್ಶೆಮಾಡಲಿಕ್ಕೆ ಸಾಧ್ಯವಿದೆ. ಕಾನೂನು ಪ್ರಕಾರ ಅದನ್ನು ವಿಚಾರಮಾಡಬೇಕು. ಅದನ್ನು ಈ ಸದನಕ್ಕೆ ಹೇಳಬೇಕಾಗಿತ್ತು. ನಡೆದಂತಹ ಘಟನೆಯ ಹಿನ್ನೆಲೆಯಲ್ಲಿ ಘಟನೆ ನಡೆದ ಮೇಲೆ ಯಾವ ಒಂದು ವಿದ್ಯಮಾನಗಳು ನಡೆದಿದೆ ಅದು ಯಾರಿಗೂ ಶೋಭೆ ತರತಕ್ಕ ವಿದ್ಯಮಾನಗಳಲ್ಲ. ನಡೆದಂತಹ ಘಟನೆಯನ್ನು ತಪ್ಪಿಸಬಹುದಾಗಿತ್ತು. ಪೋಲೀಸ್ ಅಧಿಕಾರಿಗಳು ಹಿಂದಿನ ದೂರಿನ ಮೇಲೆ ವ್ಯವಸ್ಥಿತವಾದ ಸರಿಯಾದ ವಿಚಾರಣೆಯನ್ನು ಮಾಡಿದ್ದರೆ ತಪ್ಪಿಸಬಹುದಾಗಿತ್ತು. ವಿಚಾರಣೆಯನ್ನು ಮಾಡದೆ ಇರಲಿಕ್ಕೆ ಪ್ರಯತ್ನ ಕೂಡ ನಡೆದಿದೆ, ಕೆಲವು ಪ್ರಭಾವಿ ವ್ಯಕ್ತಿಗಳ ವಲಯದಲ್ಲಿ ನಡೆದಿದೆ ಎನ್ನುವುದು ಇಡೀ ದೇಶಕ್ಕೆ ಜಗಜ್ಜಾಹೀರಾದಂತಹ ವಿಚಾರ. ಏಪ್ರಿಲ್ 15ರಂದು ನಡೆದಂತಹ ಘಟನೆ ಏನು ? ಕೊಪ್ಪಳದ ಎ.ಎಸ್.ಪಿ. ಅವರಿಗೆ ಧೂರು ಕೊಟ್ಟಿದ್ದಾರೆ ವಿರೂಪಾಕ್ಷಗೌಡ ಮತ್ತು ಪಾರ್ವತಮ್ಮ ಕೆಲವು ಪತ್ರಗಳನ್ನೂ ಸಹ ಕೊಟ್ಟಿದ್ದಾರೆ ಆದರೆ ಎ.ಎಸ್.ಪಿ.ಯವರು ಕೆಲವು ಪತ್ರಿಕೆಗಳಲ್ಲಿ ಬಂದಿರುವಂತೆ ಏನು ಹೇಳಿದ್ದಾರೆಂದರೆ, ಅವರಿಗೆ ರಾಜಕೀಯ ಪ್ರಭಾವವಿದೆ. ಅವರು ಪ್ರತಿಷ್ಠರಿದ್ದಾರೆ. ನೀವು ಅವರ ತಂಟೆಗೆ ಹೋಗಬೇಡಿ ಎಂದು ದೂರು ಕೊಡಲಿಕ್ಕೆ ಹೋದವರಿಗೆ ಎಚ್ಚರಿಕೆ ಕೊಟ್ಟು ಕಳುಹಿಸಿದ್ದಾರೆ. ಕೊಟ್ಟಂತಹ ದೂರನ್ನು ರಿಜಿಸ್ಟರ್ ಮಾಡಿಕೊಂಡಿಲ್ಲ. ಯಾರಾದರೂ ದೂರು ಕೊಟ್ಟಾಗ ರಿಜಿಸ್ಟರ್ ಮಾಡಿಕೊಳ್ಳಬೇಕು. ದೂರನ್ನು ಕೊಟ್ಟಾಗ ಎ.ಎಸ್.ಪಿ.ಯವರು ರಿಜಿಸ್ಟರ್

ಮಾಡವೆ ಇರತಕ್ಕದ್ದು ಪೋಲೀಸ್ ಆಕ್ಟ್ ಪ್ರಕಾರ ಅದೊಂದು ದೊಡ್ಡ ಲೋಪ. ಅವರು ಕೊಟ್ಟಂತಹ ದೂರಿನ ಬಗ್ಗೆ ಯಾವುದೇ ವಿಚಾರಣೆಯನ್ನು ಮಾಡಲಿಲ್ಲ. ಅವರನ್ನು ಯಾವ ಶಿಕ್ಷೆಗೂ ಎ.ಎಸ್.ಪಿ. ಯವರು ಗುರಿ ಮಾಡಿದ್ದು ಇಲ್ಲ. ಎ.ಎಸ್.ಪಿ.ಯವರಿಗೆ ದೂರು ಕೊಟ್ಟರೂ ಕೂಡ ಕೆಲಸ ಆಗತಕ್ಕಂತಹ ವಾತಾವರಣ ಆ ಊರಿನಲ್ಲಿಲ್ಲ. 10ನೇ ತಾರೀಖು ರಾತ್ರಿ ಟ್ರ್ಯಾಕ್ಟರಿನಲ್ಲಿ ಗೂಂಡಾಗಳನ್ನು ಕರೆದುಕೊಂಡು ಬಂದರು. ಗೂಂಡಾಗಳು ಆ ಊರಿನಲ್ಲಿ ತಿರುಗಾಡುವಾಗ ಇಡೀ ಗ್ರಾಮಸ್ಥರು ಬಾಗಿಲು ಮುಚ್ಚಿಕೊಂಡು ಮನೆಯೊಳಗೆ ಸೇರಿಕೊಂಡರು. ಅಂತಹ ಭಯಾನಕ ವಾತಾವರಣ 10ನೇ ತಾರೀಖು ನಡೆಯಿತು. ಬೆಳಿಗ್ಗೆ ವಿರೂಪಾಕ್ಷಗೌಡ, ಅವರ ಮಗ ಮತ್ತು ಪಾರ್ವತಮ್ಮ ಅವರು ಕೊಪ್ಪಳದ ಪೋಲೀಸ್ ಸ್ಟೇಷನ್ನಿಗೆ ದೂರು ಕೊಟ್ಟು ಕಳುಹಿಸಿದ್ದಾರೆ. ದೂರು ಕೊಟ್ಟರೂ ಕೂಡ ಪೋಲೀಸರು ಕ್ರಮ ತೆಗೆದುಕೊಂಡಿಲ್ಲ. 10ನೇ

6–30 p.m.

ತಾರೀಖು ನಡೆದಂಥ ಒಂದು ನಾಟಕೀಯ ಮತ್ತು ಭಯಾನಕ ವಾತಾವರಣವನ್ನು ಕಲ್ಪನೆ ಮಾಡಿಕೊಂಡು ಮಾರುದಿನ ಏನು ನಡೆಯುತ್ತದೆ ಎಂಬ ಮುನ್ಸೂಚನೆ ಇದ್ದರೂ ಕೂಡ ಪೋಲೀಸ್ ಅಧಿಕಾರಿಗಳು ಅದಕ್ಕೆ ಗಮನ ಕೊಡಲಿಲ್ಲ. ಶ್ರೀಮತಿ ಪಾರ್ವತಮ್ಮ ಮತ್ತು ಅವರ ಮಗ ಬೆಳಗ್ಗೆ ಬರೀ ಕೈಯಲ್ಲಿ ಆ ಗ್ರಾಮಕ್ಕೆ ಬರತಕ್ಕ ಪರಿಸ್ಥಿತಿ ಬಂತು. ಇಷ್ಟು ನಿರ್ಬಲತೆ, ಇಷ್ಟು ಅಸಹಾಯಕತೆ ಬರೀ ಗ್ರಾಮದ ಜನರಲ್ಲಿ ಮಾತ್ರ ಇರಲಿಲ್ಲ, ಬೇರೆ ಬೇರೆ ಹಂತಗಳಲ್ಲಿರತಕ್ಕ ಪೋಲೀಸ್ ಅಧಿಕಾರಿಗಳಲ್ಲೂ ಕೂಡ ಅಸಹಾಯಕತೆ ವ್ಯಕ್ತಪಟ್ಟಿದೆ. ಗದ್ದೆಯಲ್ಲಿ ಪಾರ್ವತಮ್ಮ ಬರುವಾಗ ಅನೇಕ ಘಟನೆಗಳು ನಡೆದುಹೋಗಿತ್ತು. ಅವಳ ಗಂಡನನ್ನು ಹೊಡೆದರು. ಮಗನನ್ನು ಹೊಡೆದರು. ಅಷ್ಟು ಹೊತ್ತಿಗೆ ಶ್ರೀಮತಿ ಹಸೀನಾಬಿ ಅವರನ್ನು ಅಮಾನುಷ ರೀತಿಯಲ್ಲಿ ಹಿಂಸೆಗೆ ಗುರಿಪಡಿಸಿದ್ದಾರೆ. ಅದರ ಬಗ್ಗೆ ಈಗಾಗಲೇ ಮಾತನಾಡಿದಂಥ ಸದಸ್ಯರು ವರ್ಣನೆ ಮಾಡಿರುವುದರಿಂದ ನಾನು ವರ್ಣನೆ ಮಾಡುವುದಕ್ಕೆ ಹೋಗುವುದಿಲ್ಲ. ಮೂರ್ಛೆ ತಪ್ಪಿ ಭೂಮಿಗೆ ಬೀಳುವವರೆಗೆ ಹೊಡೆದು ಅನಾಗರೀಕ ರೀತಿಯಲ್ಲಿ ವರ್ತನೆ ಮಾಡಿದ್ದಾರೆ, ಈ ಕೃತ್ಯ ನಡೆದರೂ ಕೂಡ ಪೋಲೀಸರು ಬರಲಿಲ್ಲ. ಕೊಪ್ಪಳದಿಂದ ಯಾವ ಪೋಲೀಸರೂ ಬರಲಿಲ್ಲ, ಮತ್ತು ಯಾರೂ ಕೂಡ ಆಕೆಯ ರಕ್ಷಣೆಗೆ ಹೋಗಲಿಲ್ಲ, ಅವರ ದೌರ್ಜನ್ಯದ ಮೆರವಣಿಗೆ ಮುಂದೆ ಹೋಯಿತು. ಊರಿನಲ್ಲಿ ಏನು ನಡೆಯುತ್ತಿದೆ. ಎಂಬ ಯಾವ ವರ್ತಮಾನವನ್ನೂ ತಿಳಿಯದೆ ಅಸಹಾಯಕ ಮಹಿಳೆ ಶ್ರೀಮತಿ ಪಾರ್ವತಮ್ಮ ಗದ್ದೆಯಲ್ಲಿ ಬರುವಾಗ ಅವರ ಮೇಲೆ ಬಿದ್ದು ರಾಕ್ಷಸೀಕೃತ್ಯವನ್ನು ಎಸಗಿ ಪೆರೇಡ್ ಮಾಡಿದ್ದಾರೆ. ಇದು 11ನೇ ತಾರೀಖು ನಡೆಯಿತು. ನಂತರ ಯಾವುದೇ ರೀತಿಯ ಕಂಪ್ಲೇಂಟ್ ಕೊಡದೇ ಇರತಕ್ಕ, ವಿಚಾರಣೆ ಕೂಡ ಬರದಂಥ ಪರಿಸ್ಥಿತಿ ಬಂತು. ಇಷ್ಟು ಮಾತ್ರವಲ್ಲ, ಒಬ ಡ್ರಾಮಾ ಕಂಪೆನಿಯ ಮಾಲೀಕರು ಒಂದು ಬೆದರಿಸಿದ್ದಾರೆ. ಮಾಲೀಕರನ್ನು ಚಾರ್ಜ್‌ಷೀಟಿನಲ್ಲಿ ಸೇರಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. 16ನೇ ತಾರೀಖಿನವರೆಗೆ ಮಾನ್ಯ ವೆಂಕಟರಾಮಯ್ಯನವರು ಹೇಳಿದ ಪ್ರಕಾರ ಯಾವ ಸುದ್ದಿಯೂ ಮೇಲೆ ಹೋಗದಂತೆ ಮುಚ್ಚಿಡುವ ಪ್ರಯತ್ನ ನಡೆಯಿತು. ಅಲ್ಲಿನ ವಿದ್ಯಾರ್ಥಿ ಸಂಘಗಳು ದೊಡ್ಡ ಜಾಥಾವನ್ನು ಗ್ರಾಮದಲ್ಲಿ ನಡೆಸಿ 200 ಗಂಡಸರು ಮತ್ತು 50 ಮಹಿಳೆಯರು ಪ್ರತಿಭಟನೆ ಮಾಡಿದಾಗ, ಮೆರವಣಿಗೆ ಕೊಂಡುಹೋಗುವಾಗ ನೀರು ಕೂಡ ಕೊಡದಂಥ ಪ್ರಯತ್ನ ಕೂಡ ನಡೆದಂಥ ವರ್ತಮಾನ ಪತ್ರಿಕೆಗಳಲ್ಲಿ ಬಂದಿದೆ 23–24ನೇ ತಾರೀಖು ರಾಯಚೂರು ಜಿಲ್ಲಾ ಕೇಂದ್ರದಲ್ಲಿ ಡೆಪ್ಯುಟಿ ಕಮೀಷನರ್ ಎದುರಿಗೇ ಈ ಘಟನೆ ನಡೆದರೂ ಕೂಡ ಡೆಪ್ಯುಟಿ ಕಮೀಷನರ್ ಅವರು ಈ ಬಗ್ಗೆ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ ಯಾವ ರೀತಿಯ ತನಿಖೆ ನಡೆಯಲಿಲ್ಲ, ಯಾರೂ ಅರೆಸ್ಟ್ ಕೂಡ ಆಗಲಿಲ್ಲ ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡತಕ್ಕ ಕೆಲಸ ಕೂಡ ನಡೆಯಲಿಲ್ಲ. ಇದರ ಹಿನ್ನೆಲೆ ಏನು ಎಂಬುದನ್ನು ಆಲೋಚನೆ ಮಾಡಿ ಎರಡನೆಯದಾಗಿ ಅವರು 2ನೇ ತಾರೀಖು ಬೆಂಗಳೂರಿಗೆ ಬಂದರೂ ಮುಖ್ಯಮಂತ್ರಿಗಳನ್ನು ನೋಡುವುದಕ್ಕೆ ಸರಿಯಾದ ಅವಕಾಶ ಕೂಡ ಸಿಗದೇಹೋಯಿತು. ಟೌನ್‌ಹಾಲಿನಲ್ಲಿ ಮುಖ್ಯಮಂತ್ರಿಗಳು ಒಂದು ಸಭೆಗೆ ಹಾಜರಾಗಿ ಹೊರಗೆ ಬರತಕ್ಕ ಸಂದರ್ಭದಲ್ಲಿ ಅವರಿಗೆ ಅರ್ಜಿಯನ್ನು ಕೊಡತಕ್ಕ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಬಂತು.

ಶ್ರೀ ಎಂ. ವೀರಪ್ಪ ಮೊಯಿಲಿ.—ದಯಮಾಡಿ ಕೇಳಿ. ಇದು ತಮಾಷೆ ಮಾಡತಕ್ಕ ವಿಚಾರವಲ್ಲ. ಮುಖ್ಯಮಂತ್ರಿಗಳನ್ನೇ ಬೇಕಾದರೆ ಕೇಳಿ ಎಲ್ಲಿ ಅರ್ಜಿ ಸ್ವೀಕಾರ ಮಾಡಿದರು ಎಂದು. ವಾಸ್ತವಿಕವಾದ ಘಟನೆಗಳನ್ನು ನಾನು ತಮ್ಮ ಮುಂದಿಡುತ್ತಿದ್ದೇನೆ. ನಾನು ಹೇಳುವುದರಲ್ಲಿ ಒಂದು ಚೂರು ತಪ್ಪಾದರೂ ಶಿಕ್ಷೆಗೆ ಬದ್ಧನಾಗಿರುತ್ತೇನೆ. ಎರಡನೇ ತಾರೀಖು ಅವರು ಅರ್ಜಿ ಕೊಟ್ಟಾಗ ವಿಚಾರಣೆ ನಡೆಯಲಿಲ್ಲ. ಗೃಹಸಚಿವರನ್ನು ನೋಡಿ ಎಂದು ಕಳುಹಿಸಿದರು, 3ನೇ ತಾರೀಖು ಅವರು ಗೃಹಸಚಿವರನ್ನು ಭೇಟಿಯಾದರು. ಒಂದು ಮೆಚ್ಚುಗೆಯ ಮಾತನ್ನು ನಾನು ಹೇಳಬೇಕಾಗಿದೆ. ಏಕೆಂದರೆ ಮೂರನೇ ತಾರೀಖು ಗೃಹ ಸಚಿವರನ್ನು ನೋಡಿದ ತಕ್ಷಣ ಗೃಹ ಸಚಿವರು 17 ಜನರನ್ನು ಅರೆಸ್ಟ್ ಮಾಡಲಿಕ್ಕೆ ಆದೇಶ

ಕೊಟ್ಟರು. ಸಿ.ಒ.ಡಿ. ವಿಚಾರಣೆ ಮಾಡುವುದಕ್ಕೆ ಆಪ್ಪಣೆ ಕೊಟ್ಟರು. ಇದರಲ್ಲಿ ಉಲ್ಲೇಖವಾಗತಕ್ಕ ವಿಚಾರಗಳು ಇಷ್ಟು ಅಧ್ಯಕ್ಷರೆ. ಆ ಅಬಲೆಯ ಮೇಲೆ ಹಲ್ಲೆ ಮತ್ತು ಮಾನಭಂಗ ಮಾಡತಕ್ಕ ಪ್ರಯತ್ನ ನಡೆದಾಗ ಅಧಿಕಾರಿಗಳು ಕಣ್ಣು ಮುಚ್ಚಿಕೊಂಡು ಕುಳಿತುಕೊಂಡು ಯಾವುದೇ ರೀತಿಯ ಕಾರ್ಯಕ್ರಮ್ಮಗಳನ್ನೂ ತೆಗೆದುಕೊಳ್ಳದೆ ಅಸಹಾಯಕತೆಯನ್ನು ವ್ಯಕ್ತಪಡಿಸಿದ ವಿಚಾರ ತಮ್ಮ ಗಮನಕ್ಕೆ ಬಂದಾಗ ತಾವು ಏತಕ್ಕೆ ಸುಮ್ಮನಿದ್ದಿರಿ ? ಯಾವ ಪ್ರಭಾವದ ಸೆಳೆತ ತಮ್ಮನ್ನು ತಡೆದು ನಿಲ್ಲಿಸಿತು ? ಪೋಲೀಸ್ ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಇದು ಸಣ್ಣ ಆಪಾದನೆಯಲ್ಲ ; ಬಹಳ ಗಂಭೀರವಾದ ಆಪಾದನೆ. 11ನೇ ತಾರೀಖಿಗೆ ಒಂದು ಘಟನೆ ನಡೆದರೂ ಮುಂದಿನ ತಿಂಗಳು ಮೂರನೇ ತಾರೀಖಿನವರೆಗೆ ಯಾವುದೇ ಕಾನೂನಿನ ಚಕ್ರ ತಿರುಗಲಿಕ್ಕೆ ಪ್ರಾರಂಭವಾಗಲಿಲ್ಲ. ಅಷ್ಟು ನಿಧಾನ ಏತಕ್ಕೆ ? ಪಟ್ಟಭದ್ರ ಹಿತಾಸಕ್ತಿಗಳು ಈ ಸಮಾಜದಲ್ಲಿ ಉಂಟು ಮಾಡಿದಂಥ ಕೊಚ್ಚೆಯಲ್ಲಿ ನಿಮ್ಮ ಆಡಳಿತ ಯಂತ್ರ ಕುಸಿದು ಬಿದ್ದಿದೆ. ಈ ಆಪಾದನೆಯಿಂದ ತಾವು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ತಮ್ಮ ಪೋಲೀಸ್ ಅಧಿಕಾರಿಗಳಾಗಲೀ, ಆಡಳಿತ ಯಂತ್ರವಾಗಲೀ ಪಟ್ಟಭದ್ರ ಹಿತಾಸಕ್ತಿಗಳು ನಡೆದುಹೋಗಿರ ಕೊಚ್ಚೆಯಲ್ಲಿ ಕುಸಿದು ಬಿದ್ದಿದ್ದು ಅದನ್ನು ಇವತ್ತಿನವರೆಗೆ ಎತ್ತಿ ಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲ. ನೀವು ಮಾಡತಕ್ಕ ತನಿಖೆಯಿಂದ ಆ ಭಾವನೆ ಹುಟ್ಟುತ್ತಿದೆ. ಅಷ್ಟು ಅಮಾನುಷವಾದ ರಾಕ್ಷಸೀ ಪ್ರವೃತ್ತಿ ಆ ಗ್ರಾಮದಲ್ಲಿ ನಡೆದರೂ ಸರಿಯಾದ ವಿಚಾರಣೆ ಮಾಡುವುದಕ್ಕೆ ಸರ್ಕಾರಕ್ಕೆ 20 ದಿವಸ ಬೇಕಾಯಿತು. ಸಂಬಂಧಪಟ್ಟ ಅಪರಾಧಿಗಳನ್ನು ಶಿಕ್ಷೆ ಮಾಡಲಿಕ್ಕೆ ಇವತ್ತಿಗೂ ಸರಿಯಾದ ಕ್ರಮ ಕೈಗೊಂಡಿಲ್ಲ. 23-24ನೇ ತಾರೀಖಿನಂದು ಅನೇಕ ವಿದ್ಯಾರ್ಥಿಗಳು ರಾಯಚೂರು ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನೆ ಮಾಡಿದರೂ ಕೂಡ ಯಾವುದೇ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳದೇ ಇರತಕ್ಕ ಜಿಲ್ಲಾಧಿಕಾರಿಗಳಾಗಲೀ, ಪೋಲೀಸ್ ಸೂಪರಿಂಟೆಂಡೆಂಟರಾಗಲೀ ಆ ಸ್ಥಾನದಲ್ಲಿ ಇರುವುದಕ್ಕೆ ಅರ್ಹರಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರನ್ನು ತಕ್ಷಣ ಸಸ್ಪೆಂಡ್ ಮಾಡಬೇಕಾಗಿದೆ. ಮೇಲಿನಿಂದ ಕೆಲಸ ಪ್ರಾರಂಭವಾಗಬೇಕು. ಅಂಥ ತಿಳಿಯಾದ ವಾತಾವರಣ ನಿರ್ಮಾಣವಾಗಬೇಕು. ಅಬಲೆಯರು, ದಲಿತರು ಈ ರಾಜ್ಯದಲ್ಲಿ ನಿರ್ವಂಚನೆಯಿಂದ, ನಿಶ್ಚಿಂತೆಯಿಂದ ಇರತಕ್ಕ ಒಂದು ವಾತಾವರಣವನ್ನು ತಾವು ನಿರ್ಮಾಣ ಮಾಡಬೇಕಾದರೆ ಸಸ್ಪೆನ್ಷನ್ ಜಿಲ್ಲಾಧಿಕಾರಿಗಳಿಂದ ಪ್ರಾರಂಭವಾಗಬೇಕು. ಎಸ್.ಪಿ. ಅವರಿಂದ ಪ್ರಾರಂಭವಾಗಬೇಕು. ನಂತರ ಕೆಳಗಿನ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು. ಆಗ ಮಾತ್ರ ಗೃಹಸಚಿವರ ಪ್ರಾಮಾಣಿಕತೆಯನ್ನು ಅಂತಃಕರಣಪೂರ್ವಕವಾಗಿ ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಈ ಮಾತುಗಳನ್ನು ನಾನು ಚಟಕ್ಕಾಗಿ ಆಡುತ್ತಿಲ್ಲ. ತಾವು ಸದನದಲ್ಲಿ ಮಾತನಾಡತಕ್ಕ ಸದಸ್ಯರ ಸಾರ್ವತ್ರಿಕ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕಾಗಿದೆ. ತಲೆ ಬಾಗಬೇಕಾಗಿದೆ. ರಾಕ್ಷಸೀಕೃತ್ಯ, ಅಮಾನುಷ ಕೃತ್ಯ ನಡೆದಾಗ ಆ ವಾತಾವರಣವನ್ನು ತಿಳಿಮಾಡತಕ್ಕ ಪ್ರಾಮಾಣಿಕ ಕೆಲಸ ಸರ್ಕಾರದಿಂದ ಆಗಲಿಲ್ಲವೆಂದು ನೇರವಾಗಿ ಆಪಾದನೆಯನ್ನು ನಾವು ಮಾಡಬೇಕಾಗಿದೆ. ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಈ ವಿಚಾರಗಳು ಬಂದಿದೆ. ಹೀಗಿರುವಾಗ ಸಣ್ಣ ಪೋಲೀಸ್ ಅಧಿಕಾರಿ ಹೇಳಿದಂಥ ಆತ ಬರೆದುಕೊಂಡ ಸುಳ್ಳು ಹೇಳಿಕೆಯ ಆಧಾರದ ಮೇಲೆ ಇಡೀ ಕೇಸನ್ನು ಹಾಳು ಮಾಡತಕ್ಕ ಅಥವಾ ಸ್ಥಗಿತಗೊಳಿಸತಕ್ಕ ಪ್ರಯತ್ನ ಮಾಡುವುದಾದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ. ದೊಡ್ಡ ಪಾಪದ ಸಮಾಜವನ್ನು ನಿರ್ಮಾಣ ಮಾಡಲು ಧರ್ಮದ ಹೆಸರಿನಲ್ಲಿ ಹೊರಟ ಕುದುರೆಮೋತಿ ಸ್ವಾಮಿ ಎನಿಸಿದ್ದಾನೆ ಅವನು ನಿರ್ಮಾಣ ಮಾಡಿದ ವಾತಾವರಣವನ್ನು ಸರಿಪಡಿಸಿ ಉತ್ತಮ ವಾತಾವರಣ ನಿರ್ಮಾಣವಾಗಬೇಕಾಗಿದೆ. ಇದುವರೆಗೆ ತಾವು ತೆಗೆದುಕೊಂಡ ಕ್ರಮದಿಂದ ಯಾವ ಸದಸ್ಯರಿಗೂ ತೃಪ್ತಿಯಾಗಲಿಲ್ಲ. ಗೂಂಡಾ ಆಕ್ಟ್ ಪ್ರಕಾರ ಅರೆಸ್ಟ್ ಮಾಡಿ ಎಂದು ನಾನು ಹೇಳಲಿಲ್ಲ. ವಿಧಾನಸೌಧದಲ್ಲಿ ಮಾಡಿದ ನಿರ್ಣಯದಿಂದ ಅರೆಸ್ಟ್ ಮಾಡಿದರು ಎಂಬ ಭಾವನೆ ಬರಬಹುದು. ಆದರೆ ಇದುವರೆಗೆ ತಾವು ತೆಗೆದುಕೊಂಡಂತಹ ಕಾರ್ಯಕ್ರಮದಿಂದ ಯಾವ ನ್ಯಾಯ ಕೂಡ ಆ ಒಂದು ಮಹಿಳಾ ವರ್ಗಕ್ಕೆ ದೊರೆಯಲಿಲ್ಲ. ಆದ್ದರಿಂದ ಈ ಬಗ್ಗೆ ತಾವು ಕಠಿಣವಾದ ಕ್ರಮ ತಗೆದುಕೊಳ್ಳಬೇಕಾಗಿದೆ. ಜಿಲ್ಲಾಧಿಕಾರಿಗಳಿಂದ ಹಿಡಿದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ವರೆಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ರೀತಿ ಬಿಟ್ಟರೆ ಯಾವುದೇ ರೀತಿಯಾಗಿ ಸಮಾಜದ ಮೇಲಿನ ಪ್ರೇಮದಿಂದ ಯಾವ ಅಧಿಕಾರಿ ಕೂಡ ಕೆಲಸ ಮಾಡುವುದಕ್ಕೆ ಮುಂದೆ ಹೋಗುವುದಿಲ್ಲ. ಜವಾಬ್ದಾರಿಯಿಂದ ನುಸುಳಿಕೊಳ್ಳತಕ್ಕ ಅವಕಾಶವನ್ನು ಉಂಟುಮಾಡಬಾರದು.

ಯಾವ ಪ್ರಭಾವದಿಂದ ಅಧಿಕಾರಿಗಳು ಈ ರೀತಿಯಾಗಿ ಈ ಒಂದು ದೊಡ್ಡ ಅಪರಾಧವನ್ನು ಅಡಗಿಸತಕ್ಕ ಅತಿ ದೊಡ್ಡ ಪಾಪದ ಕೆಲಸ ಮಾಡಿದ್ದಾರೆಂಬುದನ್ನು ಹೇಳಬೇಕಾದ ಅವಶ್ಯಕತೆ ಇದೆ. ಈ ಬಗ್ಗೆ ಮಾಡುಾಲಿಯಾಗಿ ಉತ್ತರ ಕೊಟ್ಟರೆ ಮಹಿಳಾ ವರ್ಗಕ್ಕೆ ದೊಡ್ಡ ಅನ್ಯಾಯ, ಅಕ್ಷಮ್ಯ ಅಪರಾಧವನ್ನು ಮಾವತಕ್ಕ ಹೊರೆಯನ್ನು ಹೊತ್ತುಕೊಂಡು ಹೋಗಬಾರದೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಗಂಭೀರವಾಗಿ, ಕ್ಷಿಪ್ರವಾಗಿ ಮತ್ತು ಕಠಿಣವಾದ ಕಾರ್ಯಕ್ರಮವನ್ನು ತಾವು ತೆಗೆದುಕೊಂಡರೆ ಮಾತ್ರ

ತಮ್ಮ ಪ್ರಾಮಾಣಿಕತೆಯನ್ನು ಒಪ್ಪುತ್ತೇವೆ. ಅಪ್ರಾಮಾಣಿಕವಾದ ಸರ್ಕಾರವನ್ನು ನಡೆಸಿಕೊಂಡು ಇವತ್ತು ಸಮಾಜದಲ್ಲಿ ಮತ್ತಷ್ಟು ಪಾಪದ ಹೊರೆಯನ್ನು ಬೆಳಸತಕ್ಕ ಕೆಲಸಕ್ಕೆ ದಯಮಾಡಿ ಪಾಲುದಾರರಾಗಬೇಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಈಗ ಮಂತ್ರಿಗಳು ಉತ್ತರ ಹೇಳಲಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಕಡೆಯ ಸದಸ್ಯರಷ್ಟೇ ಈ ಕಡೆಯ ಸದಸ್ಯರು ಕೂಡ ಗಂಭೀರವಾಗಿ ಆಲೋಚನೆ ಮಾಡುತ್ತಾರೆ. ಆದ್ದರಿಂದ ಈ ಕಡೆಯಿಂದಲೂ ಒಬ್ಬಿಬ್ಬರು ಮಾತನಾಡಲಿ.

ಅಧ್ಯಕ್ಷರು.—ವಿಶೇಷವಾಗಿ ಒಬ್ಬರಿಗೆ ಮಾತ್ರ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ.—ಮಾನ್ಯ ಅಧ್ಯಕ್ಷರೆ, ಈಗಾಗಲೆ ಅನೇಕ ಹಿರಿಯ ಮಾನ್ಯ ಸದಸ್ಯರು ಸದಸ್ಯಿಣಿಯರು ಮಾತನಾಡಿದ್ದಾರೆ. ಆ ಘಟನೆಯಿಂದ ನನಗೂ ಮನಸ್ಸಿಗೆ ನೋವಾಗಿದೆ. ಈ ದುರ್ಘಟನೆ ನಡೆಯಬಾರದಾಗಿತ್ತು, ಇದರ ಬಗ್ಗೆ ಈಗಾಗಲೇ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಹಿರಿಯ ಸದಸ್ಯರಾದಂತಹ ವೆಂಕಟರಾಮಯ್ಯನವರು ಹೇಳಿದರು, ಆ ಕ್ಷೇತ್ರದ ಶಾಸಕರು ರಾಜಿ ಮಾಡುವುದಕ್ಕೆ ಹೋಗಿದ್ದರು ಎಂದು, ದಯಮಾಡಿ ಕ್ಷಮಿಸಬೇಕು. ನಾನು ಅಂಥ ವಿಷಯದಲ್ಲಿ ರಾಜಿ ಮಾಡಲಿಕ್ಕೆ ಹೋಗುವುದಿಲ್ಲ, ನಾನು ಅಂಥ ಕೀಳುಮಟ್ಟಕ್ಕೆ ಹೋಗತಕ್ಕಂಥ ವ್ಯಕ್ತಿ ಅಲ್ಲ.

ಅಧ್ಯಕ್ಷರು.—ಸದಸ್ಯರು ಯಾರೂ ಆ ರೀತಿ ಹೇಳಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ.—ಯಾವುದೋ ರಾಜಕೀಯ ದುರುದ್ದೇಶದಿಂದ ಹೇಳಿರಬಹುದು ಅಥವಾ ತಪ್ಪು ಕಲ್ಪನೆಯಿಂದ ಹೇಳಿರಬಹುದು.

ಅಧ್ಯಕ್ಷರು.—ಪತ್ರಿಕೆಗಳಲ್ಲಿ ಬಂದಿರಬಹುದು ಅಷ್ಟೇ ಹೊರತು ಇಲ್ಲಿ ನೇರವಾಗಿ ಯಾರೂ ಹೇಳಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ.—ಈ ದುರ್ಘಟನೆ ನಡೆದ ಮೇಲೆ ದಿನಾಂಕ 12ರಂದು ನಾನು ಆ ಗ್ರಾಮಕ್ಕೆ ರಾಜಿ ಮಾಡಲಿಕ್ಕೆ ಹೋಗಿರಲಿಲ್ಲ, ಅಲ್ಲಿ ಗಲಾಟೆಯಾಗುತ್ತಿದೆ, ಅನಾಹುತವಾಗುತ್ತಿದೆ, ಬಹಳಷ್ಟು ಜನರು ಸೇರಿದ್ದಾರೆ, ನೀವು ಹಿರಿಯ ಸದಸ್ಯರು ಬಾರದಿದ್ದರೆ ಬಹಳ ಕಷ್ಟವಾಗುತ್ತದೆಂದು ಹೇಳಿದಾಗ ಆ ಘಟನೆಯನ್ನು ತಪ್ಪಿಸುವುದಕ್ಕೆ ಹೋಗಿದ್ದೆವು ಅಷ್ಟೆ. ನಾವು ಆ ಸಂದರ್ಭದಲ್ಲಿ ಮದುವೆಯ ಸಮಾರಂಭದಲ್ಲಿದ್ದೆವು; ನಮ್ಮ ಜೊತೆಯಲ್ಲಿ ಕಾಂಗ್ರೆ ಡಿಫೀಟೆಡ್ ಕ್ಯಾಂಡಿಡೇಟ್ ಶ್ರೀ ಸುಭಾಷ್ ಪಾಟೀಲರು ಕಾಂಗ್ರೆ ಪಕ್ಷದ ಅಧ್ಯಕ್ಷರು ಹಾಗೂ ಎಲ್ಲಾ ಪಕ್ಷದ ಮುಖಂಡರು ಇದ್ದರು. ನಾವು ರಾಜಿ ಮಾಡಲಿಕ್ಕಾಗಲಿ, ಪ್ರಕರಣವನ್ನು ಮುಚ್ಚಿ ಹಾಕುವುದಕ್ಕಾಗಲಿ ಹೋಗಿರಲಿಲ್ಲ. ರಾಜಿ ಮಾಡುವ ಕೀಳುಮಟ್ಟಕ್ಕೆ ಹೋಗುವ ವ್ಯಕ್ತಿ ನಾನಲ್ಲವೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—ಮಾನ್ಯ ಅಧ್ಯಕ್ಷರೆ, ಈ ಒಂದು ಹೇಯವಾದ ಮತ್ತು ನಾಗರೀಕರಿಗೆ ಅಮಾನುಷವಾಗಿರತಕ್ಕಂಥ ಕೃತ್ಯ ಎಸಗಿದ ಮೇಲೆ ಅನೇಕ ಪತ್ರಿಕೆಗಳು ಮತ್ತು ಕೆಲವು ಪತ್ರಿಕಾಕರ್ತರು, ವಿದ್ಯಾರ್ಥಿಗಳು, ಹೆಣ್ಣುಮಕ್ಕಳು ಈ ವಿಷಯದಲ್ಲಿ ಇದು ಆಗಬಾರದಾಗಿತ್ತು ಎಂದು ಹೇಳಿದ್ದಾರೆ. ಇವರ ಜೊತೆಗೆ ಸಿರಿಗೆರೆ ಸ್ವಾಮಿಗಳು ಕೂಡ ಇಂಥ ಅನಾಗರಿಕ ಕೃತ್ಯ ನಡೆದಿದ್ದರೆ ಅದರ ಬಗ್ಗೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಲ್ಲದೆ ಸಮಾಜದಿಂದ ಅವರನ್ನು ಬಹಿಷ್ಕಾರ ಮಾಡಬೇಕು ಎನ್ನುವ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದಲ್ಲದೆ, ಇವತ್ತು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರಿಂದ ಹಿಡಿದು ಶ್ರೀ ರಾಯರೆಡ್ಡಿಯವರವರೆಗೆ ಸುಮಾರು 14 ಮಂದಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ಒಂದು ಘಟನೆಯ ವಿಷಯದಲ್ಲಿ ನನ್ನ ಇಲಾಖೆಯ ವತಿಯಿಂದ ಕೊಟ್ಟಂಥ ವರದಿಯನ್ನು ನಾನು ಮೇಲ್ಮನೆಯಲ್ಲಿ ಓದಿದೆ. ಅದು ಮಾನ್ಯ ಸದಸ್ಯರಿಗೆ ತೃಪ್ತಿಯಾಗದಂಥ ಕಾಲದಲ್ಲಿ ಹೇಳಿದೆ ಈ ವಿಷಯದಲ್ಲಿ ಕೆಲವರು ಸ್ಥಳಕ್ಕೆ ಹೋದರೆ ಬಹುಶಃ ಪೂರ್ಣ ಮಾಹಿತಿ ಸಿಗಬಹುದೆಂದು, ಆ ದೃಷ್ಟಿಯಿಂದ ಈ ಮನೆಯ ಮತ್ತು ಆ ಮನೆಯ ಸದಸ್ಯರನ್ನು ಒಳಗೊಂಡಂತಹ ಒಂದು ಸಮಿತಿ ಮಾಡಿ ಹಿರಿಯ ಸದಸ್ಯರನ್ನು ಕಳುಹಿಸಿಕೊಟ್ಟರೆ ವಾಸ್ತವಾಂಶವನ್ನು ಹೊರಗೆಡಹುವುದಕ್ಕೆ ಅನುಕೂಲವಾಗಬಹುದೆಂದು ವಿಚಾರ ಮಾಡಿದ್ದೇನೆ. ಅದರಿಂದ ನಾನು ನನ್ನ ಜವಾಬ್ದಾರಿಯನ್ನು ಸದಸ್ಯರ ಮೇಲೆ ಹಾಕಿ ತಪ್ಪಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಮಾಡಿಲ್ಲ. ಅನೇಕ ಸಂದರ್ಭಗಳಲ್ಲಿ, ಇಲಾಖೆಯಿಂದ ಬರತಕ್ಕ ವರದಿಗಳನ್ನು ನೋಡಿ

ಅದರಲ್ಲಿ ಅದು ಸರಿ, ಇದು ಸರಿ ಎಂದು ಹೇಳಬಹುದು. ಏಕೆಂದರೆ ಇವತ್ತು ನಾನು ಅಧಿಕಾರದಲ್ಲಿರಬಹುದು, ನಾಳೆ ಅವರು ಅಧಿಕಾರಕ್ಕೆ ಬರಬಹುದು. ಆಗ ಇಂಥ ಸಂದರ್ಭಗಳಲ್ಲಿ ಕೊಟ್ಟಂತಹ ವರದಿಗಳು ಇದ್ದರೆ ಅನುಕೂಲವಾಗುತ್ತದೆ. ಇವತ್ತು ಮಾತನಾಡಿದ ಮಾನ್ಯ ಸದಸ್ಯರು ಕೂಡ ನಮ್ಮ ಭಾರತ ದೇಶದಲ್ಲಿ ಹಿಂದಿನಿಂದ ಸ್ತ್ರೀಯರಿಗೆ ಕೊಟ್ಟಿರತಕ್ಕ ಗೌರವ ಸಾನಮಾನಗಳು ಜೇರೆಲ್ಲೂ ಕೊಡಲ್ಪಟ್ಟಿಲ್ಲವೆಂದರು ಹೇಳಿದರು. ಶ್ರೀರಾಮಚಂದ್ರನ ಕಾಲದಿಂದ ತಾಯಿ-ತಂಗಿಯೋಪಾದಿಯಲ್ಲಿ ಸ್ತ್ರೀಯರನ್ನು ಕಂಡುಕೊಂಡು ಬಂದಿದ್ದಾರೆ. ಅದಕ್ಕೋಸ್ಕರ ಬಹುಮಟ್ಟಿಗೆ ಅವರನ್ನು ಅಬಲೆಯರು ಎಂದು ಭಾವಿಸಿ ಅವರಿಗೆ ರಕ್ಷಣೆ ಕೊಟ್ಟುಕೊಂಡು ಬಂದಿದ್ದಾರೆ. ಆದರೆ ಇವತ್ತು ಅದು ಬದಲಾವಣೆಯಾಗುತ್ತಿದೆ. ಈ ಸಮಾಜದಲ್ಲಿ ಅವರು ಎಚ್ಚೆತ್ತಿದ್ದಾರೆಂಬುದನ್ನು ಅನೇಕ ಸಂದರ್ಭಗಳಲ್ಲಿ ತೋರಿಸಿದ್ದಾರೆ. ಆದರೂ ಪುರುಷರು ಹೆಚ್ಚಾಗಿರುವ ಸಮಾಜದಲ್ಲಿ, ಹೆಣ್ಣುಮಕ್ಕಳಿಗೆ ಕೊಡಬೇಕಾದ ಹಕ್ಕು ಬಾಧ್ಯತೆಗಳನ್ನು ಬಹಳವಾಗಿ ಕೊಟ್ಟರೆ ಏನಾಗುತ್ತದೋ ಏನೋ, ಅವರಿಂದ ಕಾರ್ಯವನ್ನು ನಡೆಸುವುದಕ್ಕೆ ಆಗುತ್ತದೋ ಅಲ್ಲವೋ ಎಂದು ಹಿಂದುಮುಂದು ನೋಡುತ್ತಿದ್ದಾರೆ. ಹಿಂದೆ ಪಾರ್ಲಿಮೆಂಟಿನಲ್ಲಿ ಹಿಂದೂ ಕೋಡ್ ಬಿಲ್ ತಂದಾಗ ಹೆಣ್ಣುಮಕ್ಕಳಿಗೆ ಕೊಡತಕ್ಕ ಆಸ್ತಿಯ ಬಗ್ಗೆ ಪಾರ್ಲಿಮೆಂಟ್ ಸದಸ್ಯರು ಒಪ್ಪಿದ್ದನ್ನು ನೋಡಿ ಡಾ। ಅಂಬೇಡ್ ಕರ್ ರವರು ರಾಜೀನಾಮೆ ಕೊಟ್ಟು ಬಂದರು. ಇವತ್ತು ಕೂಡ ನಮ್ಮ ಸಮಾಜ ಸತ್ಯವನ್ನು ಅರ್ಥಮಾಡಿಕೊಂಡಿಲ್ಲ. ಇವತ್ತು ಒಂದು ಕಡೆ ಸ್ತ್ರೀಯನ್ನು ನಮ್ಮ ಸಮಾಜ ನಾವೂ ನೀವೂ ಎಲ್ಲಾ ಗೌರವಯುತವಾಗಿ, ಪೂಜ್ಯ ಮನೋಭಾವದಿಂದ ಕಾಣುತ್ತಿದ್ದೇವೆ. ಸಮಾಜದಲ್ಲಿ ಒಬ್ಬಿಬ್ಬರು ಇಂತಹ ಕೃತ್ಯಗಳಲ್ಲಿ ತೊಡಗುವುದರಿಂದ ಇದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡಬೇಕಾಗಿದೆ. ಎಲ್ಲಾ ಮಠಾಧಿಪತಿಗಳು ಈ ರೀತಿ ಮಾಡುತ್ತಾರೆಂದು ಹೇಳುವುದಕ್ಕೆ ಆಗುವುದಿಲ್ಲ, ನನ್ನ ಅನುಭವದಲ್ಲಿ ಆ ರೀತಿ ಎಲ್ಲೂ ಆಗಿಲ್ಲ. ಯಾರು ಇಂತಹ ಸಮಸ್ಯೆಯನ್ನು ಉಂಟುಮಾಡಿದರು, ಏನು ಸಮಸ್ಯೆಯನ್ನು ಉಂಟುಮಾಡಿದ್ದಾರೆ ಅದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇಂತಹ ಕೃತ್ಯಗಳಲ್ಲಿ ತೊಡಗುವವರಿಗೆ ಸರಿಯಾದ ಶಿಕ್ಷೆಯಾಗಲೇಬೇಕು, ಇಂತಹ ಕೆಲಸಗಳನ್ನು ಮಾಡಿದರೆ ಏನು ಆಗುತ್ತದೆ ಎಂಬುದರ ಅರಿವು ಅವರಿಗೆ ಇರುವಂತಹ ರೀತಿಯಲ್ಲಿ ನಾವು ಮಾಡಬೇಕಾಗಿದೆ ಆ ದೃಷ್ಟಿಯಲ್ಲಿ ನಾನು ಮೇಲ್ಮನೆಯಲ್ಲಿ ಹೇಳಿದ್ದೇನೆ. ದೌಷ್ಟ್ಯಕ್ಕೆ ಒಳಗಾದ ಹೆಣ್ಣುಮಗಳ ಗಂಡ ಮತ್ತು ಮಗ ಕೆಲವು ಕಾರ್ಯಕರ್ತರು ಒಂದು ಕೂಲಂಕಷವಾಗಿ ಎಲ್ಲವನ್ನೂ ಹೇಳಿದ್ದಾರೆ. ಅವರು ತಿಳಿಸಿರುವ ರೀತಿಯಲ್ಲಿ ಬಹುಶಃ ನನಗನಿಸುತ್ತದೆ, ಗೂಂಡಾಗಳನ್ನು ಟ್ರಾಕ್ಟರಿನಲ್ಲಿ ಕರೆತಂದು ದೌರ್ಜನ್ಯ ನಡೆಸಿದ್ದಾರೆ. ಬೆತ್ತಲೆ ಮೆರವಣಿಗೆ ಮಾಡಿದರು ಎಂದು ಅವರು ನನ್ನ ಹತ್ತಿರ ಹೇಳಲಿಲ್ಲ. ಅವರು ನನ್ನ ಹತ್ತಿರ ಏನು ಹೇಳಿದರು ಅಂದರೆ ಸೀರೆ ಬಿಚ್ಚಿದರು ಲಂಗ ಹರಿದರು, ಸುತ್ತಮುತ್ತ ಎಳೆದಾಡಿದರು, ಹೊಡೆದರು- ತೋಟಕ್ಕೆ ಎಳೆದುಕೊಂಡು ಹೋದರು ಅಷ್ಟರಲ್ಲಿ ಒಂದು ಮನೆಯೊಳಗೆ ಹೋದುದರಿಂದ ನೀಲವ್ವ ಎಂಬ ದೊಡ್ಡ ಹೆಂಗಸು ಹೆಣ್ಣುಮಗಳಿಗೆ ಸೀರೆ ಕೊಟ್ಟರು ಎಂದು ಹೇಳಿದರು. ಅದು ಏನೇ ಆಗಲಿ ದೌರ್ಜನ್ಯ ನಡೆದಿದೆ. ಸೀರೆ ಬಿಚ್ಚಿದ್ದಾರೆ, ಹೆಣ್ಣುಮಗಳ ಮೇಲೆ ಅತ್ಯಾಚಾರ ಮಾಡಲಿಕ್ಕೆ ನಡೆಸಿದಂತಹ ಪ್ರಯತ್ನ ಏನಿದೆ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಅದಕ್ಕೋಸ್ಕರ 18 ಜನಗಳ ಮೇಲೆ ಚಾರ್ಜ್‌ಶೀಟ್ ಹಾಕಿದ್ದೇವೆ. ಮೂರು ಜನ ಬೇಲ್ ಮೇಲೆ ಬಿಡಿಸಿಕೊಂಡಿದ್ದಾರೆ. 11ನೇ ತಾರೀಖು ನಡೆದಂತಹ ಘಟನೆ ಏನಿದೆ, ಘಟನೆಗೆ ಸಂಬಂಧಪಟ್ಟವರ ಮೇಲೆ ಚಾರ್ಜ್‌ಶೀಟ್ ಹಾಕಿ ಅವರನ್ನು ಅರೆಸ್ಟ್ ಮಾಡಿದ್ದೇವೆ. ಶ್ರೀಮತಿ ಹುಸೇನಬಿ ಎಂಬುವರು ಊರಿನಲ್ಲಿ ಇರಲಿಲ್ಲ, ಅವರು ಮಂಗಳೂರಿಗೆ ಹೋಗಿದ್ದರು, ಅವರ ಮೇಲೆ ದೌರ್ಜನ್ಯ ನಡೆಸಿದವರ ಮೇಲೆ ಎಫ್‌ಐಆರ್ ಹಾಕಿದ್ದೇವೆ, 29ನೇ ತಾರೀಖು ಅವರ ಮೇಲೆ ದೌರ್ಜನ್ಯ ನಡೆಸಿದವರ ಮೇಲೆ ಚಾರ್ಜ್‌ಶೀಟ್ ಹಾಕಿದ್ದೇವೆ. ಎಲ್ಲವನ್ನು ಇನ್‌ವೆಸ್ಟಿಗೇಷನ್ ಮಾಡಲಿ. ಹುಸೇನಬಿ ಎಂಬುವರಿಗೆ ಅವರ ಮನೆಯಲ್ಲಿ ಹೊಡೆದಿದ್ದಾರೆ, ಸೀರೆ ಬಿಚ್ಚಿದ್ದಾರೆ, ಅಮಾನುಷವಾಗಿ ನಡೆದುಕೊಂಡಿದ್ದಾರೆ. ಇದುವರೆಗೆ ಏನು ವರ್ಣಿಸಲಾಗಿದೆ ಆ ರೀತಿ ನಡೆದಿಲ್ಲವೆಂದು ಅವರೇ ಹೇಳಿದ್ದಾರೆ. ಹುಸೇನಬಿ ಎಂಬುವರು ಸಿವಿಲ್ ಆಸ್ಪತ್ರೆಯಲ್ಲಿ ಮತ್ತು ಇನ್ನೊಂದು ಆಸ್ಪತ್ರೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ, ಅದು ರೆಕಾರ್ಡ್ ಆಗಿದೆ. ಅದರ ಮೇಲೆ ಹೆಚ್ಚು ಹೇಳಬೇಕಾಗಿಲ್ಲ. ಇಷ್ಟೊಂದು ಅಮಾನುಷವಾದ ಕೃತ್ಯಗಳು ನಡೆಯಲಿಕ್ಕೆ ಕಾರಣವೇನು ? ಅದರ ಬಗ್ಗೆ ವಿಚಾರಣೆ ಮಾಡಲು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ಎ.ಎಸ್.ಪಿ.ಯವರು ಘಟನೆ ನಡೆದ ಹಿಂದಿನ ದಿನ ಚಾರ್ಜ್ ಕೊಟ್ಟು ಹೋಗಿದ್ದಾರೆ. ಜಿಲ್ಲಾ ಪೋಲೀಸ್ ಅಧಿಕಾರಿ ಧಾರವಾಡಕ್ಕೆ ವರ್ಗವಾಗಿದ್ದಾರೆ, ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಬೆಂಗಳೂರಿಗೆ ವರ್ಗಾವಾಗಿದ್ದಾರೆ, ಚಾರ್ಜ್‌ತೆಗೆದುಕೊಂಡವರು ಎರಡೂವರೆ ದಿವಸ ರಜ ಹಾಕಿ ಬಂದಿದ್ದಾರೆ. ಇನ್ಸ್‌ಪೆಕ್ಟರ್ ಆ ಗ್ರಾಮಕ್ಕೆ ಹೋಗಿದ್ದಾರೆ. ಪೋಲೀಸ್ ಪೇದೆಗಳು ಮತ್ತು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಬೇವೂರು ಗ್ರಾಮದಲ್ಲಿ ಶ್ರೀಮತಿ ಪಾರ್ವತಮ್ಮನವ

ರಿಂದ ದೂರು ತೆಗೆದುಕೊಂಡು ಕೇಸನ್ನು ದಾಖಲು ಮಾಡಿಕೊಂಡಿದ್ದಾರೆ. ಶ್ರೀಮತಿ ಹುಸೇನಬಿ ಅವರು ಮಂಗಳೂರಿಗೆ ಹೋಗಿದ್ದರಿಂದ ಮಂಗಳೂರಿನಲ್ಲಿ ದೂರು ತೆಗೆದುಕೊಂಡು ಎಫ್.ಐ.ಆರ್ ಹಾಕಿದ್ದಾರೆ. ಶ್ರೀಮತಿ ಹುಸೇನಬಿಯವರು ದೂರು ಕೊಟ್ಟಿರಲಿಲ್ಲ. ಅದರ ಬಗ್ಗೆ ಕೂಡ ಇನ್‌ವೆಸ್ಟಿಗೇಷನ್ ಆಗುತ್ತಿದೆ. ಸೆಕ್ಷನ್ 107ರ ಪ್ರಕಾರ 24 ಜನಗಳನ್ನು ಅರೆಸ್ಟ್ ಮಾಡಿದ್ದರು, ಅದರಲ್ಲಿ ದೂರು ಜನ ಆಂಟಿಸಿಪೇಟ್ರಿ ಬೇಲ್ ತೆಗೆದುಕೊಂಡಿದ್ದಾರೆ. ಅದರಲ್ಲಿ ಪ್ರಥಮ ಅಪರಾಧಿ ಮಹಾಂತಸ್ವಾಮಿಯನ್ನು ಸೇರಿಸಿದ್ದೇವೆ. ಪೋಲೀಸ್‌ನವರು ದೂರು ಕೊಟ್ಟ ತಕ್ಷಣ ಕ್ರಮ ತೆಗೆದುಕೊಂಡಿದ್ದಾರೆ. ಹುಸೇನಬಿಯವರು ದೂರು ಕೊಡದಿದ್ದರೂ ಪೋಲೀಸ್‌ನವರೇ ದೂರು ತೆಗೆದುಕೊಂಡಿದ್ದಾರೆ. ಇದೆಲ್ಲಾ ಇನ್‌ವೆಸ್ಟಿಗೇಷನ್ ಆಗುತ್ತಿದೆ. ಇವರ ಬಗ್ಗೆ ಕ್ರಮ ತೆಗೆದುಕೊಳ್ಳಲು ಏತಕ್ಕೆ ತಡವಾಯಿತು ? ಯಾರದಾದರೂ ಒತ್ತಡ ಇತ್ತೆ ಎಂಬುದರ ಬಗ್ಗೆ ವಿಚಾರಮಾಡಲು ಸಿ.ಒ.ಡಿ.ಗೆ ರೆಫರ್ ಮಾಡಲು ಹೇಳಿದೇನೆ. ಅದರ ಪ್ರಕಾರ ಸಿ.ಒ.ಡಿ.ಗೆ. ರೆಫರ್ ಮಾಡಲಾಗಿದೆ. ಪೋಲೀಸ್ ಮಹಾ ನಿರ್ದೇಶಕರು ಸಿ.ಒ.ಡಿ.ಗೆ ಮೂರು ಪಾಯಿಂಟ್‌ಗಳನ್ನು ಹಾಕಿ ಲೆಟರ್ ಬರೆದಿದ್ದಾರೆ, ಅದು ಈ ರೀತಿ ಇದೆ ಅದನ್ನು ಓದುತ್ತೇನೆ.

"The Government have desired that investigation in connection with the incident that took place at Kudrmoti village in Raichur District should be taken over by COD. In this connection, two cases have been registeıed in Cr. No. 14/85 and Cr. No. 16/85 at Bevoor Police Station.

The case in Cr.No. 14/85 has been charge-sheeted. The other case in Cr. No. 16/85 is almost at the final stage.

The deputationist who met the Home Minister and the Chief Minister have represented that there has been delay on the part of the local Police in taking effective action.

I, therefore, request to depute the officer to find out—

(i) Whether there has been any delay on the part of the local police in dealing with the case ;

(ii) Whether the investigation has gone on right lines ; and

(iii) If the investigation is faulty, further inquiry should be made and action should be taken."

Cr. No. 14. —Smt. Parvathamma—Under Sections 143, 147, 148, 323, 324, 355, 341, 504, 506, 448 and 149.

Cr. No. 16—Smt. Huseinbi — Under Sections : 143, 147, 448, 323, 354, 506 and 149.

ಕೇಸ್ ನಂ. 18ರಲ್ಲಿ ಸೆಕ್ಷನ್ 107ರ ಪ್ರಕಾರ 36 ಜನರನ್ನು ಸೇರಿಸಿ ಹಾಕಿದ್ದೇವೆ. ಅದಕ್ಕೆ ಹೈಕೋರ್ಟ್‌ನಿಂದ ಸ್ಟೇ ಬಂದಿದೆ.

Cr. No.20—Section 147, 148, 324, 341, 342, 448, 504. 506 and 149. ವಿರೂಪಾಕ್ಷಗೌಡ ಅವರು ಕೊಟ್ಟಂತಹ ದೂರಿನ ಮೇಲೆ ಇನ್‌ವೆಸ್ಟಿಗೇಷನ್ ಆಗುತ್ತಿದೆ. ಗುನ್ನೆ ನಂ. 14 : 85 ಕಲಂ 143, 147 148, 323, 324, 354, 355, 341, 448, 504, 506, 448—ರೆಡ್ ವಿತ್ 149 ಐಪಿಸಿ ಪ್ರಕಾರ 14 ಜನರು. ತಾರೀಖು 11-6-85ರಂದು ಮುಂಜಾನೆ 8 ಗಂಟೆಗೆ ಕುದುರೆಮೊತಿ ಗ್ರಾಮದಲ್ಲಿ ಠಾಣೆಯಿಂದ 9 ಕಿ.ಮೀ. ದಕ್ಷಿಣಕ್ಕೆ ನಡೆಯಿತು ಎಂದು ಹೇಳಿದ್ದಾರೆ.

7-00 p.m.

ಶ್ರೀ ಬಿ. ಬಸವಲಿಂಗಪ್ಪ.—ಆಕೆ ಏನು ಕಂಪ್ಲೇಂಟ್ ಕೊಟ್ಟಿದ್ದಾಳೆ ಎಂಬುದನ್ನು ಓದಿ.

ಶ್ರೀ ಬಿ. ರಾಚಯ್ಯ.—ಅದನ್ನು ನಾನು ಓದುತ್ತೇನೆ.

"ನಮ್ಮ ಕುದ್ರಿಮೋತಿ ಗ್ರಾಮದಲ್ಲಿ ಸಂಸ್ಥಾನ ಮೈಸೂರು ಮಠ ಇದ್ದು ಅದಕ್ಕೆ ಈಗ ಮಹಾಂತ ಸ್ವಾಮಿಗಳು ಪೀಠಾಧಿಕಾರಿಗಳು ಆಗಿ ಸದರಿ ಮಠದ ಆಗುಹೋಗುಗಳನ್ನು ನಾವು ಈ ಗ್ರಾಮಕ್ಕೆ ಬಂದಾಗಿ

ನಿಂದ ಅವರೇ ನೋಡಿಕೊಳ್ಳುತ್ತಾರೆ. ನಾವು ಈ ಊರಿಗೆ ಬಂದಾಗಿನಿಂದ ಸದ್ರಿ ಮಠಕ್ಕೆ ಆಗಾಗ್ಗೆ ಹೋಗಿ ಈ ಮಠದಲ್ಲಿಯ ಗದ್ದುಗೆಗಳಿಗೆ ಪೂಜಾ ಮಾಡಿ ನಮಸ್ಕಾರ ಮಾಡಲು ಹೋಗುವ ಪದ್ಧತಿ ಇಟ್ಟುಕೊಂಡಿದ್ದೆ. ಆ ಪ್ರಕಾರ ನಾನು ದಿನಾಂಕ 7-4-85ರಂದು 11 ಎ ಎಂ, ಸುಮಾರಿಗೆ ಸದರಿ ಮಠಕ್ಕೆ ಗದ್ದುಗೆ ನಮಸ್ಕಾರ ಮಾಡಲು ಹೋಗಿದ್ದೆ. ಆ ವೇಳೆಯಲ್ಲಿ ಸದರಿ ಮಠದ ಪೀಠಸ್ಥರಾದ ಮಹಾಂತ ಸ್ವಾಮಿಗಳು ನಮಗೆ ಕರೆದು ನಿನ್ನ ಮೇಲೆ ನನಗೆ ಮನಸ್ಸಾಗಿದೆ. ನನ್ನ ಹತ್ತಿರ ಬಾ ಅಂತಾ ನನ್ನೊಡನೆ ಅನೈತಿಕ ಸಂಬಂಧ ಬೆಳೆಸುವ ಉದ್ದೇಶದಿಂದ ನನಗೆ ಅಂದು ಕೇಳಿದರು. ಅದಕ್ಕೆ ನಾನು ನೀವು ದೊಡ್ಡ ಸ್ಥಾನದಲ್ಲಿದ್ದವರು, ನೀವು ಪರಸ್ತ್ರೀಯರ ಮೇಲೆ ಈ ಭಾವನೆ ಮಾಡಬಾರದು ಅಂತಾ ಅಂದು ನೀವು ನನಗೆ ತಂದೆಯ ಸಮಾನ ಅಂತಾ ಹೇಳಿ ಅವರಿಗೆ ಸಿಟ್ಟುಮಾಡಿ ನಾನು ಮಠದಿಂದ ಬಂದೆ. ಈ ವಿಷಯವನ್ನು ನಾನು ನಮ್ಮ ಯಜಮಾನರಿಗೆ ಹೇಳಿದರೆ ಏನಾದರೂ ಅನಾಹುತ ಆಗಬಹುದೆಂದು ನಾನು ಹೇಳಲಿಲ್ಲ. ಮತ್ತು ದಿನಾಂಕ 10-4-85ರಂದು ಪೂಜೆಗೆ ಹೋಗುವಂತೆ ಮಠಕ್ಕೆ ಹೋದೆ. ಆಗ ಸದರಿ ಮಹಾಂತ ಸ್ವಾಮಿಗಳು ನಾನು ನಿನ್ನೆ ನಿನಗೆ ಕೇಳಿದ್ದು ತಪ್ಪಾಗಿದೆ, ಕ್ಷಮಿಸು, ನಿನ್ನ ಯಜಮಾನರಿಗೆ ಈ ಸುದ್ದಿ ತಿಳಿಸಬೇಡಿ ಅಂತಾ ಹೇಳಿದರು. ಆಮೇಲೆ ನನಗೆ ಸದರಿ ಮಹಾಂತ ಸ್ವಾಮಿಗಳ ನಡವಳಿಕೆಯ ಬಗ್ಗೆ ಭಯವಾಗಿ ನಾನು ಮಠಕ್ಕೆ ಹೋಗುವುದನ್ನು ಬಿಟ್ಟುಬಿಟ್ಟೆ.

ಆಮೇಲೆ 8-10 ದಿವಸಗಳ ನಂತರ ಮಂಗಳೂರು ಗ್ರಾಮದ ದೈವದವರ ಹೆಸರಿನಿಂದ ಒಂದು ಲಿಫಾಫಿನಲ್ಲಿ ಬಿಳಿಯ ಹಾಳಿಯ ಮೇಲೆ ಬರೆದ ಒಂದು ಪತ್ರ ಅದರಲ್ಲಿ ನನ್ನ ನಡವಳಿಕೆಗೆ ಕುಂದು ತರುವಂತಹ ವಿಷಯ ನಮೂದಿಸಿದ್ದು ಇತ್ತು. ಅ ಪತ್ರವು ನನ್ನ ಮಗ ಪ್ರಭುಲಿಂಗನ ಗೌಡನ ಕೈಯಲ್ಲಿ ಸಿಕ್ಕಿತು. ಅದನ್ನು ಅವನು ಓದಿ ಹೇಳಿದನು. ಇದನ್ನು ನಾನು ನನ್ನ ಯಜಮಾನರಿಗೆ ತೋರಿಸಿದೆ, ಹಾಗೆ ಮುಚ್ಚಿಟ್ಟೆ, ಮತ್ತು ಆಮೇಲೆ 3-4 ದಿವಸಗಳ ನಂತರ ನನ್ನ ನಡವಳಿಕೆಯ ಬಗ್ಗೆ ಕುಂದು ತರುವಂತೆ ಹಾಗೂ ನಮ್ಮ ಗ್ರಾಮದ ನಮ್ಮ ಮನೆಯ ಹತ್ತಿರವಿರುವ ಮುರ್ತುಜಾಸಾಬ್ ಇವನ ಹೆಂಡತಿಯ ನಡವಳಿಕೆಯ ಬಗ್ಗೆ ಬರೆದ ಒಂದು ಪತ್ರ ಮುರ್ತುಜಾಸಾಬ ಈತನ ಕೈಯಲ್ಲಿ ಒಂದು ಈತನು ಅದನ್ನು ತಂದು ನಮ್ಮ ಯಜಮಾನರಿಗೆ ತೋಸಿರಿದನು. ಅದನ್ನು ಓದಿ ನಮ್ಮ ಯಜಮಾನರು ಬರಿ ಈ ಪತ್ರವೆಲ್ಲ ನಿನ್ನ ವಿಷಯದ ಬಗ್ಗೆ ಬರೆದಿರುತ್ತದೆ ಏಕೆ ಅಂತಾ ಕೇಳಿ ನನಗೆ ಸಿಟ್ಟು ಮಾಡಿದರು. ಆಗ ನಾನು ಮೇಲೆ ಹೇಳಿದ ಎಲ್ಲಾ ವಿಷಯ ಹಾಗೂ ನಮಗೂ ಬಂದ ಪತ್ರದ ವಿಷಯ ಹೇಳಿ ಪತ್ರವನ್ನು ಸದಾ ತೋರಿಸಿದೆ. ಆಗ ಮತ್ತೆ ಅವರು ಯಾರು ಯಾರು ಇದ್ದರೆಂದು ಬರೆದಿದ್ದಾರೆ. ಎಫ್ಐಆರ್. ಮೇಲೆ ಕೇಸ್ ರಿಜಿಸ್ಟರ್ ಆಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲಿ ಏನು ನಡೆಯಿತು ಎಂಬುದನ್ನು ಪೂರ್ತಿ ಓದಿ.

ಶ್ರೀ ಬಿ. ರಾಚಯ್ಯ.—ಓದುತ್ತೇನೆ.

''ಹನುಮಂತಗೌಡರು, ಈಶಪ್ಪ ದೇಸಾಯಿ ಚಿಕ್ಕಮ್ಯಾಗೇರಿ ದೇಸಾಯಿ ಇವರನ್ನು ಸಹ ನಮ್ಮ ಮನೆಗೆ ಕರೆಯಿಸಿ ಅವರ ಮುಂದೆ ಈ ಎಲ್ಲಾ ವಿಷಯವನ್ನು ತಿಳಿಸಿದೆವು.

ಈಗ ಸದರಿಯವರು ಈ ವಿಚಾರ ಬಹಳ ಗಂಭೀರವಾದದ್ದು ಇದನ್ನು ಇಂದೇ ಬಗೆಹರಿಸಿ ರಾಜಿ ಮಾಡಲು ಆಗೋದಿಲ್ಲ, ಸೂಡಿ ಗ್ರಾಮದಿಂದ ಮಹಾಂತ ಸ್ವಾಮಿಗಳು ಸೂಡಿ ಗ್ರಾಮದ ಹಿರಿಯರ ಮುಂದೆ ಹೇಳಿ ಕಳಿಸಿದ್ದು, ಇದನ್ನು ಇಂದೇ ಬಗೆಹರಿಸಲು ಸಾಧ್ಯವಿಲ್ಲ ಅಂತಾ ತಮ್ಮ ತಮ್ಮ ಒಳಗೆ ಮಾತನಾಡಿ ನಮ್ಮ ಮನೆಯಿಂದ ವಾಪಸ್ ಮಠಕ್ಕೆ ಹೋದರು, ಮತ್ತು ನಮ್ಮ ಯಜಮಾನರಿಗೆ ಈ ಸಮಸ್ಯೆಯನ್ನು ತಾರೀಖು 17-6-85ರಂದು ಇಲ್ಲಿಗೆ ಬಂದು ಬಗೆಹರಿಸುವುದಾಗಿ ಈ ವಿಷಯವನ್ನು ಸೂಡಿ ಗ್ರಾಮದ ಹಿರಿಯರಿಗೆ ತಿಳಿಸುವುದಾಗಿ ಹೇಳಿ ಮಠದಿಂದ ಊರಿಗೆ ಹೋದರು.

ನಿನ್ನೆ ತಾ. 10-6-85ರಂದು 12 ಪಿಎಂ. ಸುಮಾರಿಗೆ ಸದರಿ ಸೂಡಿ ಗ್ರಾಮದ ಹಿರಿಯರಾದ (1) ಶೇಖರಯ್ಯ ವಸ್ತ್ರದ (2) ಅಂದಪ್ಪ ಸೊಬಗಿನವರು ಹಾಗೂ ಇನ್ನಿತರರು ಕುದುರಿಮೋತಿ ಮಠಕ್ಕೆ ಬಂದು ಆಮೇಲೆ ತಮ್ಮ ಸಂಗಡ ಇಟಗಿಯ ನನ್ನ ಅಣ್ಣಂದಿರಾದ ಅಂದಪ್ಪ ಕುಮಾರ, ಶಾಂತಪ್ಪಕುಮಾರ ಗೂಳಪ್ಪ ಕುಮಾರ ಇವರನ್ನು ಸಹ ಕರೆದುಕೊಂಡು ಬಂದಿದ್ದರು. ನಂತರ ಎಲ್ಲರೂ ನಮ್ಮ ಮನೆಗೆ ಬಂದು ಸದರಿ ವಿಷಯದ ಬಗ್ಗೆ ನನಗೂ ನಮ್ಮ ಯಜಮಾನರಿಗೂ ರಾಜಿ ಆಗಲು ತಿಳಿಸಲು ಬಂದಿರುವುದಾಗಿ ಹೇಳಿದರು. ಆಗ ನಾನು ನಮ್ಮ ಯಜಮಾನರು ಮನೆಯಲ್ಲಿ ಇಲ್ಲ ಶಾಲೆಗೆ ಹೋಗಿದ್ದಾರೆ ಅಂತಾ ಹೇಳಿದೆ. ನಮ್ಮ ಯಜಮಾನರು 1-30 ಪಿ.ಎಂ. ಸುಮಾರಿಗೆ ಶಾಲೆಯಿಂದ ಮನೆಗೆ ಬಂದರು. ನಮ್ಮ ಯಜಮಾನರು ಬಂದ ನಂತರ ನನಗೂ ಅವರಿಗೂ ಈ ವಿಷಯದ ಬಗ್ಗೆ ರಾಜಿ ಆಗಲು ಸದರಿ ಸೂಡಿ ಗ್ರಾಮದ ಶೇಖರಯ್ಯ ವಸ್ತ್ರದ ಮತ್ತು ಅಂದಪ್ಪ ಸೊರಗಿನವರು ಬಹಳ ಒತ್ತಾಯಪಡಿಸಿ ಇಂದು ದೊಡ್ಡ ಸ್ವಾಮಿಗಳ ಮರ್ಯಾದಿಯ ವಿಷಯ, ರಾಜಿ ಆಗಿರಿ ಅಂತಾ ಒತ್ತಾಯಪಡಿಸಲಿಕ್ಕೆ ಹತ್ತಿದರು. ಆಗ

ನಾನು ನಮ್ಮ ಯಜಮಾನರು ಈ ನ್ಯಾಯ ಬಗೆಹರಿಸಲು ಕುಡುಗುಂಟಿ ಹನುಮಂತ ಗೌಡರು ಚಿಕ್ಕಮ್ಯಾಗೆರಿಯ ಈಶಪ್ಪ ದೇಸಾಯಿಯವರು ನಿಮಗೂ ನಮಗೂ ತಾ. 17-6-85ರಂದು ರಾಜಿ ಮಾಡಿಸುವುದಾಗಿ ಹೇಳಿದ್ದಾರೆ. ಕಾರಣ ನಾವು ಆ ಇಬ್ಬರು ಹಿರಿಯರು ಇಲ್ಲದೆ ರಾಜಿ ಆಗುವುದಿಲ್ಲ ಅಂತಾ ತಿಳಿಸಿದೆವು. ನೀವು ರಾಜಿ ಆಗಲೇಬೇಕು ಇಲ್ಲದಿದ್ದರೆ ನಿಮ್ಮ ಪರಿಸ್ಥಿತಿ ನಾಳೆ ಬೆಳಗಾಗುವುದರ ನೆಟ್ಟಗಾಗಲಿಕ್ಕಿಲ್ಲ ಅಂತಾ ಸದರಿಯವರು ಅಂದು ನಮ್ಮ ಮೇಲೆ ಸಿಟ್ಟುಗೆದ್ದು ನೋಡಿಕೊಳ್ಳುತ್ತೇವೆ ಅಂತಾ ಅಂದು ತಮ್ಮ ಊರಿಗೆ ಹೋದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಸಚಿವರನ್ನು ಓದಿ ಎಂದು ಹೇಳಿದ್ದರಿಂದ ಇವರು ಓದುತ್ತಿದ್ದಾರೆ. ಇಲ್ಲದೇ ಇದ್ದಿದ್ದರೆ ಇವರು ಓದುತ್ತಲೇ ಇರಲಿಲ್ಲ.

ಶ್ರೀ ಬಿ. ರಾಚಯ್ಯ.--ಮಾನ್ಯ ಸದಸ್ಯರು ಕೇಳಿದ್ದರಿಂದ ನಾನು ಓದಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಘಟನೆಯ ಬಗ್ಗೆ ಏನು ಹೇಳಿದ್ದಾರೆ ನೋಡೋಣ, ಓದಿ,

ಶ್ರೀ ಬಿ. ರಾಚಯ್ಯ.--ಆಗಬಹುದು. ಮುಂದಿನ ಪ್ಯಾರಾ ಈ ರೀತಿ ಇದೆ.

ಇಂದು ತಾ. 11-6-85ರಂದು ಬೆಳಿಗ್ಗೆ 6 ಎ.ಎಂ.ಗೆ ನಾನು ನನ್ನ ಮಗನಾದ ಪ್ರಭುಲಿಂಗನಗೌಡ ನಮ್ಮ ಖಾಸಗಿ ಕೆಲಸದ ನಿಮಿತ್ತ ಕೊಪ್ಪಳಕ್ಕೆ ಹೋಗಿದ್ದೆವು. ಬೆಳಿಗ್ಗೆ 9-30 ಎ.ಎಂ.ಕ್ಕೆ ಕೊಪ್ಪಳದಿಂದ ವಾಪಸು ಬಸ್ಸಿಗೆ ಬಂದೆವು. ನಮ್ಮ ಊರ ಕ್ರಾಸಿಗೆ ಇಳಿದು ನಾನು ನನ್ನ ಮಗ ಇಬ್ಬರು ಕೂಡಿ ಊರ ಕಡೆಗೆ ಬರುತ್ತಿದ್ದೆವು. ಆಗ ನಾವು ಗುಂಡದ ದುರುಗಮ್ಮನ ಗುಡಿಯ ಹತ್ತಿರ ರಸ್ತೆಯಲ್ಲಿ ಬಂದಾಗ ಊರ ಕಡೆಯಿಂದ (1) ಕಲ್ಲವ್ವ ಬೊಮ್ಮನಾಳ (2) ಪಂಚಯ್ಯ ಜಂಗಮರ ಈತನ ಹೆಂಡತಿ (3) ಮುದುಕಯ್ಯನ ಹೆಂಡತಿ ಸುಪುತ್ರವ್ವ ಈ ಮೂರು ಜನರು ಬಂದು ಒಮ್ಮಿಂದೊಮ್ಮೆಲೆ ಎಲೆ ಹಡಿಸಿ; ಸೂಳೆ, ನಿಂದು ಊರಾಗ ಬಹಳ ಆಗೈತೆ ಅಂತ ಅಲಕ್ಕಾ ಸಲ್ಕಾ ಬೈಯುತ್ತಾ ನನಗೆ ಕೈಯಿಂದ ಬಡಿಯಲಿಕ್ಕೆ ಹತ್ತಿದರು. ಅಷ್ಟರಲ್ಲಿ ಊರ ಕಡೆಯಿಂದ ಮುದುಕಯ್ಯ ಜಂಗಮರು ಇವರ ಟ್ರಾಕ್ಟರಯಲ್ಲಿ ಜನರು ಕುಳಿತು ಬಂದು ಆ ಬೋಸಡಿಯನ್ನು ಬಿಡಬ್ಯಾಡರಿ ಅಂತಾ ಎಳೆದು ಹೋಗಿರಿ ಅಂತಾ ಚೀರುತ್ತಾ ನನ್ನಲ್ಲಿಗೆ ಬಂದು ಟ್ರ್ಯಾಕ್ಟರಿಯಿಂದ ಇಳಿದ ಜನರಾದ (1) ಮುದುಕಯ್ಯ ಜಂಗಮರ (2) ಶಂಕ್ರಗೌಡ ತಿಮ್ಮನಗೌಡ ಮಾಲಿಪಾಟೀಲ್ (3) ಶ್ರೀಕಂಠಯ್ಯ ಸಾಲಿಮಠ (4) ಮೊಹಿನುದ್ದೀನ (5) ಬಸಪ್ಪ ವಣಗೇರಿ (6) ಬಸ್ಸೆಟ್ಟೆಪ್ಪ ಕಲ್ಲೂರು (7) ಕೋನಪ್ಪ (8) ಕೋಮಾರಯ್ಯ ವಸ್ತ್ರದ ಮಾಸ್ತರ್ (9) ಮೃತ್ಯುಂಜಯ ವಸ್ತ್ರದ (10) ಮಹಾಂತಪ್ಪ ದೊಡ್ಡಮನಿ (11) ಸಂಗಯ್ಯ ಹಿರೇಮಠ ನವರೆಲ್ಲರೂ ಆ ಬೋಸಡಿದು ಏನು ನೋಡ್ತೀರಿ ನಮ್ಮೂರ ಮಹಾಂತ ಸ್ವಾಮಿಗಳ ಮರ್ಯಾದೆ ಕಳೆದಾಳ, ಅವಳ ಸೀರೆ ಬಿಚ್ಚಿರಿ ಅಂತ ಅಂದರು. ಎಲ್ಲರೂ ಕೈಯಿಂದ ನನಗೆ ಹೊಡಿಯಲಿಕ್ಕೆ ಹತ್ತಿದರು, ಮತ್ತು ಮಹಾಂತಸ್ವಾಮಿಗಳ ಅಣ್ಣ ಸಂಗಯ್ಯ ತನ್ನ ಕೈಯಲ್ಲಿದ್ದ ಬಡಿಗೆಯಿಂದ ತಲೆಯ ಬಲಭಾಗಕ್ಕೆ ಹೊಡೆದನು. ಇದರಿಂದ ಪೆಟ್ಟುಬಿದ್ದು ರಕ್ತ ಗಾಯವಾಯಿತು. ಹಾಗೂ ಕಲ್ಲವ್ವ ಬೊಮ್ಮನಾಳ, ಸುಪುತ್ರವ್ವ ಗಂಡ ಮುದುಕಯ್ಯ ಇವನ ಅಣ್ಣ ಪಂಚಯ್ಯನ ಹೆಂಡತಿ ಎಲ್ಲರೂ ಸೇರಿ ನನ್ನ ಸೀರೆ ಬಿಚ್ಚಿದರು, ಮತ್ತು ನನ್ನ ಒಳಗಿನ ಲಂಗಾ ಸಹಾ ಹರಿಯಲಿಕ್ಕೆ ಹತ್ತಿದರು. ನಾನು ಮರ್ಯಾದೆಯ ಸಲುವಾಗಿ ಡಬ್ಬ ಮಲಗಿಕೊಂಡೆ, ಆಗ ಎಲ್ಲರೂ ನನಗೆ ಕೈಯಿಂದ ಬೆನ್ನಿಗೆ ಬಡಿದರು ಮತ್ತು ಕುಮಾರಯ್ಯ ಮತ್ತು ಶಂಕರಗೌಡ ಇವರು ನನ್ನ ಭುಜಗಳನ್ನು ಹಿಡಿದು ಜಗ್ಯಾಡಿ ಕುಬುಸವನ್ನು ಸಹ ಹರಿದರು. ಆಗ ಅಲ್ಲೇ ಇದ್ದ ನಮ್ಮ ಊರ ಕುಂಬಾರ ನೀಲವ್ವ ಈಕೆಯು ಇವರಿಗೆ ಸರಿಯಿಸಿ ಬೈದು ಬುದ್ಧಿಹೇಳಿ ನನಗೆ ಸೀರಿ ಉಡಿಸಿದಳು.

ಆಮೇಲೆ ಈ ಜನರೆಲ್ಲರೂ ನನಗೆ ಬೈಯುತ್ತಾ, ಬಡಿಯುತ್ತಾ ದರದರನೆ ಎಳೆದುಕೊಂಡು ಮನೆಯವರೆಗೆ ತಂದುಬಿಟ್ಟರು ಆಮೇಲೆ ಮನೆಯೊಳಗೆ ಬಂದು ಈ ವಿಷಯದ ಬಗ್ಗೆ ಪೋಲೀಸರಿಗೆ ತಿಳಿಸಿದೆಯೆಂದರೆ ನಿನ್ನ ಪ್ರಾಣ ತೆಗೆಯಿತೀವಿ ಅಂತಾ ಹೆದರಿಕೆ ಹಾಕಿದರು. ಆಗ ಮನೆಯಲ್ಲಿ ಊರಿಂದ ಬಂದ ನನ್ನ ಅಣ್ಣನವರು ಮತ್ತು ನನ್ನ ಮಕ್ಕಳು ಮನೆಯಲ್ಲಿ ಇದ್ದರು. ನಮ್ಮ ಯಜಮಾನರೂ ಸಹ ಮನೆಯಲ್ಲಿ ಇದ್ದರು.

ಆಗ ನಾನು ನಮ್ಮ ಯಜಮಾನರಿಗೆ ಈ ವಿಷಯದ ಬಗ್ಗೆ ಪೋಲೀಸರಿಗೆ ತಿಳಿಸಲು ಹೇಳಿದೆ ಅದಕ್ಕೆ ನನ್ನ ಯಜಮಾನರು ಇಂದು ಮುಂಜಾನೆ ನನಗೂ ಸಹ ಮನೆಯಲ್ಲಿ ಬಂದು ಇದೇರೀತಿ ಬಡಿದಿದ್ದಾರೆ ಅಂತಾ ತಿಳಿಸಿದರು. ನಾವು ಮನೆಯಿಂದ ಹೊರಗೆ ಹೋಗಬಾರದು ಅಂತ ನಮ್ಮ ಮನೆಯ ಮುಂದೆ ಕಾಯುತ್ತಾ ಕುಳಿತರು.

ಈ ಎಲ್ಲಾ ಘಟನೆ ಜರಗಲು ಕಾರಣವೇನೆಂದರೆ ನನ್ನ ಸಂಗಡ ಅನೈತಿಕ ಸಂಬಂಧ ಬೆಳೆಸಲು ಮಹಾಂತ ಸ್ವಾಮಿಗಳು ಕೇಳಿದ್ದಕ್ಕೆ ಮತ್ತು ಈ ವಿಷಯದ ಬಗ್ಗೆ ಪತ್ರಗಳು ಬಂದದಕ್ಕೆ ಪೋಲೀಸರಿಗೆ ತಿಳಿಸಿ ಸ್ವಾಮಿಯವರ ಮೇಲೆ ಕೇಸ್ ಮಾಡಿಸಬೇಕೆಂದು ಮತ್ತು ನಾವು ರಾಜಿಯಾಗದಿದ್ದಕ್ಕೆ ಈ ದ್ವೇಷ

ದಿಂದ ಮಹಾಂತ ಸ್ವಾಮಿ ಮೈಸೂರು ; ಈತನು ಸೂಡಿ ಗ್ರಾಮದವರಾದ ಶೇಖರಯ್ಯ ಮತ್ತು ಅಂದಾನಪ್ಪ ಸೊಬಗಿನ ಮತ್ತು ಊರ ವೇಲ್ಯಾಣಿಸಿದ ಜನರಿಂದ ಈ ರೀತಿ ಮಾಡಿಸಿರುತ್ತಾನೆ, ಕಾರಣ ಈ ಎಲ್ಲಾ ಜನರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗಿ ವಿನುತಿ.

ಓ.ಹೇ.ಕೆ. ಸರಿ ಇದೆ.

ಸಹಿ:—ಪಾರ್ವತೆವ್ವಾ ..

ಒಟ್ಟಿನಲ್ಲಿ ಈ ಅಹಿತಕರ ಘಟನೆ ನಡೆದಿದೆ. ಇದು ಶ್ರೀಸಾಮಾನ್ಯರಿಗೇ ಅಲ್ಲದೆ ಧರ್ಮವನ್ನು ನಾವು ರಕ್ಷಣೆ ಮಾಡುತ್ತೇವೆಂದು ಹೇಳುವವರೆಲ್ಲಾ ತಲೆ ತಗ್ಗಿಸುವ ವಿಷಯವಾಗಿದೆ. ಸ್ತ್ರೀ ಧರ್ಮವನ್ನು ಕಾಪಾಡುತ್ತೇವೆಂದು ಯಾರು ಹೇಳುತ್ತಾರೆ ಅವರಿಗೂ ಕೂಡ ಬೆಲೆ ಬರುವುದಿಲ್ಲ, ಇದು ಬೇಲಿಯೇ ಎದ್ದು ಹೊಲವನ್ನು ಮೇಯುವುದಕ್ಕೆ ಹೊರಟಂತಾಗಿದೆ. ಇದಕ್ಕೆ ನಾನು ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಇವತ್ತು ಇದು ಆಗಿದೆ ಎಂದು ಪಾರ್ವತೆವ್ವ ಹೇಳಿದ್ದರಿಂದ ಪೋಲೀಸರು ಕ್ರಮ ತೆಗೆದುಕೊಂಡಿದ್ದಾರೆ. ಇನ್ನೂ ಒಂದೆರಡು ಕೇಸಿನಲ್ಲಿ ಸ್ವಲ್ಪ ತಡವಾಗಿರಬಹುದು. ಹಿರಿಯ ಅಧಿಕಾರಿಗಳು ಸೂಕ್ತ ಕ್ರಮವನ್ನು ಸಕಾಲದಲ್ಲಿ ತೆಗೆದುಕೊಳ್ಳಲಿಲ್ಲವೆಂದು ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಡಬೇಕಾಗಿದೆ. ಸಿಒಡಿ. ವರದಿ ಬಂದಮೇಲೆ ಅವರ ಮೇಲೆ ಏನು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣವೆಂದು ತಡ ಮಾಡಿದ್ದೇವೆ. ಆದರೆ ತಾವು ಹೇಳುವಂತೆ ಉದಾಸೀನ ಭಾವನೆಯಿಂದ ಸ್ತ್ರೀಯರ ಮೇಲೆ ಆಗತಕ್ಕ ಅತ್ಯಾಚಾರಗಳನ್ನು ನೋಡಿಕೊಂಡು ನಾವು ಯಾರಿಗೂ ಪ್ರೊಟೆಕ್ಷನ್ ಕೊಡುತ್ತಿಲ್ಲ. ತಮಗೆ ಗೊತ್ತಿರುವಂತೆ ಎಲ್ಲಾದರೂ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ನಡೆದಿದೆ ಎಂದಾಗ, ಮಂಗಳಸೂತ್ರವನ್ನು ಕಿತ್ತುಕೊಂಡಿದ್ದಾರೆ ಎಂದು ದೂರು ಬಂದಾಗ ಕೂಡಲೇ ಅಂಥವರ ವಿರುದ್ಧ ಕ್ರಮ ತೆಗೆದುಕೊಂಡಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ ಇಂಥ ಕೃತ್ಯಗಳನ್ನು ನಾವು ಸಂಪೂರ್ಣವಾಗಿ ತಡೆಗಟ್ಟಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹಿಂದೆ ನಡೆಯುತ್ತಿದ್ದ ರೀತಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಇಂಥ ಕೃತ್ಯಗಳು ಈಗ ನಡೆಯುತ್ತಿಲ್ಲ. ನಮ್ಮದು ಈಗ ಶಾಂತಿಪ್ರಿಯ ರಾಜ್ಯವಾಗಿದೆ. ಉತ್ತರಪ್ರದೇಶದಲ್ಲಿ ಇಂಥ ಕೃತ್ಯಗಳು ನಡೆಯುತ್ತಿವೆ ಮಧ್ಯಪ್ರದೇಶದಲ್ಲಿ ನಡೆಯುತ್ತಿವೆ, ದೆಹಲಿಯಲ್ಲಿ ನಡೆಯುತ್ತಿವೆ ಎಂದು ಹೇಳುವುದು ಸರಿಯಲ್ಲ. ಕರ್ನಾಟಕ ರಾಜ್ಯದಲ್ಲಿ ಎಲ್ಲರೂ ಶಾಂತಿಯಿಂದ ಬಾಳಬೇಕೆಂದು ಬಯಸತಕ್ಕ ಜನ ಬಹಳ ಮಂದಿ ಇದ್ದಾರೆ, ಸಾಮಾನ್ಯವಾಗಿ ಇಂಥ ಹೇಯ ಕೃತ್ಯಗಳು ನಡೆದಾಗ ಸಿಟ್ಟು ಬರುತ್ತದೆ. ಆದರೆ ಶ್ರೀಮತಿ ನಾಗರತ್ನಮ್ಮನವರು ಹೇಳಿದಂತೆ ಸಿಟ್ಟು ಬರುವುದು ತಡವಾಗಿದೆ. ಈಗಾಗಲೇ ಅನೇಕ ಜನ ಸದಸ್ಯರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿ ಇಂಥ ಹೇಯ ಕೃತ್ಯಗಳಲ್ಲಿ ತೊಡಗುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ತಿಳಿಸಿದ್ದಾರೆ. ಆದರೆ ಕಾನೂನು ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೊರಟಾಗ ಸ್ವಲ್ಪ ತಡವಾಗುತ್ತದೆ. ಇತ್ತೀಚೆಗೆ ಹೈಕೋರ್ಟ್‌ನಲ್ಲಿ ಒಂದು ಆರ್ಡರ್ ಪಾಸ್ ಆಗಿದೆ. ಅದು ಏನೆಂದರೆ :

Order passed by the High Court of Karnataka (Justice N.D. Venkatesh) on 17-7-1985 on the Criminal Revision Petition filed by Sri Mudukaiah and 34 others (35th petitioner is Sri Mahantha swamy) of Kudremothi against the Order of Taluk Executive Magistrate, Yelburga (MAG No. 15/85-86 dated 10-7-85—Bevur Police Vs. Mudukaiah and 34 others) requesting to drop proceedings u/s. 107 Cr. P.C. in Bevur PS Cr. No. 18/85.

"Government Advocate who has taken notice for the Respondents State wants some time to submit his say. Therefore call on 31-7-85. Further proceedings before the Executive Magistrate are stayed till 14-8-85".

Points raised by Petitioners through Advocate Sri B. V. Deshpande :

(i) Taluk Executive Magistrate has no jurisdiction to pass impugned order u/s. 116 (3) CrPC,

(ii) the Oder was incorrect and not binding on them to appear before Taluk Magistrate asd exeeutive a bond,

(iii) the preliminary order was not read over to the petitioners as required under the law, and

(iv) the provisions of section 116 (3) CrPC were not followed,

ಶ್ರೀ ಧರ್ಮಸಿಂಗ್.—ಅವರಮೇಲೆ ನೀವು ಗೂಂಡಾ ಆ್ಯಕ್ಟ್‌ನ್ನು ಏತಕ್ಕೆ ಉಪಯೋಗ ಮಾಡಲಿಲ್ಲ ?

ಶ್ರೀ ಬಿ. ರಾಚಯ್ಯ.—ಗೂಂಡಾ ಆ್ಯಕ್ಟ್‌ನ್ನೂ ಕೂಡ ತರಿಸಿ ನೋಡಿದ್ದೇವೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ.......

ಅಧ್ಯಕ್ಷರು.—ಅದನ್ನೇ ಮಾನ್ಯ ಸಚಿವರು ಹೇಳುತ್ತಿದ್ದಾರೆ ; ಗೂಂಡಾ ಆ್ಯಕ್ಟ್ ಪ್ರಕಾರ ಅವರನ್ನು ಏತಕ್ಕೆ ಅರೆಸ್ಟ್ ಮಾಡಲಿಲ್ಲ ಎಂಬುದನ್ನು ಹೇಳುತ್ತಾರೆ ; ತಾವು ಸ್ವಲ ದಯವಿಟ್ಟು ಸಾವಧಾನದಿಂದ ಕೂತು ಕೇಳಿ.

ಶ್ರೀ ಬಿ. ರಾಚಯ್ಯ.—ಪೋಲೀಸರು ಏನು ಮಾಡಲಿಲ್ಲವೆಂದು ಹೇಳುವುದು ಸರಿಯಲ್ಲ. ದೂರು ಬಂದ ದಿವಸವೇ ಪೋಲೀಸರು ಎಫ್.ಐ.ಆರ್. ತೆಗೆದುಕೊಂಡು 21ನೇ ತಾರೀಖು ಛಾರ್ಜ್ ಷೀಟ್ ಹಾಕಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಪಾರ್ವತೆವ್ವ ದೂರು ಕೊಟ್ಟ ತಾರೀಖು ಯಾವುದು ?

ಶ್ರೀ ಬಿ. ರಾಚಯ್ಯ.—11ನೇ ತಾರೀಖು ಸಂಜೆ 6 ಗಂಟೆಗೆ.

ಶ್ರೀ ಆರ್. ವೆಂಕಟರಾಮಯ್ಯ.—ಈಗಾಗಲೂ ಅವರನ್ನು ಅರೆಸ್ಟ್ ಮಾಡುವುದಕ್ಕೆ ಆಗಲಿಲ್ಲವೇ.ಗೃಹ ಸಚಿವರಾಗಿ ತಾವು ಏನು ಮಾಡುತ್ತೀರಿ ಎನ್ನುವುದನ್ನಾದರೂ ಹೇಳಬಿಡಲಿ.

ಶ್ರೀ ಬಿ. ರಾಚಯ್ಯ.—ಅವರು ದಿನಾಂಕ 11-5-1985ರಲ್ಲಿ ಕಂಪ್ಲೈಂಟ್ ಕೊಟ್ಟಿರುತ್ತಾರೆ. ಅರೆಸ್ಟ್ ಮಾಡಿರುವುದು 21-5-85ರಲ್ಲಿ.

ಶ್ರೀ ಧರ್ಮಸಿಂಗ್.—ಮಾನ್ಯ ಸಚಿವರು ಹಿಂದು ಮಾತನ್ನು ಹೇಳಿದರು, ಸಾರ್ವಜನಿಕರಿಗೆ ಸಿಟ್ಟು ಬರಲಿಲ್ಲವೆಂದು. ಸಿಟ್ಟು ಬರಬೇಕಾಗಿತ್ತು. ಆದರೆ ತಮ್ಮ ಸಿಟ್ಟು ಎಲ್ಲಿ ಹೋಗಿತ್ತು ಎಂದು ಕೇಳ ಬೇಕಾಗಿದೆ. ಗೃಹ ಮಂತ್ರಿಗಳಾಗಿ ತಮಗೆ ಅಧಿಕಾರ ಇದ್ದರೂ ಕೂಡ ತಾವು ಏನೂ ಕ್ರಮ ತೆಗೆದು ಕೊಂಡಿದ್ದೀರಿ ಎಂದು ಕೇಳಬೇಕಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ರೂಲ್ ನಂಬರ್ 107 ಡಿಫೆಕ್ಟಿವ್ ಪ್ರೋಸೀಡಿಂಗ್ಸ್ ಪ್ರಕಾರ ಆ ಸಬ್‌ಇನ್‌ಸ್ಪೆಕ್ಟರನ್ನು ಸಸ್‌ಪೆಂಡ್ ಮಾಡಬೇಕಾಗಿತ್ತು.

ಶ್ರೀ ಬಿ. ರಾಚಯ್ಯ.—ಆ ಕೂಡಲೇ ಸಬ್ ಇನ್ಸ್‌ಪೆಕ್ಟರವರನ್ನು ಸಸ್‌ಪೆಂಡ್ ಮಾಡಲು ಸಾಧ್ಯ ವಾಗಲಿಲ್ಲ. ಸಿ.ಓ.ಡಿ.ರಿಪೋರ್ಟ್ ತರಿಸಿಕೊಳ್ಳಬೇಕಾಗಿತ್ತು. ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್ ಬಂದಿರುತ್ತದೆ. ಈ ವಿಷಯ ತಮಗೂ ಗೊತ್ತಿರುತ್ತದೆ ಎನ್‌ಕ್ವಯರಿ ಇಲ್ಲದೆ ಅರೆಸ್ಟ್ ಮಾಡುವಂತೆ ಇಲ್ಲ. ಎನ್‌ಕ್ವಯರಿಗೆ ಅವಕಾಶ ಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ಸಿ.ಓ.ಡಿಯವರು ಪ್ರಾರಂಭದಲ್ಲಿ ಚಾರ್ಜಶೀಟ್ ಹಾಕಿಬಿಟ್ಟು ಇನ್ನೊಂದು ಚಾರ್ಜ್‌ಶೀಟ್ ಹಾಕುವುದರಲ್ಲಿ ಇದ್ದಾರೆ. ಸಿ.ಓ.ಡಿ. ಏನು ಮಾಡುವುದಕ್ಕೂ ಆಗುವುದಿಲ್ಲ. ಮಹಂತಸ್ವಾಮಿ ಅದನ್ನು ಕೆಡಿಸುತ್ತಿದ್ದಾರೆ. ದಯವಿಟ್ಟು ಅವರಮೇಲೆ ಕ್ರಮ ತೆಗೆದುಕೊಳ್ಳಬೇಕು. ಗೂಂಡಾ ಆಕ್ಟ್ ಪ್ರಕಾರವಾಗಿಯಾದರೂ ಅವರಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ಎಂದು ಕೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್ ಬಂದಿದೆ. ಆ ಪ್ರಕಾರವಾಗಿ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರಲ್ಲ.

ಶ್ರೀ ಬಿ. ರಾಚಯ್ಯ.—ಕೂಡಲೇ ಸಸ್‌ಪೆಂಡ್ ಮಾಡಲು ಏತಕ್ಕೆ ಸಾಧ್ಯವಿಲ್ಲವೆಂದರೆ ಅಲ್ಲಿಗೆ ಹೊಸ ದಾಗಿ ಒಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡತಕ್ಕಂಥ ಕೆಲಸ ನಡೆದಿದೆ. ಆದರಿಂದಾಗಿ ನಿಧಾನವಾಗಿದೆ. ಅದಕ್ಕೋಸ್ಕರವಾಗಿ ತಪ್ಪಿತಸ್ಥರು ಯಾರು ಇರುತ್ತಾರೋ ಅವರನ್ನು ಗುರುತಿಸಿ ಅರೆಸ್ಟ್ ಮಾಡಬೇಕೆಂದು ಹೇಳಿರುತ್ತೇವೆ. ಇವತ್ತಿನವರೆಗೂ 40 ಜನರನ್ನು ಅರೆಸ್ಟ್ ಮಾಡಲಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕಂಪ್ಲೈಂಟ್ ಬಂದ ತಕ್ಷಣವೇ ಅಂದರೆ 5-6ನೇ ತಾರೀಖು ಅರೆಸ್ಟ್ ಮಾಡಬೇಕಾಗಿತ್ತು. ರೆಕಾರ್ಡ್ ಪ್ರಕಾರ 10 ದಿವಸಗಳಾದರೂ ಅರೆಸ್ ಮಾಡಲಿಲ್ಲ.

ಪೋಲೀಸ್‌ನವರು ಆ ಜಾಗಕ್ಕೆ ಹೋಗಲಿಲ್ಲ ಇಷ್ಟೆಲ್ಲ, ಲ್ಯಾಪ್ಸ್ ಇರುತ್ತದೆ. ಮತ್ತೆ ಹುಸೇನಬಿ ಮತ್ತು ಪಾರ್ವತಮ್ಮ ಇವರಗಳನ್ನು ಹೊಡೆದು ಬಡಿದು ಮೆರವಣಿಗೆಯನ್ನು ಮಾಡಿದಮೇಲೆ ಕಂಪ್ಲೈಂಟ್ ತೆಗೆದುಕೊಂಡಿರುತ್ತಾರೆ. ಅಲ್ಲಿಯವರೆಗೂ ಪೋಲೀಸ್‌ನವರೂ ಯಾರೂ ಆ ಸ್ಥಳಕ್ಕೆ ಭೇಟಿ ಕೊಡಲಿಲ್ಲ. ಇದನ್ನು ತಡೆದು ನಿಲ್ಲಿಸಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸಚಿವರ ಹೇಳಿಕೆ ಮುಗಿದ ನಂತರ ಕ್ಲಾರಿಫಿಕೇಶನ್ ಕೇಳಲೆಂದು ನನ್ನ ಇಚ್ಛೆ.

ಶ್ರೀ ಬಿ. ರಾಚಯ್ಯ.—ನಾವು ಸಿ.ಓ.ಡಿ. ರಿಪೋರ್ಟನ್ನು ಏತಕ್ಕೆ ಕಾಯುತ್ತಿದ್ದೇವೆಂದರೆ ಬಹುಶಃ ಅಲ್ಲಿರುವ ಪೋಲೀಸಿನವರು ಏನಾದರೂ ಶಾಮೀಲಾಗಿರುತ್ತಾರೋ, ತಕ್ಷಣ ಆಕ್ಷನ್ ತೆಗೆದುಕೊಂಡರೋ ಇಲ್ಲವೋ, ಯಾರು ಪ್ರಭಾವ ಬೀರಿದ್ದಾರೆ ಎನ್ನುವುದರ ಬಗ್ಗೆ ಬೆಳಕು ಚೆಲ್ಲಲಿ ಎನ್ನುವ ಉದ್ದೇಶದಿಂದ ಸಿ.ಓ.ಡಿಗೆ ರೆಫರ್ ಮಾಡಿದ್ದೇವೆ. ಅದಕ್ಕೂ ತೃಪ್ತಿಯಾಗಲಿಲ್ಲವೆಂದರೆ ಈಗಾಗಲೇ ನಾನು ಮೇಲ್ ಮನೆಯಲ್ಲಿ ಹೇಳಿದ್ದೇನೆ. ಮೇಲ್‌ಮನೆಯ ಸದಸ್ಯರನ್ನೊಳಗೊಂಡಂತೆ ಈ ಮನೆಯ ಸದಸ್ಯರ ಒಂದು ಸಮಿತಿಯನ್ನು ನೇಮಕ ಮಾಡುವುದಾಗಿ ಹೇಳಿದ್ದೇನೆ. ಆ ಸಮಿತಿಯವರು ಸ್ಥಳಕ್ಕೆ ಹೋಗಿ ಬಂದರೆ ಅವರಲ್ಲಿಯೂ ಒಂದು ಧೈರ್ಯ ಬರುತ್ತದೆ. ಮತ್ತು ತಮ್ಮಿಂದ ಒಂದು ಮಾರಲ್ ನೀತಿಯೂ ಉಂಟು ಮಾಡಲು ಸಾಧ್ಯವಾಗುತ್ತದೆಂದು ಹೇಳಿರುತ್ತೇನೆ ಮತ್ತು ಜನ ಸದಸ್ಯರೂ ಕೂಡ ಈ ಬಗ್ಗೆ ಹೇಳಿರುತ್ತಾರೆ. ಆದ್ದರಿಂದ ಈಗಾಗಲೇ ಕಂಪ್ಲೈಂಟ್ ಬಂದು ಚಾರ್ಜ್‌ಶೀಟ್ ಹಾಕಿದ್ದರೂ ಅದನ್ನು ಬದಲಾವಣೆ ಮಾಡಲಿಕ್ಕೆ ಅವಕಾಶವಿದೆ, ಅದನ್ನು ಮಾಡಲಿಕ್ಕೆ ಸಾಧ್ಯವೆಂದು ತಮ್ಮೆಲ್ಲರ ಅಭಿಪ್ರಾಯವಿದ್ದರೂ, ಇಂಥ ಕೃತ್ಯಗಳು ನಡೆಯಬಾರದೆಂದು ಯೋಚನೆ ಮಾಡಿದ್ದೇವೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎನ್ನುವ ತಮ್ಮೆಲ್ಲರಲ್ಲಿರತಕ್ಕಂಥ ಕಳಕಳಿಯನ್ನು ಗಮನದಲ್ಲಿಟ್ಟುಕೊಂಡು ಆ ಸಬ್‌ಇನ್‌ಸ್ಪೆಕ್ಟರನ್ನು ಸಸ್‌ಪೆಂಡ್ ಮಾಡಲು ಹೇಳಿದ್ದೇನೆ. ಎನ್‌ಕ್ವಯರಿ ರಿಪೋರ್ಟ್ ಬಂದಮೇಲೆ ಮುಂದೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನೆಲ್ಲ ತೆಗೆದುಕೊಳ್ಳುತ್ತೇನೆ. ಗೂಂಡಾ ಆಕ್ಟ್ ಪ್ರಕಾರ ಅವರನ್ನು ಬಂಧಿಸಬೇಕಾದರೆ ಹ್ಯಾಬ್ಯುಚಿಯಲ್ ಅಫೆಂಡರ್ ಆಗಿರಬೇಕು, ಕ್ರಿಮಿನಲ್ ಅಫೆಂಡರ್ ಆಗಿರಬೇಕು. ಮಾನ್ಯ ವೆಂಕಟರಾಮಯ್ಯನವರು ಐ.ಪಿ.ಸಿ. ತೋರಿಸಿದ್ದಾರೆ. ಅದನ್ನೂ ಕೂಡ ಸ್ಟಡಿ ಮಾಡುತ್ತೇನೆ. ಬಹುಶಃ ಅವರು ಒಂದು ರೀತಿಯಲ್ಲಿ ತಪ್ಪಿಸಿಕೊಳ್ಳುವುದಾದರೆ ಇನ್ನೊಂದು ರೀತಿ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಗದಗ್ ಕೌನ್ಸಿಲರನ್ನು ಗೂಂಡಾ ಆಕ್ಟ್ ಪ್ರಕಾರ ಅರೆಸ್ಟ್ ಮಾಡಿದ್ದಾರೆ. ಕೇಸ್ ರಿಜಿಸ್ಟರ್ ಮಾಡಿದ್ದಾರೆ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಸದನದಲ್ಲಿ ಮಾನ್ಯ ಸದಸ್ಯರು ಮಾತನಾಡುವಾಗ ನಾನು ಬಹಳ ಎಚ್ಚರಿಕೆಯಿಂದ ಎಲ್ಲವನ್ನೂ ಕೇಳಿರುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ವಿನಂತಿ, ಮಾನ್ಯ ಸಚಿವರು ತಮ್ಮ ಹೇಳಿಕೆಯನ್ನು ಮುಗಿಸಲಿ. ಅನಂತರ ಒಬ್ಬೊಬ್ಬರಾಗಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ರಾಚಯ್ಯ.—ಗೂಂಡ ಆಕ್ಟ್ ಪ್ರಕಾರವಾಗಿ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ, ಕೌನ್ಸಿಲರನ್ನು ಅರೆಸ್ಟ್ ಮಾಡಿದ್ದೇವೆ. ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಸಮಾಜದಲ್ಲಿ ಇಂಥದ್ದು ನಡೆದಿದೆ ಎಂದೂ ಕೂಡ ಹೇಳಿದ್ದೇನೆ. ಈವತ್ತಿನವರೆಗೂ ಯಾರೂ ಕಂಪ್ಲೇಂಟ್ ಮಾಡಿಲ್ಲ. ಕಂಪ್ಲೇಂಟ್ ಮಾಡುವವರು ಯಾರಾದರೂ ಇದ್ದರೆ ಮುಂದೆ ಬರಲಿ, ತೋರಿಸಲಿ, ಅವರಿಗೆ ಅಭಿನಂದಿಸುತ್ತೇನೆ. ಮತ್ತೆ ಅವರಿಗೆ ಯಾವರೀತಿ ಪ್ರಾಣ ರಕ್ಷಣೆಗೆ ಏನೇನು ಅನುಕೂಲತೆಗಳು ಬೇಕೋ ಅದನ್ನೆಲ್ಲವನ್ನು ಕೊಡುತ್ತೇನೆ, ಸಾಕ್ಷಿ ವಗೈರೆ ಎಲ್ಲದಕ್ಕೂ ರಕ್ಷಣೆ ಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ. ತಪ್ಪಿತಸ್ಥರಿದ್ದರೆ ಕೋರ್ಟಿನಲ್ಲಿ ಸಾಬೀತಾದರೆ ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷೆಯನ್ನು ಮಾಡಲು ಹಿಂಜರಿಯುವುದಿಲ್ಲ. ಯಾರ ಒತ್ತಡಕ್ಕೂ ನಾನು ಮಣಿಯುವುದಿಲ್ಲ. ನನ್ನ ಮಾನಹಾನಿಯಾದರೂ ಅದಕ್ಕೆ ನಾನು ಯೋಚನೆ ಮಾಡುವುದಿಲ್ಲ. ಈವತ್ತು ಹೆಣ್ಣುಮಕ್ಕಳ ಗೌರವವನ್ನು ಉಳಿಸಲಿಕ್ಕೆ ಏನೇನು ವ್ಯವಸ್ಥೆಯನ್ನು ಮಾಡಬೇಕೋ ಅದನ್ನೆಲ್ಲ ಮಾಡುತ್ತೇನೆ. ಹಾಸನದಲ್ಲಿ ಒಂದೂವರೆ ತಿಂಗಳ ಹಿಂದೆ ನೀರಿಗೆ ಹೋದಂಥ ಇಬ್ಬರು ಹೆಣ್ಣುಮಕ್ಕಳ ಮಾನಾಪಹರಣ ಮಾಡಿರತಕ್ಕಂಥಾದ್ದು ನಡೆದಿದೆ. ಇದರ ಬಗ್ಗೆ ಕೂಡ ನಾವು ಯೋಚನೆ ಮಾಡಬೇಕಾಗಿದೆ. ಹೆಂಗಸರಲ್ಲಿ ಚಾರಿತ್ರ್ಯಹೀನರೂ ಇದ್ದಾರೆಂದು ಹೇಳಿದರು. ಚಾರಿತ್ರ್ಯಹೀನರು ಯಾವ ವರ್ಗದಲ್ಲಿ ಇಲ್ಲ. ಅದಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆ. ನಾನು ಚಾರಿತ್ರ್ಯಹೀನನೇನಾದರೂ ಇದ್ದರೆ ಈ ಸ್ಥಾನದಲ್ಲಿ ಕುಳಿತುಕೊಳ್ಳಲು ಲಾಯಕ್ಕಾದವನಲ್ಲ. ಆದ್ದರಿಂದ ಈ ಸಭೆಯೂ ಏನು ನಿರೀಕ್ಷಣೆ ಮಾಡುತ್ತದೆಯೋ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ

ವಿಚಾರದ ಬಗ್ಗೆ ಮಾನ್ಯ ಸದಸ್ಯರು ಏನು ನಿಧಾನವಾಯಿತು ಎಂದು ಹೇಳುತ್ತಿರುತ್ತಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಮಾಜದ ಹಿಂದೆ ಎಷ್ಟೋ ಮಹತ್ವದ್ದು ಇರುತ್ತದೆ. ಅದನ್ನೆಲ್ಲ ನೋಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಬಸವಲಿಂಗಪ್ಪನವರು ಮಾತನಾಡುತ್ತಾ ದುರ್ಬಲರು ಯಾರು ಇದ್ದಾರೋ, ಅಬಲರು ಯಾರು ಸಮಾಜದಲ್ಲಿ ಇದ್ದಾರೋ ಅವರಿಗೆ ಏನು ರಕ್ಷಣೆಯನ್ನು ಕೊಡುತ್ತೀರಿ ಎಂದು ಕೇಳಿದ್ದಾರೆ. ಇವತ್ತು ಎಲ್ಲೆಲ್ಲಿ ದೂರುಗಳು ಬಂದಿವೆಯೊ, ಅಲ್ಲಲ್ಲಿ ತಕ್ಷಣ ಕ್ರಮ ತೆಗೆದುಕೊಂಡಿದ್ದೇವೆ. ಪೋಲೀಸ್ ಅಧಿಕಾರಿಗಳ ಲೆವಲ್‌ನಲ್ಲಿ ಕ್ರಮ ತೆಗೆದುಕೊಳ್ಳಲಿಕ್ಕೆ ತಡವಾಗಿದೆ ಎಂದು ನಾನು ಒಪ್ಪಿಕೊಂಡಿದ್ದೇನೆ. ಇದರಲ್ಲಿ ಯಾರಿಗೆ ಏನು ಶಿಕ್ಷೆ ವಿಧಿಸಬೇಕೋ ಅದನ್ನು ವಿಧಿಸಲು ಪ್ರಯತ್ನ ಮಾಡುತ್ತಿದ್ದೇನೆ. ಇಷ್ಟೆಲ್ಲ ಆದರೂ ಕೂಡ, ಇಂತಹ ದುರ್ಘಟನೆಗಳ ಪ್ರಸ್ತಾಪ ಇಲ್ಲಿ ಆಯಿತಲ್ಲ, ಇದು ಆಗದ ರೀತಿಯಲ್ಲಿ ನೋಡಿಕೊಂಡಿದ್ದರೆ ಚೆನ್ನಾಗಿ ಇರುತ್ತಿತ್ತೋ ಏನೋ. ಆಗ ಮಾನ್ಯ ಸದಸ್ಯರುಗಳು ಈ ಉದ್ವೇಗಕ್ಕೆ ಅವಕಾಶ ಆಗುತ್ತಿರಲಿಲ್ಲ. ಆದ್ದರಿಂದ ಸ್ತ್ರೀಯ ಗೌರವ ಎಷ್ಟು ಮಾತ್ರಕ್ಕೂ ಕೆಳಗಿಳಿಯಬಾರದು ಎನ್ನತಕ್ಕಂಥ ದೃಷ್ಟಿ ಏನಿದೆ, ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.

7-30 p.m.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು.—ಖರ್ಗೆಯವರೇ, ಈಗ ನೀವು ಕುಳಿತುಕೊಳ್ಳಿ. ನಿಮಗೆ ಮಾತನಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಬಿ. ರಾಚಯ್ಯ.—ಈ ದೇಶದಲ್ಲಿ ಇಂತಹ ದುಷ್ಕೃತ್ಯಗಳು ನಡೆಯದ ಹಾಗೆ, ಸಮಾಜದಲ್ಲಿ ಏನಾದರೂ ಕ್ರಾಂತಿಯಾಗಬೇಕಿದ್ದರೆ ಸಮಾಜ ಕೂಡ ಇಂತಹ ವ್ಯಕ್ತಿಗಳಿಗೆ ಬಹಿಷ್ಕಾರ ಹಾಕಬೇಕು. ಇವರಿದ್ದೆಡೆಗೆ ಯಾರೂ ಪೂಜೆ ಮಾಡುವುದಕ್ಕೆ ಹೋಗುತ್ತಾರೆ, ಅದರ ಅಗತ್ಯ ಇಲ್ಲವೆಂದು ಹೇಳಬೇಕು. ಇದು ಕೇವಲ ಒಬ್ಬ ಮಂತ್ರಿ ಅಥವಾ ಸರ್ಕಾರ ಮಾತ್ರವೇ ಮಾಡತಕ್ಕದಲ್ಲ. ನನಗೆ ಸಂತೋಷ ಏನೆಂದರೆ, ಈ ಕೃತ್ಯವನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಮತ್ತು ಹೆಣ್ಣುಮಕ್ಕಳು ಮೆರವಣಿಗೆ ಮಾಡಿದರು. ಇದೇರೀತಿ ಎಲ್ಲಾ ಕಡೆಯೂ ಆಗಬೇಕು. ಆಗ ಇಂತಹ ದುಷ್ಕೃತ್ಯಗಳು ನಡೆಯುವುದಕ್ಕೆ ಅವಕಾಶ ಆಗುವುದಿಲ್ಲ. ಸಮಾಜದಲ್ಲಿರತಕ್ಕಂಥ ಎಲ್ಲಾ ವರ್ಗದ ಜನರೂ ಕೂಡ ಸ್ತ್ರೀ ಸಮಾಜಕ್ಕೆ ಒದಗಿರುವ ಈ ಕುಂದೇನಿದೆ, ಅವರ ಶೀಲಭಂಗ ಇನ್ನುಮುಂದೆ ಆಗದ ರೀತಿಯಲ್ಲಿ ಬೆಂಬಲ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮಂತ್ರಿಗಳು 11 ನೇ ತಾರೀಖಿಗೆ ದೂರು ಕೊಟ್ಟರೆ 21ನೇ ತಾರೀಖಿಗೆ ಈ ಸ್ವಾಮಿಯನ್ನು ದಸ್ತಗಿರಿ ಮಾಡಿದರು ಎಂದು ಹೇಳಿದ್ದಾರೆ. ಸುಮಾರು ಹತ್ತು ದಿವಸಗಳಷ್ಟು ತಡ ಈ ವಿಷಯದಲ್ಲಿ ಆಗಿದೆ. ಆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ನನ್ನು ತಕ್ಷಣವೇ ಸಸ್ಪೆಂಡ್ ಮಾಡಬಹುದಾಗಿತ್ತು. ಎರಡನೆಯದಾಗಿ, ಅವರು ಹೋಗಿ ನಿರೀಕ್ಷಣಾ ಜಾಮೀನು ತೆಗೆದುಕೊಂಡಿದ್ದಾರೆ. ನಿರೀಕ್ಷಣಾ ಜಾಮೀನು ಪಡೆದುಕೊಂಡಿರುವವರು ಸ್ಥಳೀಯವಾಗಿ ಪ್ರಭಾವ ಬೀರಲು ಪ್ರಯತ್ನ ಮಾಡುತ್ತಾರೆ. ಇದರಿಂದಾಗಿ ಸಾಕ್ಷಿ ನೀಡುವುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಏಕೆಂದರೆ, ಅವರಿಗೆ ಹೆದರಿಕೆ ಇರುತ್ತದೆ. ನಿರೀಕ್ಷಣಾ ಜಾಮೀನು ಪಡೆದು ಇವರು ಹೊರಗೆ ಬಂದಮೇಲೆ ನಂತರ ಪುನಃ ಚಾರ್ಜ್‌ಶೀಟ್ ಹಾಕಬೇಕಾದರೆ ಇದರಿಂದ ತೊಂದರೆಯಾಗುತ್ತದೆ. ಹೀಗಾಗಿ ಕೇಸು ವಿಫಲವಾಗುವ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಗೂಂಡಾ ಕಾಯಿದೆ ಪ್ರಕಾರ ಮೊದಲು ಇವರನ್ನು ದಸ್ತಗಿರಿ ಮಾಡಿ ಒಳಗೆ ಇಟ್ಟುಬಿಡಿ. ಆಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಿಕ್ಕೆ ಬರುತ್ತದೆ. ಇಲ್ಲದಿದ್ದರೆ ಮುಂದೆ ಹಾಕತಕ್ಕಂಥ ಚಾರ್ಜ್‌ಶೀಟ್‌ಗೆ ಇದರಿಂದ ತೊಂದರೆ ಬರುತ್ತದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಕುದುರೆಮೋತಿಗೆ ಹೋಗಿಬಂದು ಕೆಲವು ಮಾಹಿತಿಗಳನ್ನು ತಿಳಿದುಕೊಂಡು ಬರಲಿ. ನಂತರ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಹೌದು, ಸರ್ಕಾರದವರು ಒಂದು ಸಮಿತಿಯನ್ನು ರಚಿಸುತ್ತಾರೆ. ಅವರು ಏನೇನು ಸಲಹೆಗಳನ್ನು ಕೊಡುತ್ತಾರೋ ಕೊಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸಿ.ಓ.ಡಿ.ಗೆ ತನಿಖೆಗೆ ಒಪ್ಪಿಸಿರುವುದರಿಂದ ಪುನಃ ಇನ್ವೆಸ್ಟಿಗೇಷನ್ ಮಾಡಬೇಕಾಗುತ್ತದೆ. ಪ್ರೈಮಾಫೇಸಿಯಲ್ಲಿ 'it looks like manipulation and manoeuvring' ಎಂದು ಲೋಕಲ್ ಪೋಲೀಸರು ಚಾರ್ಜ್‌ಶೀಟ್ ಹಾಕಿದ್ದಾರೆ ಎಂದು ವರದಿಯಲ್ಲಿ

ಬರುತ್ತದೆ. ಇದು ಮುಖ್ಯವಾದ ವಿಷಯ ಆದ್ದರಿಂದ ಸಿಓಡಿ.ಯವರಿಂದ ಪುನಃ ಎನ್‌ಕ್ವೈರಿ ಆಗಬೇಕು ಇಲ್ಲದಿದ್ದರೆ, ಸುಮ್ಮನೆ ಕಣ್ಣು ಒರೆಸಿದ ಹಾಗೆ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಿಓಡಿ. ತನಿಖೆ ಆದಮೇಲೆ ಚಾರ್ಜ್‌ಶೀಟ್‌ನ್ನು ಬೇಕಾದರೆ ಬದಲಾಯಿಸಬಹುದು. ಕಾನೂನು ಪ್ರಕಾರ ಏನು ಮಾಡಬಹುದೋ, ಅದನ್ನು ಮಾಡುತ್ತೇನೆ ಎಂದು ಹೇಳಿದ್ದಾರೆ. ಇನ್ನೊಂದು ವಿಚಾರ, ಮಾನ್ಯ ಸದಸ್ಯರು ಗೂಂಡಾ ಆಕ್ಟ್ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಈ ಆಕ್ಟ್ ಬಗ್ಗೆ ಏನೇನು ಕ್ರಮ ಕೈಗೊಳ್ಳಬಹುದೆಂದು ತಿಳಿಯಲು ಅದರ ಅಧ್ಯಯನವನ್ನು ಅವರು ಮಾಡುತ್ತಾರೆ, ಆಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪಾರ್ವತಮ್ಮನವರ ಕಂಪ್ಲೇಂಟ್ ಪ್ರಕಾರ ಸೀರೆ ಬಿಚ್ಚಿಸಿದರು ಎಂದು ಸ್ಪಷ್ಟವಾಗಿ ಇದೆ. ಆದ್ದರಿಂದ ಇದನ್ನು ದಯಮಾಡಿ ಎಫ್‌ಐಆರ್.ನಲ್ಲಿ ಇಲ್ಲದೇ ಇದ್ದರೆ ಮುಂದೆ ಬೇರೆ ರಿಪೋರ್ಟ್ ತರಿಸಿಕೊಂಡು ದುರಸ್ತಿ ಮಾಡಬೇಕಾಗುತ್ತದೆ,

ಶ್ರೀ ಬಿ. ರಾಚಯ್ಯ.—ಪಾರ್ವತಮ್ಮ ಕೊಟ್ಟ ಸ್ಟೇಟ್‌ಮೆಂಟ್ ಮೇಲೆಯೇ ಇದನ್ನು ತೆಗೆದುಕೊಂಡಿದ್ದೀವೆ. ನಿರೀಕ್ಷಣಾ ಜಾಮೀನು ಅವರು ಪಡೆದುಕೊಂಡಿದ್ದರೂ ಅವರು ಕರೆದಾಗ ಕೋರ್ಟಿಗೆ ಹಾಜರಾಗಬೇಕೆಂಬ ಸೂಚನೆಯನ್ನು ಕೊಡಲಾಗಿದೆ. ಇದನ್ನು ಕ್ಯಾನ್ಸಲ್ ಮಾಡಬೇಕೆಂದು ಕೂಡ ನಾವು ಮೂವ್ ಮಾಡುತ್ತೇವೆ. ಸಿಓಡಿ. ರಿಪೋರ್ಟ್ ಬಂದಮೇಲೆ ಸಪ್ಲಿಮೆಂಟರಿ ಚಾರ್ಜ್‌ಶೀಟ್ ಹಾಕಲಿಕ್ಕೆ ಅವಕಾಶ ಇದೆ. ಸಮಿತಿಯವರು ಹೋಗಿ ಬಂದಮೇಲೆ, ಅವರ ಅನುಭವ ಸರ್ಕಾರಕ್ಕೆ ಉಪಯೋಗಕ್ಕೆ ಬರುತ್ತದೆ, ಅಲ್ಲಿಯ ಜನಕ್ಕೆ ಧೈರ್ಯವಾದರೂ ಸಿಗುತ್ತದೆ.

ಅಧ್ಯಕ್ಷರು.—ಆದಷ್ಟು ಬೇಗ ಸಮಿತಿಯನ್ನು ಮಾಡಿ ಸದಸ್ಯರ ಸಲಹೆಗಳನ್ನು ತೆಗೆದುಕೊಳ್ಳಿ. ಸಮಿತಿಯವರು ಕೊಡುವ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಗೃಹಸಚಿವರು ಹೇಳಿದ್ದಾರೆ. ಇನ್ನು ವಿರೋಧಪಕ್ಷದ ನಾಯಕರಾದ ಶ್ರೀ ಬಂಗಾರಪ್ಪನವರು ಮಾತನಾಡುತ್ತಾರೆ,

ಶ್ರೀ ಬಿ. ಬಸವಲಿಂಗಪ್ಪ,—ಸ್ವಾಮಿ, ನನಗೆ ಅವಕಾಶ ಕೊಡಿ,

ಅಧ್ಯಕ್ಷರು.—ಬೇಗ ಮುಗಿಸಿಬಿಡಿ.

ಶ್ರೀ ಬಸವಲಿಂಗಪ್ಪ.—ಕಂಪ್ಲೇಂಟ್ ಕೊಟ್ಟಿದ್ದು 11ನೇ ತಾರೀಖಿಗೆ ಅವರನ್ನು ಆರೆಸ್ಟ್ ಮಾಡಿದ್ದು 22ನೇ ತಾರೀಖಿಗೆ. ಅಂದರೆ ಹತ್ತು ದಿನಗಳ ಕಾಲ ಪೋಲೀಸರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅಂದಮೇಲೆ ವಶೀಲಿ-ಬಾಜಿ ಯಾರು ಮಾಡಿರಬೇಕು ಎಂಬುದು ಇಲ್ಲಿ ಪ್ರಶ್ನೆ. ಆದ್ದರಿಂದ ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಏನೆಂದರೆ, ಯಾರ್ಯಾರು ಪೋಲೀಸ್ ಹಿರಿಯ ಅಧಿಕಾರಿಗಳು, ಎಸ್‌ಪಿ. ಡಿಐಜಿ.ಯವರು ಈ ಹತ್ತು ದಿವಸಗಳ ಕಾಲ ಏನು ಮಾಡುತ್ತಿದ್ದರು ಎನ್ನುವ ವಿಷಯ ನಮಗೆ ಬೇಕು. ಇದನ್ನು ಸಂಪೂರ್ಣವಾಗಿ ಮಾನ್ಯ ಶ್ರೀ ರಾಚಯ್ಯನವರು ತನಿಖೆ ಮಾಡಬೇಕು. ಇವರು ಹತ್ತು ದಿವಸಗಳವರೆಗೆ ಈ ದೂರಿನ ಬಗ್ಗೆ ವಿಚಾರ ಮಾಡದೆ ಇರುವುದರಿಂದ ಇವರೂ ಕೂಡ ತಪ್ಪಿತಸ್ಥರಾಗುತ್ತಾರೆ. ಶ್ರೀ ರಾಚಯ್ಯನವರ ಸದ್ಭಾವನೆ ಬಗ್ಗೆ ಯಾರಿಗೂ ಅನುಮಾನ ಇಲ್ಲ. ಅವರು ಸತ್ಯವಂತರು ಇದ್ದಾರೆ, ಮಾಡುತ್ತಾರೆ ಎನ್ನುವ ನಂಬಿಕೆ ನಮಗಿದೆ. ಈಗ ಸುಪ್ರೀಂಕೋರ್ಟ್ ತೀರ್ಪು ಕೊಟ್ಟಿದೆ, ವಿಚಾರಣೆ ಇಲ್ಲದೆ ಯಾರನ್ನು ಬೇಕಾದರೂ ವಜಾ ಮಾಡಬಹುದು ಎಂದು. ದಯವಿಟ್ಟು ಸಣ್ಣವರಿಗೆ ಶಿಕ್ಷೆ ಮಾಡುವುದಕ್ಕೆ ಹೋಗಬೇಡಿ. ದೊಡ್ಡವರನ್ನು ಹಿಡಿದುಕೊಳ್ಳಬೇಕು. ಸಣ್ಣವರನ್ನು ಹಿಡಿದುಕೊಂಡರೆ ದೊಡ್ಡವರು ಅವರತ್ತ ಕೈತೋರಿಸಿ ತಪ್ಪಿಸಿಕೊಂಡು ಬಿಡುತ್ತಾರೆ. ಹತ್ತು ದಿವಸಗಳ ಕಾಲ ಏಕೆ ಗುಲ್ಬರ್ಗಾದಲ್ಲಿ ಇದ್ದ ಡಿಐಜಿ. ಮತ್ತು ಎಸ್‌ಪಿ.ಯವರು ತಕ್ಷಣವೇ ಕ್ರಮ ತೆಗೆದುಕೊಂಡಿಲ್ಲವೆಂದು ನಾನು ಹೇಳುತ್ತೇನೆ. ಈ ವಿಳಂಬಕ್ಕೆ ಯಾರ್ಯಾರು ಕಾರಣರಾಗಿದ್ದಾರೆ, ಅವರ ಬಗ್ಗೆ ಕ್ರಮ ತಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

* ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅ ಧ್ಯ ಕ್ಷ ರೇ, ಮಾನ್ಯ ಗೃಹ ಸಚಿವರ ಹೇಳಿಕೆಯಿಂದ ನಮಗೆ ತೀವ್ರವಾದಂಥ ನಿರಾಶೆಯಾಗಿದೆ. ಅಷ್ಟೇ ಅಲ್ಲ, ನಾವು ಯಾವ ಯಾವ ಶಂಕೆಗಳನ್ನು ಹಾಗೂ ಸಂದರ್ಭಗಳನ್ನು ಸೂಚ್ಯವಾಗಿ ತಿಳಿಸಿದ್ದೆವೋ, ಅದೆಲ್ಲಾ ನಿಜ ಎಂದು ತಪ್ಪನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ಅವರಿಂದ ಹೇಳಿಕೆ ಬಂದಿದೆ. ಈ ಸ್ವಾಮಿಗಳು ನಿರೀಕ್ಷಣಾ ಜಾಮೀನನ್ನು ಪಡೆಯುವುದಕ್ಕೆ ಮೊದಲೇ ಪೋಲೀಸ್ ಅಧಿಕಾರಿಗಳು ಅವರ ವಿರುದ್ಧ ಏತಕ್ಕೆ ಕ್ರಮ ಕೈಕೊಳ್ಳಲಿಲ್ಲ ? ಇಂತಹ ತಪ್ಪನ್ನು ಮಾಡಿದ ಪೋಲೀಸ್ ಅಧಿಕಾರಿಗಳನ್ನು ಇವೊತ್ತಿನವರೆಗೂ ಸಸ್ಪೆಂಡ್ ಮಾಡುವ ಧೈರ್ಯ ಇವರಿಗೆ ಬಂದಿಲ್ಲ. ಇಂತಹ ಒಂದು ಸನ್ನಿವೇಶದಲ್ಲಿ ಅಲ್ಲಿಗೆ ಈ ಸದನದ ಒಂದು ಸಮಿತಿಯನ್ನು ಕಳುಹಿಸಿ ಕೊಡುವುದರಲ್ಲಿ ಅರ್ಥವೇನಿದೆ ? ಒಂದು ವೇಳೆ ಸಮಿತಿಯ ಸದಸ್ಯರು ಅಲ್ಲಿಗೆ ಹೋದರೆ, ಅಲ್ಲಿನ ಜನರು ಇವರನ್ನು ಅಪರಾಧ ಸ್ವರೂಪದಲ್ಲಿ ನೋಡಬಹುದು. ಆದ ರಿಂದ ನಾವು ಅಲ್ಲಿಗೆ ಯಾವ ಪರಾಕ್ರಮ

ಹೊತ್ತುಕೊಂಡು ಹೋಗಬೇಕು ? ತಪ್ಪು ಮಾಡಿರುವಂತಹ ಅಲ್ಲಿನ ಸಬ್-ಇನ್ಸ್‌ಪೆಕ್ಟರ್‌ನ್ನು ಸಸ್ಪೆಂಡ್ ಮಾಡುವುದಕ್ಕೆ ನೀವು ಇನ್ನೂ ಮೀನಾಮೇಷ ಎಣಿಸುತ್ತಿದ್ದೀರಿ ? ಮಾನ್ಯ ಮಂತ್ರಿಗಳ ಪರಿಸ್ಥಿತಿಯನ್ನು ನೋಡಿ ನನಗೆ ಬಹಳ ಸಂಕಟವಾಗುತ್ತಿದೆ. ಅವರ ಒಂದು ಪ್ರಾಮಾಣಿಕತನದ ಬಗ್ಗೆ ನನಗೆ ಶಂಕೆಯಿಲ್ಲ. ಆದರೆ ಅವರು ಉತ್ತರ ಕೊಡುವಾಗ ಒಂದು ಮಾತನ್ನು ಹೇಳಿದರು, ಏನೆಂದರೆ, ಈ ಸ್ವಾಮಿಯ ಬಗ್ಗೆ ಏನೇ ಕ್ರಮ ತೆಗೆದುಕೊಳ್ಳಬೇಕಾದರೂ, ಅವರ ಹಿಂದೆ ಯಾರು ಯಾರು ಇದ್ದಾರೆ ಎಂಬುದನ್ನು ನೋಡಿ ಕೊಂಡು ಕ್ರಮ ತೆಗೆದುಕೊಳ್ಳಬೇಕಾಗಿದೆ. ಆದಕ್ಕಾಗಿ ಕ್ರಮ ತೆಗೆದುಕೊಳ್ಳುವುದು ತಡವಾಯಿತೆಂದು ಹೇಳಿದರು. ಆದ್ದರಿಂದ real truth has come out. It has come out by slip of tongue because he is an honest man. He is under pressure............

ಶ್ರೀ ಬಿ. ರಾಚಯ್ಯ.—ಯಾರಾ ಸಹ ನನ್ನ ಮೇಲೆ ಪ್ರಭಾವ ಬೀರಿಲ್ಲ. ನಾನು ಯಾರಿಗೂ ಈಲ್ಡ್ ಆಗಿಲ್ಲ. ಅಷ್ಟೇ ಅಲ್ಲ, ನಾನು ಈ ಸ್ವಾಮಿಯನ್ನೂ ಸಹ ನೋಡಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಇವರ ಮೇಲೆ ಸಾಕಷ್ಟು ಪ್ರೆಜರ್ ಬಂದಿದೆ ಎಂದು ನನಗೆ ಸ್ಪಷ್ಟ ವಾಗಿ ಕಾಣುತ್ತಿದೆ. ಅದಕ್ಕೆಲ್ಲಾ ಇವರು ಈಲ್ಡ್ ಆಗದಿದ್ದರೆ ತಮ್ಮ ಒಂದು ಪರಾಕ್ರಮವನ್ನು ತೋರಿಸಿ ಕೂಡಲೇ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಆದರೆ ಇವರು ತಮ್ಮ ಪರಾಕ್ರಮವನ್ನು ತೋರಿಸದಿರುವ ಕಾರಣದಿಂದ ನಮಗೆ ನಿರಾಶೆ ಆಗಿದೆ. ಶ್ರೀಮತಿ ಪಾರ್ವತಮ್ಮ ಅವರಿಗಿಂತ ನಿಮ್ಮನ್ನು ನೋಡಿದರೆ ನನಗೆ ಹೆಚ್ಚು ಸಂಕಟವಾಗುತ್ತದೆ. ಇಂತಹ ಒಂದು ಸರ್ಕಾರದ ಹೇಳಿಕೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ ಮತ್ತು ಇದರ ಬಗ್ಗೆ ನನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತೇನೆ. ಇದಕ್ಕಿಂತ ನಾನು ಹೆಚ್ಚು ಏನನ್ನೂ ಹೇಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಇನ್ನು ಹೆಚ್ಚು ಹೇಳುವುದಿಲ್ಲ. ಎಲ್ಲ ವನ್ನೂ ಶ್ರೀ ಕೆ. ಎಚ್. ಶ್ರೀನಿವಾಸ್ ಅವರೇ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಬಹಳ ಪ್ರಾಮಾಣಿಕ ರಾಗಿದ್ದಾರೆ. ಇವರ ಪ್ರಾಮಾಣಿಕತನ ಯಾವ ರೀತಿ ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ಊರಿನಲ್ಲಿ ಒಬ್ಬರು ಪಂಚಾಯಿತಿ ಚೇರ್‌ಮನ್ ಇದ್ದರು. ಆ ಪಂಚಾಯಿತಿ ಫಂಡ್‌ನಲ್ಲಿದ್ದ ಇನ್ನೂರು ರೂಪಾಯಿಗಳನ್ನು ಯಾವ ಅಭಿವೃದ್ಧಿ ಕಾರ್ಯಗಳಿಗೂ ಖರ್ಚು ಮಾಡದೆ ಹಾಗೆಯೇ ಇಟ್ಟಿದ್ದು, ಚುನಾವಣೆ ಸಂದರ್ಭದಲ್ಲಿ ಜನರ ಹತ್ತಿರ ಹೋಗಿ ನಾನು 200 ರೂಪಾಯಿಗಳನ್ನು ಹಾಗೆಯೇ ಇಟ್ಟಿದ್ದೇವೆ, ಅದನ್ನು ದುರುಪಯೋಗ ಮಾಡಿಲ್ಲ, ಆದ್ದರಿಂದ ನನಗೇ ಓಟು ಕೊಡಿ ಎಂದು ಕೇಳುತ್ತಿದ್ದರು. ಈಗ ಅವರಿಲ್ಲ ; ಸತ್ತು ಹೋದರು. ಅವರು ಒಂದೂ ಕೆಲಸ ಮಾಡದೆ ಸುಮ್ಮನೆ ಹಣ ಇಟ್ಟುಕೊಂಡು ಕುಳಿತಿರುತ್ತಿದ್ದರು. ಅದೇ ರೀತಿ ಇವರೂ ಸಹ ಬಹಳ ಪ್ರಾಮಾಣಿಕರಾಗಿದ್ದರೂ ಸಹ ಈ ಪ್ರಕರಣದಲ್ಲಿ ಯಾವುದೇ ಕಾರ್ಯಕ್ರಮವನ್ನು ಇನ್ನೂ ತೆಗೆದುಕೊಂಡಿಲ್ಲ, ಏತಕ್ಕೆ ಎಂದು ನನಗೆ ಅರ್ಥವಾಗಿಲ್ಲ ? ಇವರ ಒಂದು ಪ್ರಾಮಾಣಿಕತನ ಯಾವ ರೀತಿ ಇರಬೇಕೆಂದರೆ, ಆಡಳಿತದಲ್ಲಿ ತಪ್ಪು ಕಂಡಕೂಡಲೇ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದರ ಮೂಲಕ ತಮ್ಮ ಪ್ರಾಮಾಣಿಕತನ ವನ್ನು ದೇಶದ ಜನತೆಗೆ ತೋರಿಸಬೇಕು. ಇಲ್ಲದಿದ್ದರೆ ನಮ್ಮ ಊರಿನ ಹಳೆಯ ಚೇರ್‌ಮನ್ ತರಹ ಇವರೂ ಇದ್ದಾರೆಂದು ಹೇಳಬೇಕಾಗುತ್ತದೆ. ಈ ಪ್ರಕರಣದಲ್ಲಿ ತಪ್ಪು ಮಾಡಿದ ಅಧಿಕಾರಿಗಳನ್ನು ಕೂಡಲೇ ಸಸ್ಪೆಂಡ್ ಮಾಡಬೇಕಾಗಿತ್ತು. ಸಸ್ಪೆಂಡ್ ಮಾಡದೆ ಈ ಸದನದ ಸಮಿತಿ ಅಲ್ಲಿಗೆ ಏನಾದರೂ ಹೋದರೆ ಅಲ್ಲಿನ ಜನರು ಪೋಲೀಸರಿಗೆ ಹೆದರಿಕೊಂಡು ಯಾರೂ ಸಹ ಸಾಕ್ಷಿ ಹೇಳಲು ಮುಂದೆ ಬರುವು ದಿಲ್ಲ. ಪೋಲೀಸನ್ನು ನೋಡಿದರೆ ಸಾಕು, ಜನರಿಗೆ ಹೆದರಿಕೆ ಬರುತ್ತದೆ. ಆದ್ದರಿಂದ ತಪ್ಪು ಮಾಡಿದ ಪೋಲೀಸರನ್ನು ಅಲ್ಲಿಯೇ ಇಟ್ಟು, ಅಲ್ಲಿಗೆ ಹತ್ತು ಸಮಿತಿಗಳನ್ನು ಕಳುಹಿಸಿಕೊಟ್ಟರೂ ಸಹ ಏನೇನೂ ಉಪಯೋಗವಾಗುವುದಿಲ್ಲ. ಆದ್ದರಿಂದ ನಿಮ್ಮ ಒಂದು ಪ್ರಾಮಾಣಿಕತನವನ್ನು ಆಡಳಿತದಲ್ಲಿ ತೋರಿಸ ಬೇಕು. ತಪ್ಪು ಮಾಡಿದವರನ್ನು ಕೂಡಲೇ ಸಸ್ಪೆಂಡ್ ಮಾಡಿ. ಇಲ್ಲಿ ನೀವು ಸುಮ್ಮನೆ ಮೊಸಳೆ ಕಣ್ಣೀರು ಸುರಿಸಬಹುದು. ಆದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ ? ಈ ಪ್ರಕರಣ ನಡೆದು ಹತ್ತು ದಿನಗಳ ಕಾಲ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳದೆ ಸುಮ್ಮನಿದ್ದುದು ನಿಮ್ಮ ಪ್ರಾಮಾಣಿಕ ತನದ ಒಳ್ಳೆಯ ಲಕ್ಷಣವಲ್ಲ. ನಿಮ್ಮಲ್ಲಿ ಒಳ್ಳೆಯ ಪ್ರಾಮಾಣಿಕತನವಿದ್ದರೆ ಕೂಡಲೇ ತಪ್ಪು ಮಾಡಿದವರನ್ನು ಸಸ್ಪೆಂಡ್ ಮಾಡಿ. ಅವರನ್ನು ವಿಚಾರಣೆಗೆ ಗುರಿಪಡಿಸಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ನೀವು ನಿಮ್ಮ ಕಛೇರಿಯಲ್ಲಿ ಕುಳಿತು ಒಬ್ಬರೇ ಯೋಚನೆಮಾಡಿ. ನೀವು ಸದನದ ಸಮಿತಿ ಕಳುಹಿಸಿದರೂ ಸಹ ಯಾರೂ ಹೇಳಿಕೆ ಕೊಡಲು ಮುಂದೆ ಬರುವುದಿಲ್ಲ ಮತ್ತು ಸಿ.ಓ.ಡಿ.ನವರು ಸಹ ಅವರ ಮುಂದೆ ಯಾರೂ ಹೇಳಿಕೆ ಕೊಡುವುದಿಲ್ಲ. ಆದ್ದರಿಂದ ನೀವು ಇಲ್ಲಿಯವರೆಗೆ ನಡೆದುಕೊಂಡ

ರೀತಿ ಸರಿಯೇ ಅಥವಾ ತಪ್ಪೇ ಎಂದು ನೀವೇ ಯೋಚನೆ ಮಾಡಿ ನೋಡಿ. ಇದಕ್ಕೆ ನನಗೆ ನಿಮ್ಮ ಉತ್ತರ ಏನೂ ಬೇಡ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಕೂಡಲೇ ಸಸ್ಪೆಂಡ್ ಮಾಡಬೇಕಾಗಿತ್ತು, ತಡವಾಗಿದೆ ಎಂದು ಹೇಳಿದರು. ಈಗಾಗಲೇ ಸಸ್ಪೆಂಡ್ ಮಾಡುತ್ತೇವೆಂದು ಹೇಳಿದ್ದೇನೆ. ನಾಳೆಯೇ ಅವರನ್ನು ಸಸ್ಪೆಂಡ್ ಮಾಡಲಾಗುತ್ತದೆ. ಇದರಲ್ಲಿ ಯಾರು ಯಾರು ತಪ್ಪಿತಸ್ಥರಿದ್ದಾರೆಂಬುದನ್ನು ಕಂಡುಹಿಡಿಯಬೇಕಾಗಿದ್ದರಿಂದ ಕ್ರಮ ತೆಗೆದುಕೊಳ್ಳುವುದರಲ್ಲಿ ಸ್ವಲ್ಪ ತಡವಾಯಿತು. ಈ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದೆಲ್ಲವನ್ನೂ ತೆಗೆದುಕೊಳ್ಳುತ್ತೇವೆ. ನನ್ನ ಮೇಲೆ ನೀವು ನಂಬಿಕೆ ಇಡಿ. ಸ್ವಾಮಿಗಳನ್ನು ಒಳಗೆ ಹಾಕಿ ಎಂದು ಹೇಳಿದರು. ಆದರೆ ನಾವು ಕೂಡಲೇ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಇದನ್ನು ನಾವು ಕಾನೂನು ಪ್ರಕಾರ ನೋಡಬೇಕಾಗುತ್ತದೆ.

ಅಧ್ಯಕ್ಷರು.—ಈ ವಿಷಯದ ಮೇಲಿನ ಚರ್ಚೆ ಮತ್ತು ಉತ್ತರ ಮುಕ್ತಾಯವಾಯಿತು. ಇಂದಿನ ಸಭೆ ಇಲ್ಲಿಗೆ ಮುಕ್ತಾಯವಾಯಿತು. ಪುನ: ನಾಳೆ ಬೆಳಿಗ್ಗೆ 11 ಗಂಟೆಗೆ ಸಭೆ ಸೇರುತ್ತದೆ,

(ಸಭೆಯು ಸಂಜೆ 7 ಗಂಟೆ 45 ನಿಮಿಷಗಳಿಗೆ ಮುಕ್ತಾಯವಾಗಿ, ಪುನ: ದಿನಾಂಕ 26ನೇ ಜುಲೈ 1985ನೇ ಶುಕ್ರವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಲಾಯಿತು).

ANNEXURE

(L.A. Bill No. 21 of 1985)

A Bill to amend ,he Karnataka Legal Aid Board Act, 1981.

Whereas it is expedient to amend the Karnataka Legal Aid Board Act, 1981 (Karnataka Act, 32 of 1981) for the purposes hereinafter appearing ;

Be it enacted by the Karnataka State Legislature in the Thirty-sixth Year of tho Republic of India as follows :—

1. Short title and commencement.—(i) This act may be called the Karnataka Legal Aid Board (Amendment) Act, 1985.

(2) It shall be deemed to have come into force from the 26th day of April, 1985.

2. Amendment of section 2.—In section 2 of the Karnataka Legal Aid Board Act, 1981 (Karnataka Act 32 of 1981) (hereinafter refer,ed to as the principal Act).—

(a) in clause (4), in sub-clause (c), for the word "documents" the words "petitions and other documents" shall be substituted ;

(b) after clause (5), the following clause shall be inserted namely :—
"(5a) 'legal proceedings' includes proceedings before a quasi-judicial or an administrative authority".

(c) in clause (6), after the word "writing", the following shall be inserted, namely :—

* ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷರಿಸಿಲ್ಲ ಎಂದು ಸೂಚಿಸುತ್ತದೆ.